

# ಕಲ್ಯಾಣ ಕಿರಣ



ಸೆಪ್ಟೆಂಬರ್ - 2009

ಬೆಲೆ:10.ರೂ













ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಬಸವ ತತ್ವ ಬೋಧನೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-39 ಬಸವ ಶಕೆ -876 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-9 ಸೆಪ್ಟೆಂಬರ್- 2009 ವಾರ್ಷಿಕ ಚಂದಾ 100/- ರೂ.

## ಮಹಾಮನೆಯ ವೈಶಿಷ್ಟ್ಯ

ಬನ್ನಿ ಮಹಾಮನೆಯು ಕೈ ಬೀಸಿ ಕರೆಯುತಿದೆ
ಬಸವ ಸಂತಾನಕೆ ತಾಯ್ಮನೆಯ ನೀಡುತಿದೆ ॥ ಪ ॥
ಮಹಾಮನೆಯ ಭಕ್ತಿಸಿರಿ ಅನುಭವ ಮಂಟಪ
ಈ ಜಗದ ಐಸಿರಿ ಅರಿಯಿರಿ ನೀವೆಲ್ಲ ॥ ಅ. ಪ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮಣ್ಣ ಚಿನ್ಮಯ ಚನ್ನಬಸವಣ್ಣ
ನಮ್ಮ ದೊಡ್ಡಪ್ಪ ಅಲ್ಲಮಪ್ರಭುರಾಯ
ಪ್ರೇಮದ ಚಿಕ್ಕಪ್ಪ ಸಿದ್ಧರಾಮ ॥ 1 ॥

ಅಕ್ಕಮಹಾದೇವಿ ಪ್ರೇಮದ ಸೋದರಿ
ಚೊಕ್ಕ ಮಡಿವಾಳಯ್ಯ ಅಕ್ಕರೆಯ ಮಾವ
ಹರಳಯ್ಯ -ಮಧುವಯ್ಯ -ಮೋಳಿಗೆಯ ಮಾರಯ್ಯ ಈ
ಶರಣರೆಮ್ಮಯ ಬಂಧು ಬಳಗ ॥ 2 ॥

ಇಂಥ ಮಹಾಮನೆಯು ಜಗದೊಳೆಲ್ಲೂ ಇಲ್ಲ
ಅಂತೆಲ್ಲ ಧರ್ಮಗಳಲಿ ತಂದೆಯರು ಮಾತ್ರ
ಒಬ್ಬ ಗುರುವಿಗೆ ಅಲ್ಲಿ ಕೆಲವು ಶಿಷ್ಯಂದಿರು
ಬಸವ ಸೂರ್ಯನ ಸುತ್ತ ಶರಣ ಸಂದೋಹ ॥ 3 ॥

ಕಲ್ಯಾಣ ಮಹಾಮನೆಯು ಮರುಹುಟ್ಟು ಪಡೆದಿಹುದು
ಕೂಡಲ ಸಂಗಮದಿ ತಲೆ ಎತ್ತಿ ನಿಂತಿಹುದು
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ವಿಶ್ವ ಪ್ರೇಮ ಸಾರುತಿಹುದು ॥ 4 ॥

ಹುಟ್ಟಿನಿಂದಲಿ ನೀವು ಏನೇ ಇರಬಹುದು
ಸದ್ಯದ ಗುಣದಲಿ ಹೇಗೇ ಇರಬಹುದು
ಶರಣ ಮೇಳಕೆ ಬರಲು ಪರುಷದ ಸ್ಪರ್ಶ
ಅರಿವಿನ ಹೊನಲಿನಲಿ ಹೊಂದುವಿರಿ ಹರ್ಷ ॥ 5 ॥

ಕೂಡಲ ಸಂಗಮ ಧರ್ಮ ಕ್ಷೇತ್ರದಲ್ಲಿ
ನಡೆಯುತಿಹ ಮೇಳವು ತೌರಿನ ಹಬ್ಬ
ಬಸವ ಕಲ್ಯಾಣದಿ ಶರಣರನು ಸೇರಿಸಿ
ಕಲ್ಯಾಣ ಪರ್ವವು ತರುತಿದೆ ಉಬ್ಬ ॥ 6 ॥

ಮಹಾಮನೆಯ ಐಸಿರಿಯ ನೋಡಲು ಬನ್ನಿ
ವಚನಾಮೃತದ ಬುತ್ತಿಯ ಉಣ್ಣಲು ಬನ್ನಿ
ತತ್ವದ ಜ್ಯೋತಿಗಳು ಬೆಳಗುತಿಹವಿಲ್ಲಿ
ಸಚ್ಚಿದಾನಂದನ ಒಲುಮೆ ಪಡೆಯಲು ಬನ್ನಿ ॥ 7 ॥

- ಮಾತಾಜಿ

## ★ ಕಲ್ಯಾಣ ಕಿರಣ ★

ಕಿರಣಗನ್ನಡಿ


| ಲೇಖನಗಳು | ಲೇಖಕರು | ಪುಟ |
|---|---|---|
| 1. ಮಹಾಮನೆಯ ವೈಶಿಷ್ಟ್ಯ (ಕವನ) | ಮಾತಾಜಿ | 1 |
| 2. ಬಸವ ಕಲ್ಯಾಣದಲ್ಲಿ 8ನೆಯ ಕಲ್ಯಾಣ ಪರ್ವ | | 3 |
| 3. ಸಂಪಾದಕೀಯ : | ಮಾತಾಜಿ | |
| 1. ಭದ್ರತಾ ವ್ಯವಸ್ಥೆ ಹಿಂತಿರುಗಿಸಲು ಮನವಿ | | 5 |
| 2. ಮಕ್ಕಳೆಷ್ಟಿರಬೇಕು ? | | 5 |
| 3. ಶರಣ ಸತಿ - ಲಿಂಗ ಪತಿ | | 6 |
| 4. ಲಿಂಗಾಯತ -ವೀರಶೈವ ಧ್ರುವೀಕರಣ | | 7 |
| 4. ಬಸವ ವಚನಾಮೃತ ಭಾಗ - 15 | ಮಾತಾಜಿ | 9 |
| 5. ವಿಶ್ವಧರ್ಮ ಪ್ರವಚನಗಳು | | 25 |
| 6. ಲಿಂಗಾಯತದ ಮೂಲಧಾರೆ ಹಿಡಿದು | ಟಿ.ಆರ್.ಚಂದ್ರಶೇಖರ್ | 26 |
| 7. ಶರಣರಿಗೆ ಶರಣಾರ್ಥಿ | | 29 |
| 8. ಶ್ರಾವಣ ಮಾಸದ ಬಸವ ಜ್ಯೋತಿಯ ದಿವ್ಯಪ್ರಭೆ | | 45 |
| 9. ಉಚಿತ ನೇತ್ರ ತಪಾಸಣಾ ಶಿಬಿರ | ಲೀಲಾವತಿ ನಾಡಗೌಡ | 45 |
| 10. ಕೇಂದ್ರ ಕಾರಾಗೃಹ ಸಂದರ್ಶನ | - | 46 |


ಮುಖಪುಟ : ಸಂಕೇಶ್ವರದ ನಗರದಲ್ಲಿ ಪೂಜ್ಯ ಮಾತಾದ್ವಯರ ಭವ್ಯ ಮೆರವಣಿಗೆಯಲ್ಲಿ ಶರಣ ಸಮೂಹ

4ನೇ ಪುಟ : ಮೇಲಿನದು - ಧಾರವಾಡದಲ್ಲಿ ನಡೆದ ಬಸವ ಜ್ಯೋತಿ ಸಮಾರೋಪ ಸಮಾರಂಭ

ಕೆಳಗಿನದು : ಸಂಕೇಶ್ವರದಲ್ಲಿ ನಡೆದ ರಾ.ಬ.ದಳಗಳ ಸಮಾವೇಶದಲ್ಲಿ ಸಾಮೂಹಿಕ ಪ್ರಾರ್ಥನೆ.

2ನೇ ಪುಟ : ಜಹಿರಾಬಾದಿನಲ್ಲಿ ಪೂಜ್ಯ ಗಂಗಾಮಾತಾಜಿಗೆ ಗೌರವಾರ್ಪಣೆ.

3ನೇ ಪುಟ : ಹುಬ್ಬಳ್ಳಿಯ ಬಸವ ಮಂಟಪದಲ್ಲಿ ಬಸವಜ್ಯೋತಿ ಸಮಾರೋಪ ಸಮಾರಂಭ.

ಕೆಳಗಿನದು : ಬೆಳಗಾವಿಯ ಕೆ.ಎಲ್.ಇ. ಸೊಸೈಟಿಯ ನಿರ್ದೇಶಕ ಮಂಡಳಿಯೊಡನೆ ಬೆಳಗಾವಿ ರಾ.ಬ.ದಳದ ದೇಹದಾನಿಗಳು.


**Kalyana Kirana** -Reg No.19988/70, Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9036351066, 9620058492






ಓಂ ಶ್ರೀ ಗುರು ಬಸವಲಿಂಗಾಯ ನಮಃ

866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ
ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಎಂಟನೆಯ

## ಕಲ್ಯಾಣ ಪರ್ವ

2009ರ ಅಕ್ಟೋಬರ್ 2, 3 ಮತ್ತು 4 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 22ನೆಯ ಶರಣ ಮೇಳವು ಇದೇ 2009ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ" ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2007ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 8ನೆಯ ಕಲ್ಯಾಣ ಪರ್ವವನ್ನು 2009 ರ ಅಕ್ಟೋಬರ್ 2, 3 ಮತ್ತು 4 ರಂದು ಏರ್ಪಡಿಸಲಾಗುತ್ತಿದೆ.

### ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು

ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು" ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 1ರ ರಾತ್ರಿಯಿಂದ ಅಕ್ಟೋಬರ್ 5 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ) ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ 5. ಸ್ವಾಗತ ಸಮಿತಿ ಸದಸ್ಯತ್ವ : 300 ರೂ
6. ಪ್ರತಿನಿಧಿ ಶುಲ್ಕ : 150 ರೂ.

ಒಂದೊಂದು ಹೊತ್ತಿನ ದಾಸೋಹ ವೆಚ್ಚ ಸಹ ಕೊಡಬಹುದು.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F. D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

### ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 12ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ
ಬಸವ ಮಹಾಮನೆ, ಬಸವ ಕಲ್ಯಾಣ -585327, ಜಿಲ್ಲೆ-ಬೀದರ್
☎:08481 -251921/252856



ಸಂಪಾದಕೀಯ : - ಮಾತಾಜಿ

## 1. ಭದ್ರತಾ ವ್ಯವಸ್ಥೆ ಹಿಂತಿರುಗಿಸಲು ಮನವಿ

ಸರ್ವ ಧರ್ಮ ಗುರುಗಳ ಒಂದು ಸಮಾವೇಶಕ್ಕೆ ಹೋಗಿದ್ದೆ. ದಿಗಂಬರ, ಶ್ವೇತಾಂಬರ ಜೈನ ಮುನಿಗಳೇ ಅಲ್ಲದೆ ಇನ್ನೂ ಅನೇಕರು ಆಗಮಿಸಿದರು. ಆಗ ಓರ್ವ ದೊಡ್ಡ ಗುರುಗಳ ಆಗಮನವೂ ಆಯಿತು. ಅವರ ಮುಂದೆ ಹಿಂದೆ ಕಮ್ಯಾಂಡೋಗಳು, ಪೋಲೀಸ್ ಪಡೆ, ವಿಶೇಷ ಭದ್ರತೆ ನೋಡಿ ಬೆಕ್ಕಸ ಬೆರಗಾದೆ. ಕಾಲ ಹೇಗೆ ಬಂದಿತಲ್ಲಾ ದೇವರೆ! ಆತ್ಮಬಲವೇ ಶಸ್ತ್ರವಾಗಬೇಕಾದ ಸನ್ಯಾಸಿಗೆ ಸರ್ಕಾರದ ಭದ್ರತಾ ವ್ಯವಸ್ಥೆ. ಇದನ್ನು ಒಂದು ವಿಶೇಷ ಗೌರವ ಎಂದುಕೊಳ್ಳಬೇಕೋ ಅಥವಾ ದೌರ್ಬಲ್ಯ ಎಂದುಕೊಳ್ಳಬೇಕೋ !

ಕರ್ನಾಟಕ ಸರ್ಕಾರ ಕೆಲವು ಜನ ಮಠಾಧೀಶರಿಗೆ ವಿಶೇಷವಾದ ಭದ್ರತಾ ವ್ಯವಸ್ಥೆಯನ್ನು ನೀಡಲು ಆಯ್ಕೆ ಮಾಡಿದೆಯಂತೆ. ಅದೇನು ಅವರಿಗೆ ಜೀವ ಭಯ ಇದೆ ಎಂದೋ ಅವರು ಅತಿ ಜನಪ್ರಿಯರೆಂದೋ, ಅಥವಾ ಅಪ್ರಿಯರಾಗಿ ಯಾರಾದರೂ ಗೂಂಡಾಗಳಿಂದ ಜೀವ ಬೆದರಿಕೆ ಎದುರಿಸುತ್ತಿದ್ದಾರೆಂದೋ? ಇದು ಸನ್ಯಾಸಿ ವೃಂದಕ್ಕೆ ಮೂದಲಿಸುವಂತಹ ಕೃತಿಯಾಗದೆ? ಲೋಕೋಪಕಾರಿಯಾದ ಸನ್ಯಾಸಿ, ಸ್ವಾಮಿಗಳಿಗೆ ಜೀವಭಯವೆ? ಅಂಥ ಬೆದರಿಕೆ ಇದೆ ಎಂದು ಸರ್ಕಾರ ಭದ್ರತೆ ಒದಗಿಸುವ ವ್ಯವಸ್ಥೆ ಮಾಡಿದರೆ ಆ ಮಹಾನುಭಾವರ ಘನ ವ್ಯಕ್ತಿತ್ವಕ್ಕೆ ಅವಮಾನ ಮಾಡಿದಂತಲ್ಲವೆ? ಸರ್ಕಾರದ ವತಿಯಿಂದಲೇ ಇಂಥ ಏರ್ಪಾಟು ನಡೆದಿದ್ದರೆ ಅದು ಆ ಮಹಾನುಭಾವರ ಕೀರ್ತಿಗೆ ಕಲಂಕ ತಂದಂತೆ! ಅವರುಗಳೇ ಸರ್ಕಾರದ ಮುಂದೆ ಭದ್ರತೆಗಾಗಿ ಬೇಡಿಕೆ ಇಟ್ಟಿದ್ದರೆ ಅದು ಅವರ ದೌರ್ಬಲ್ಯವನ್ನು ಪ್ರಕಟಿಸಿದಂತೆ.

ಸರ್ಕಾರ ಭದ್ರತೆ ನೀಡಲು ವ್ಯವಸ್ಥೆ ಮಾಡಿರುವುದು ಚಿಕ್ಕಪುಟ್ಟ ಸ್ವಾಮಿಗಳಿಗಲ್ಲ, ಲಕ್ಷಾಧೀಶ್ವರ ಮಠಾಧೀಶರಿಗಲ್ಲ, ಕೋಟ್ಯಾಧೀಶ, ಅರ್ಬುದಾಧೀಶರಿಗೆ; ಸಹಸ್ರಾರು ನೌಕರರಿಗೆ ನೌಕರಿ ಕೊಟ್ಟು ಸಾಕುತ್ತಿರುವ ಪುಣ್ಯಾತ್ಮರಿಗೆ. ಅಂಥವರ ಭದ್ರತೆಗಾಗಿ ಸರ್ಕಾರದ ಹಣ ಏಕೆ ಖರ್ಚಾಗಬೇಕು? ಮನುಷ್ಯ ಜೀವಿಗಳಾದ ಅವರಿಗೆ ಜೀವಭಯ ಇದ್ದಿರಬಹುದು ಎಂದುಕೊಂಡರೂ ಅವರು ಖಾಸಗಿಯಾಗಿ ತಮ್ಮ ಭದ್ರತಾ ವ್ಯವಸ್ಥೆ ಮಾಡಿಕೊಳ್ಳುವಷ್ಟು ಸಮರ್ಥರು. ಸಮವಸ್ತ್ರದ ಬಂದೂಕುಧಾರಿ ಸರ್ಕಾರಿ ಕಮ್ಯಾಂಡೊಗಳ ಬದಲಿಗೆ ತಮ್ಮ ವಿಶ್ವಾಸಿಕರನ್ನು ಮುಷ್ಟಿಯಲ್ಲಿಟ್ಟುಕೊಂಡು ಅಡ್ಡಾಡಿದರೆ ಭಕ್ತಿಜೀವಿಗಳಿಗೆ, ದೇವರನ್ನು ನಂಬಿದವರಿಗೆ ಮುಜುಗರವಾಗುವುದಿಲ್ಲ. ಇಲ್ಲವಾದರೆ ಧರ್ಮದ ಬಗ್ಗೆ, ದೇವರ ಬಗ್ಗೆ, ಮೌಲ್ಯಗಳ ಬಗ್ಗೆ ನಂಬಿಕೆಯು ಶಿಥಿಲಗೊಳ್ಳುವುದು. ಗುರುಗಳು ಬಂದಾಗ ಭಕ್ತಿಭಾವನೆ ಹರಡುವ ಬದಲು, ಅವರ ಬಗ್ಗೆ ಗೌರವ ಭಾವನೆ ಉಂಟಾಗುವ ಬದಲು ಭಯದ ವಾತಾವರಣ ಹರಡುವುದು.

ಆದ್ದರಿಂದ ದೊಡ್ಡವರಾದ ಗುರುಗಳಲ್ಲಿ ನಮ್ಮ ಕಳಕಳಿ ಮನವಿ ಏನೆಂದರೆ - "ಜನ ಹಿತಕ್ಕೆ ಬಳಕೆಯಾಗಬೇಕಾದ ಸರ್ಕಾರದ ಹಣದ ಋಣದಲ್ಲಿ ತಮ್ಮಂತಹ ದೊಡ್ಡವರು ಬೀಳುವುದು ಬೇಡ. ಗುರುಗಳ ಬಗೆಗಿನ ಅಪಾರ ಗೌರವದಿಂದ ಶಿಷ್ಯರಾಗಿ ಮುಖ್ಯಮಂತ್ರಿ ಸನ್ಮಾನ್ಯ ಯಡೆಯೂರಪ್ಪನವರು, ಗೃಹ ಸಚಿವ ಆಚಾರ್ಯರವರು ತಮಗೆ ಭದ್ರತಾ ವ್ಯವಸ್ಥೆಯನ್ನು ಸರ್ಕಾರದ ವೆಚ್ಚದಲ್ಲಿ ಮಾಡಿದ್ದರೂ ಅದನ್ನು ನಯವಾಗಿ ನಿರಾಕರಿಸಿ ಭಕ್ತರ ದೃಷ್ಟಿಯಲ್ಲಿ ದೊಡ್ಡತನವನ್ನು ಪ್ರದರ್ಶಿಸಬೇಕು. ಅಗತ್ಯವೆನಿಸಿದರೆ ಮಠದ ವತಿಯಿಂದಲೇ ಭದ್ರತಾ ವ್ಯವಸ್ಥೆಯನ್ನು ಭಕ್ತರ ಕಣ್ಣಿಗೆ ಬಹಿರಂಗದಲ್ಲಿ ಕಾಣದಂತೆ ಮಾಡಿಕೊಂಡು ಪ್ರಜೆಗಳ ಋಣದಿಂದ ಮುಕ್ತರಾಗಬೇಕು."

## 2. ಮಕ್ಕಳೆಷ್ಟಿರಬೇಕು?

ವಿದ್ಯಾವಂತರು ಬರುಬರುತ್ತಾ ಒಂದು ಕುಟುಂಬಕ್ಕೆ ಒಂದೇ ಮಗು ಸಾಕು ಎನ್ನುವ ನಿರ್ಧಾರ ತಳೆದು, ಒಂದು ಮಗುವಾಗುತ್ತಿದ್ದಂತೆಯೇ ನಂತರ ಮಕ್ಕಳು ಆಗದಂತೆ ಎಚ್ಚರ ವಹಿಸುತ್ತಾರೆ. ಇನ್ನೂ ಹೆಚ್ಚಿನ ಬುದ್ಧಿವಂತರು ಮಕ್ಕಳನ್ನು ಹೆರುವ ಸಾಕುವ ಜಂಜಾಟವೆ ಬೇಡ, ಇರುವ ತನಕ ಗಂಡ ಹೆಂಡತಿ ಸುಖವಾಗಿ ಜಂ ಅಂತ ಇದ್ದರೆ ಸಾಕು. ಹೆತ್ತು ಹೊತ್ತು ಸಾಕಿದರೆ ಆ ಮಕ್ಕಳು ಮಾಡುವ ಸೇವೆಯಾದರೂ ಅಷ್ಟಕಷ್ಟೆ ಎಂದು ಯೌವ್ವನವನ್ನು ಹಾಯಾಗಿ ಕಳೆಯಬಯಸುತ್ತಾರೆ. ಇದು ಒಂದು ಬಗೆಯ ಬೇಜವಾಬ್ದಾರಿತನ. ಒಂದು ಮಗುವು ಸಾಕು ಎನ್ನುವವರ ಸಮಸ್ಯೆ ಏನೆಂದರೆ, "ಈ ಕಾಲದಲ್ಲಿ ಶಿಕ್ಷಣ ಕೊಡಿಸುವುದು ಬಹಳ ವೆಚ್ಚದಾಯಕ. ಶಾಲೆಯ ಪ್ರವೇಶಗಿಟ್ಟಿಸುವುದು ಒಂದು

ಶ್ರಮದ ಕೆಲಸವಾದರೆ ನಂತರ ಮಕ್ಕಳು ಒಂದು ಹಂತ ತಲುಪುವವರೆಗೆ ಮಾಡಬೇಕಾದ ಖರ್ಚು
ಅಗಾಧ. ಒಂದು ಮಗುವನ್ನಾದರೂ ಸರಿಯಾಗಿ ಓದಿಸಿ, ಬೆಳೆಸೋಣ."
ಹೀಗೆ ಯಾವುದಾದರೊಂದು ಕಾರಣಕ್ಕೆ ಒಂದೇ ಮಗುವಿಗೆ ಸೀಮಿತಗೊಳಿಸಿಕೊಳ್ಳುವವರ
ಚಿಂತನೆ ಇದ್ದರೆ "ಮಕ್ಕಳೇ ಮನೆಯ ಸಂಪತ್ತು(ದೇಶದ ಆಡಳಿತದ ನಿರ್ಧಾರಕರೂ ಕೂಡ)" ಎಂದು ಆಲೋಚಿಸುವವರ ವಿಚಾರಧಾರೆ ಬೇರೆ ರೀತಿಯದು. ಇಸ್ಲಾಂ ಧರ್ಮೀಯರು ತಮ್ಮ ಧಾರ್ಮಿಕ ಕಾನೂನನ್ನು ಮುಂದಿಟ್ಟುಕೊಂಡು ಎರಡು - ಮೂರು ಜನ ಪತ್ನಿಯರನ್ನು ಹೊಂದಿ ಹತ್ತಿಪ್ಪತ್ತು ಮಕ್ಕಳನ್ನು ಹೊಂದುವವರು ಚಿಂತಿಸುವುದು ಹೇಗೆಂದರೆ, "ಇದು ಪ್ರಜಾಪ್ರಭುತ್ವದ ದೇಶ. ಇಲ್ಲಿ ಜನಾಭಿಪ್ರಾಯ ಮುಖ್ಯ, ತಲೆ ಎಣಿಕೆಗೆ ಪ್ರಾಮುಖ್ಯತೆ. ಆದ್ದರಿಂದ ಹೇಗೋ ಮಕ್ಕಳು ಸರ್ಕಾರಿ (ಉರ್ದು)ಶಾಲೆಯಲ್ಲಿ ಓದಿ, ಉಪವಾಸ ವನವಾಸದಲ್ಲೋ ಬದುಕಿ ಜನಸಂಖ್ಯೆ ಬೆಳೆದರೆ ಮುಂದೆ ಮತದಾನ ನಮ್ಮ ಸ್ವತ್ತಾಗುತ್ತದೆ ಮಾತ್ರವಲ್ಲ ದೇಶದ ಆಡಳಿತದ ಚುಕ್ಕಾಣಿ ಹಿಡಿಯುವವರೇ ನಾವಾಗುತ್ತೇವೆ."

ಒಂದು ಕಡೆ ವಿಪರೀತ ಮಕ್ಕಳನ್ನು ಹೆರುವ ಮೂಲಕ ಪ್ರಜ್ಞಾಪೂರ್ವಕವಾಗಿ ಅನೇಕ ಮುಸ್ಲೀಮರು ತಮ್ಮ ಸಂಖ್ಯೆ ಬೆಳೆಸಿದರೆ ಇನ್ನು ಮುಲ್ಲಾಗಳು ಮತಾಂತರದ ಮೂಲಕ ಜನ ಸಂಖ್ಯೆಯನ್ನು ಬೆಳೆಸುತ್ತಿರುವರು. ದಿನ ದಿನಕ್ಕೂ ಹಳ್ಳಿ ಪಟ್ಟಣಗಳಲ್ಲಿ ತಲೆ ಎತ್ತುತ್ತಿರುವ ಬೃಹತ್ ಮಸೀದಿಗಳು ಮತ್ತು ಮದರಸಾಗಳನ್ನು ನೋಡಿದರೆ ಇದರ ಸತ್ಯಾಸತ್ಯತೆ ಅರ್ಥವಾಗುವುದು. ಹಿಂದುಗಳು ಮತ್ತೆ ಲಿಂಗಾಯತರಲ್ಲಿರುವ ವಿದ್ಯಾವಂತರು ನೋಡಿದರೆ ಒಂದು ಮಗು ಸಾಕು ಎನ್ನುವ ಘೋಷಣೆ ಹೊಂದಿರುವುದರ ಪರಿಣಾಮ ಜನಸಂಖ್ಯೆಯ ಕುಸಿತಕ್ಕೆ ಕಾರಣವಾಗುವುದರಲ್ಲಿ ಸಂದೇಹವೇ ಇಲ್ಲ. ಶಿಕ್ಷಣ ತುಟ್ಟಿ, ವೈದ್ಯಕೀಯ ಚಿಕಿತ್ಸೆ ತುಟ್ಟಿ ಎಂದು ಮುಸ್ಲಿಂ. ಕೈಸ್ತೇತರರು ಆಲೋಚಿಸಿದರೆ ಸರ್ಕಾರ ನೀಡುವ ಸರ್ಕಾರಿ ಶಾಲೆ, ಸರ್ಕಾರಿ ಆಸ್ಪತ್ರೆಗಳ ಸಂಪೂರ್ಣ ಉಪಯೋಗವನ್ನು ಮುಸಲೀಮರು ಉಪಯೋಗಿಸಿಕೊಳ್ಳುವರು. ಜನ ಹಿತಕ್ಕಾಗಿಯೇ ಸರ್ಕಾರಿ ಸಂಸ್ಥೆಗಳು ಇರುವಾಗ ಅವುಗಳ ಹೆಚ್ಚಿನ ಉಪಯೋಗ ತೆಗೆದುಕೊಳ್ಳುವದು ಜನರ ಬಾಧ್ಯತೆಯೇ ಸರಿ. ಸರ್ಕಾರಿ ಶಾಲೆ, ಗ್ರಾಮೀಣ ಶಾಲೆಗಳಲ್ಲಿ ಓದಿದವರು ಎಷ್ಟು ಜನ ಇಂದು ಅತ್ಯುನ್ನತ ಹುದ್ದೆಗೆ ಏರಿಲ್ಲ?

ಜೀವನವು ನಿರೀಕ್ಷೆಯಂತೆಯೇ ನಡೆಯುವುದಿಲ್ಲ. ಏನಾದರೂ ಅವಗಡ ಸಂಭವಿಸಿ ಇರುವ ಒಂದು ಸಂತಾನಕ್ಕೆ ಕುತ್ತು ಬಂದರೆ ಎಷ್ಟೋ ಜನರು ಮನೋವೈಕಲ್ಯಕ್ಕೆ ಈಡಾಗುವುದುಂಟು. ಆಗ ವಿಧಿಯನ್ನು ಶಪಿಸುತ್ತ ಕೂರುವರು. ಇಂಥ ಮೂರ್ಖತನ ಮಾಡದೆ ಕನಿಷ್ಠ ಎರಡು ಮಕ್ಕಳನ್ನಾಗಲಿ, ಮೂರನ್ನಾಗಲಿ ಹೊಂದಬೇಕು. ಅವಿದ್ಯಾವಂತರು ವಿಪರೀತ ಮಕ್ಕಳನ್ನು ಹೊಂದಿ ಅವರಿಗೆ ಶಿಕ್ಷಣವನ್ನಾಗಲೀ, ಸಂಸ್ಕಾರವನ್ನಾಗಲೀ ಕೊಡಲು ಆಗಲಿಕ್ಕಿಲ್ಲ. ವಿದ್ಯಾವಂತರು ಮತ್ತು ಬಡತನದಲ್ಲಿದ್ದರೂ ಪ್ರೌಢರು, ಪ್ರಾಜ್ಞರೂ ಆದವರು ಹೆಚ್ಚು ಮಕ್ಕಳನ್ನು ಪಡೆದರೂ ತಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ನೀಡಬಲ್ಲರು. ಪ್ರಜ್ಞಾವಂತ ನಾಗರಿಕ ಪ್ರಜೆಗಳನ್ನು ದೇಶಕ್ಕೆ ಕೊಡುವುದು ಬಹಳ ಮಹತ್ವಪೂರ್ಣ ಕೊಡುಗೆಯಾಗುವುದು. ವಿವಾಹದ ಮುಖ್ಯ ಉದ್ದೇಶ ದೈಹಿಕ ಸುಖ ಪಡೆಯುವುದಷ್ಟೆ ಅಲ್ಲ ಉತ್ತಮ ಸಂತಾನವನ್ನು ಸಮಾಜಕ್ಕೆ ನೀಡುವುದು ಎಂಬುದನ್ನು ಗೃಹಸ್ಥರು ಮನವರಿಕೆ ಮಾಡಿಕೊಳ್ಳಬೇಕು. ಸಮಾನ ನಾಗರಿಕ ಕಾಯ್ದೆ ದೇಶದಲ್ಲಿ ಜಾರಿಗೆ ಬರುವವರೆಗೆ ಕುಟುಂಬ ನಿಯಂತ್ರಣ ಏಕಮುಖವಾಗುವ ಕಾರಣ, ಭಾರತದ ಹಿತರಕ್ಷಣೆ ದೃಷ್ಟಿಯಿಂದ ಸಹ ಪ್ರಜ್ಞಾವಂತರು ಹೆಚ್ಚು ಮಕ್ಕಳನ್ನು ಪಡೆದು ಅವರನ್ನು ಪ್ರಜ್ಞಾವಂತ ಪ್ರಜೆಗಳನ್ನಾಗಿ ರೂಪಿಸಿದರೆ ಅದು ಸಹ ದೇಶಸೇವೆಯೇ ಆಗುವುದು !

### 3. ಲಿಂಗಪತಿ - ಶರಣ ಸತಿ/ ಡಾ|| ಗುರುರಾಜ ಕರ್ಜಗಿ ಧೋರಣೆ

ಪ್ರಜಾವಾಣಿ ಪತ್ರಿಕೆಯಲ್ಲಿ ಕರುಣಾಳು ಬಾ ಬೆಳಕೆ ಎಂಬ ಶೀರ್ಷಿಕೆಯಡಿಯಲ್ಲಿ ಡಾ|| ಗುರುರಾಜ ಕರ್ಜಗಿ ಅವರು ನೈತಿಕ ಅಧ್ಯಾತ್ಮಿಕ ಮೌಲ್ಯಗಳನ್ನು ಬಿಂಬಿಸುವ ಬರಹಗಳನ್ನು ಬರೆಯುತ್ತಿದ್ದು ಈ ಅಂಕಣವು ಬಹು ಜನಪ್ರಿಯವಾಗಿದೆ. ಒಂದು ದಿವಸದ ಅಂಕಣದಲ್ಲಿ ಲಿಂಗಪತಿ -ಶರಣ ಸತಿ ಎಂಬ ಶೀರ್ಷಿಕೆ ನೋಡಿ ನನಗೆ ಅತೀವ ಆಶ್ಚರ್ಯ ಮತ್ತು ಆನಂದ ಉಂಟಾಯಿತು. ಅಂತೂ ವಚನ ಸಾಹಿತ್ಯದ ಒಂದು ಪದಪುಂಜ ಆಕಸ್ಮಿಕವಾಗಿಯಾದರೂ ಪ್ರಕಟವಾಯಿತಲ್ಲ ಎಂಬುದೇ ಆ ಆನಂದಕ್ಕೆ



ಕಾರಣ. ಶೀರ್ಷಿಕೆ ಮಾತ್ರ ಹೀಗೆ ಹಾಕಲ್ಪಟ್ಟ ಬರಹದಲ್ಲಿ ಒಂದು ಸಣ್ಣ ಉಲ್ಲೇಖ ವಚನ ಸಾಹಿತ್ಯದ ಬಗೆಗೆ ಆಗಿರಲಿಲ್ಲ. ಇದರಲ್ಲಿ ಮೀರಾಬಾಯಿಯ ಒಂದು ಪ್ರಸಂಗ ಉಲ್ಲೇಖವಾಗಿತ್ತು. ಮತ್ತು ಸ್ವಾಮಿ ಚೈತನ್ಯ ಪ್ರಭು ಅವರ ಪರಂಪರೆಯ ಓರ್ವ ಸನ್ಯಾಸಿಯ ವಿಷಯದ ಪ್ರಸ್ತಾಪವಾಗಿತ್ತು. ಲಿಂಗದೇವನನ್ನು ಪತಿ ಎಂದು ಭಕ್ತನು ಶರಣ ಸತಿಯಾಗಿ ಆರಾಧಿಸುವ ಪರಿಕಲ್ಪನೆ ಅಪ್ಪಟ ವಚನ ಸಾಹಿತ್ಯದ್ದು; ಬೇರಾವ ಧರ್ಮದಲ್ಲಿ, ಪಂಥದಲ್ಲಿಲ್ಲದು. ಮೀರಾಬಾಯಿಯದು ಮಧುರಾ ಭಕ್ತಿಯಲ್ಲಿ ಒಂದಾದ ಸಖ್ಯ ಭಕ್ತಿಯೇ ಆಗಿದ್ದರೂ ಅಕ್ಕಮಹಾದೇವಿ ಮತ್ತು ಇತರ ಶರಣರ ಶರಣ ಸತಿ ಭಕ್ತಿಯ ಮಟ್ಟಕ್ಕೆ ಏರಲು ಅಸಮರ್ಥವಾದುದು. ಏಕೆಂದರೆ ವಚನ ಸಾಹಿತ್ಯದಲ್ಲಿ ಬರುವ ಧ್ಯೇಯವಸ್ತು ಲಿಂಗಪತಿ ನಿರಾಕಾರನು, ನಿರ್ಗುಣನು; ಮೀರಾಬಾಯಿಯ ಆರಾಧ್ಯವಸ್ತು ಕೃಷ್ಣನು ಸಗುಣನು, ಸಾಕಾರನು. ಆದ್ದರಿಂದ ಮೀರಾಬಾಯಿ ಕೃಷ್ಣನನ್ನು ಕುರಿತು ಮಾಡುವ ಭಕ್ತಿ ನಿರಾಕಾರದ ಮಟ್ಟಕ್ಕೆ ಏರದಿರುವ ಭಕ್ತಿಯಾದ ಕಾರಣ ಡಾ||ಗುರುರಾಜ ಕರ್ಜಗಿ ಕೊಟ್ಟ ಶೀರ್ಷಿಕೆ ಹೊಂದಿಕೆಯಾಗದು. ಅಂಕಣಕ್ಕೆ ಶೀರ್ಷಿಕೆ ಕೊಟ್ಟ ಬಳಿಕ ವಚನ ವಾಙ್ಮಯದ ಲಿಂಗಪತಿ -ಶರಣ ಸತಿಯ ಪರಿಕಲ್ಪನೆ ಕುರಿತು ಏನಾದರೂ ಬರೆಯಬಹುದಿತ್ತು. ಏನೇನೂ ಬರೆದಿಲ್ಲ.

ಚೈತನ್ಯ ಪ್ರಭುಗಳ ಪರಂಪರೆಯ ಸನ್ಯಾಸಿ ಜಗನ್ನಾಥನ ದರ್ಶನಕ್ಕೆ ಬಂದಿದ್ದು ಆತ ಸ್ತ್ರೀಯರ ಮುಖದರ್ಶನ ಮಾಡದ ಕಾರಣ ಮೀರಾಬಾಯಿ ಮತ್ತು ಸಖಿಯರನ್ನು ಒಳಗೆ ಬಿಡುವುದಿಲ್ಲ. ಆಗ ಮೀರಾಬಾಯಿ ಹೇಳುತ್ತಾಳೆ, "ಕೃಷ್ಣನೊಬ್ಬನೇ ಗಂಡು ಒಳಗಡೆ ಸ್ತ್ರೀಯರಷ್ಟೆ ಹೋಗಬೇಕು. ಗಂಡಾದ (ಪುರುಷಭಾವವಿರುವ) ಆ ಸನ್ಯಾಸಿ ಒಳಗೆ ಹೋದುದೇಕೆ?" ಈ ವಿಚಾರ ಹೋಲುವಂತಹ ಅಕ್ಕಮಹಾದೇವಿಯ ವಚನ ಹೀಗಿದೆ, "ಹೆಣ್ಣು ಹೆಣ್ಣಾದರೆ ಗಂಡಿನ ಸೂತಕ, ಗಂಡು ಗಂಡಾದರೆ ಹೆಣ್ಣಿನ ಸೂತಕ; ಶರಣಂಗೆ ಯಾವ ಭಾವವೂ ಇಲ್ಲ. ಚನ್ನಮಲ್ಲಿಕಾರ್ಜುನಯ್ಯನೆಂಬ ಗರುವಂಗೆ ಜಗವೆಲ್ಲ ಹೆಣ್ಣು ನೋಡಾ." ಡಾ|| ಗುರುರಾಜ ಕರ್ಜಗಿಯವರು ಅಕ್ಕಮಹಾದೇವಿಯನ್ನು ತೌಲನಿಕವಾಗಿ ಪ್ರಸ್ತಾಪ ಮಾಡಬಹುದಿತ್ತು. ಇನ್ನೂ ಮುಂದುವರಿದು ಸ್ತ್ರೀ -ಪುರುಷ ಎಂಬ ಭಾವವೇ ಮಾಯೆ. ಮಾಯೆ ತನ್ನೊಳಗಣ ಭಾವ ಎಂಬಂತೆ ವಿವರಿಸಿದ್ದಾರೆ. ಅಲ್ಲಮಪ್ರಭುದೇವರ ಹೆಣ್ಣು, ಮಣ್ಣು, ಹೊನ್ನು ಮಾಯೆಯಲ್ಲ ಮನದ ಮುಂದಣ ಆಸೆಯೇ ಮಾಯೆ ಎಂಬ ವಚನವರಿಯದ ಕನ್ನಡಿಗರಾರು? ಆದರೆ ಅಲ್ಲಮ ಪ್ರಭುದೇವರ ಹೆಸರನ್ನಾಗಲೀ ವಚನವನ್ನಾಗಲಿ ಪ್ರಸ್ತಾಪಿಸಿಲ್ಲ. ಇದರಿಂದ ಅವರು ಬಹಳ ಎಚ್ಚರಿಕೆಯಿಂದ ವಚನ ಸಾಹಿತ್ಯವನ್ನು ಮರೆಮಾಚುತ್ತಾರೆ, ದೂರವಿಡುತ್ತಿದ್ದಾರೆ ಎಂದು ಹೇಳಬಹುದು. ವೈದಿಕರ ಈ ಧೋರಣೆಯಿಂದ ಹತಾಶರಾಗದೆ ವಚನ ಸಾಹಿತ್ಯವನ್ನು ಮನೆಮನೆಗೆ ಹಂಚುವ ಕಾರ್ಯವನ್ನು ನಾವು ಮಾಡಬೇಕು ಅಷ್ಟೆ.

### 4. ಲಿಂಗಾಯತ - ವೀರಶೈವ ಧ್ರುವೀಕರಣ

ಒಂದು ವಿಶೇಷ ಕಾರ್ಯಕ್ರಮ "ಶರಣ ಸಂಗಮ" ನಡೆಯಿತು. ಈ ಕಾರ್ಯಕ್ರಮ ನಡೆಯಬೇಕೆಂದು ಮೊದಲ ಹೆಜ್ಜೆ ಇಟ್ಟವರು ಬಸವ ಪಥಿಕರು. ಶುದ್ಧೀಕರಣಗೊಂಡ ಮತಿಮನ ಉಳ್ಳವರೇ ಸೇರಿದರೆ ಸಾಲದು. ಸ್ಥಳೀಯರನ್ನೂ ಸೇರಿಸಿಕೊಳ್ಳೋಣ ಎಂದು ಆಲೋಚಿಸಿ ಸುತ್ತಮುತ್ತಲಿನ ವಸಾಹತುಗಳ ಲಿಂಗಾಯತರನ್ನೂ ಸಂಪರ್ಕಿಸಿದರು. ಅವರೂ ಸಹ ಸಹರ್ಷದಿಂದ "ಮಾತಾಜಿ ಬರುವುದು ನಮಗೂ ಸಂತೋಷದ ಸಂಗತಿ." ಎಂದು ಕಲ್ಯಾಣ ಮಂಟಪವೊಂದರ ಬಾಡಿಗೆ ಕೊಡಲು ಒಬ್ಬರು, ಬಂದ ಜನರಿಗೆ ಪ್ರಸಾದ ದಾಸೋಹ ವೆಚ್ಚವಹಿಸಿಕೊಳ್ಳಲು ಮತ್ತೊಬ್ಬರು, ಪ್ರಚಾರ ಸಾಮಗ್ರಿಯ ವೆಚ್ಚವಹಿಸಿಕೊಳ್ಳಲು ಮಗದೊಬ್ಬರು ಸಿದ್ಧರಾದರು. ಎಲ್ಲವೂ ನಿರ್ಧಾರವಾಯಿತು. ಆ ಭಾಗದಲ್ಲಿ ಪರಿಚಿತರಾಗಿರುವ ಸ್ವಾಮಿಗಳನ್ನು ಕರೆಯುವುದಾಗಿ ಒಪ್ಪಿಗೆ ಕೇಳಿದರು. ಬರಲಿ, ಯಾರನ್ನು ಬೇಕಾದರೂ ಆಹ್ವಾನಿಸಿರಿ. ಎಂದು ಹೇಳಿದೆ. ಓರ್ವ ವಿರಕ್ತರನ್ನು ಓರ್ವ ಪಂಚಾಚಾರ್ಯ ಮಠದವರನ್ನೂ ಕರೆದುದಾಗಿ ತಿಳಿಸಿದರು. ಕಲ್ಯಾಣ ಮಂಟಪದ ಬಾಡಿಗೆ ಕಟ್ಟಿ, ಪೋಸ್ಟರ್, ಬ್ಯಾನರ್ ತಯಾರಾಗಿ ಆಹ್ವಾನ ಪತ್ರ ಸಿದ್ಧವಾಗುವ ಹಂತಕ್ಕೆ ಬಂದಿತು. ಆಗ ಒಂದೊಂದೇ ಬಾಣ ಶುರುವಾದವು. "ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಹುಟ್ಟು ವೀರಶೈವರಲ್ಲದವರು ಬರಬಾರದು." ವ್ಯವಸ್ಥಾಪಕರಿಗೆ ಮುಜುಗರವಾಯಿತು. ಬಸವ ತತ್ವದವರ ಸಭೆ ಎಂದು ದಲಿತ ಮುಖಂಡರು, ವಿಚಾರವಾದಿಗಳನ್ನು ಆಹ್ವಾನಿಸಲಾಗಿತ್ತು. ಕಾರ್ಯಕ್ರಮ ರದ್ದು ಮಾಡಲು ಬರದಷ್ಟು ಸಿದ್ಧತೆಗೆ ಖರ್ಚಾಗಿತ್ತು. ಪಾಪ, ಏನೋ ಒಂದು ನೆಪ ಹೇಳಿ ಅತಿಥಿಗಳಿಗೆ ತಿಳಿಸಬೇಕಾದಾಗ ನಮಗೆಲ್ಲ

ಬಹಳ ನೋವಾಯಿತು. ನಂತರದ ಬಾಣ, ವೇದಿಕೆಯ ಮೇಲೆ ಬಸವಣ್ಣನವರ ಭಾವಚಿತ್ರದ ಜೊತೆ ರೇಣುಕಾಚಾರ್ಯರ ಭಾವಚಿತ್ರ ಇಡಬೇಕು. "ನಾವು ರೇಣುಕಾಚಾರ್ಯರ ಭಾವಚಿತ್ರದ ಜೊತೆಗೆ ಬಸವಣ್ಣನವರ ಭಾವಚಿತ್ರ ಇಡಲು ಸಿದ್ಧರಿದ್ದೇವಲ್ಲ. ಒಂದು ಫೋಟೋ ಇಡಲು ಅಷ್ಟೆ ನಾವು ಕೇಳುವುದು. ಅದನ್ನು ಇಡದಿದ್ದರೆ ನಾವು ಬರುವುದಿಲ್ಲ." ಪಂಚಾಚಾರ್ಯ ಸ್ವಾಮಿಗಳ ಒತ್ತಡ. ನನಗೆ ಕಾರ್ಯಕರ್ತರು ಫೋನ್ ಮಾಡಿದರು. ನಾನು ಹೇಳಿದೆ, "ಇಲ್ಲಿ ಒಂದು ಫೋಟೋ ಇಡುವ ಪ್ರಶ್ನೆ ಬರುವುದಿಲ್ಲ. ಒಂದು ಸುಳ್ಳನ್ನು ಸತ್ಯವೆಂದು ನಾವು ಒಪ್ಪಿಕೊಂಡು ಘೋಷಿಸಿದಂತೆ ಆಗುತ್ತದೆ. ರೇಣುಕಾಚಾರ್ಯ ಮುಂತಾದ ಆದಿ ಪಂಚಾಚಾರ್ಯರು ಐತಿಹಾಸಿಕ ವ್ಯಕ್ತಿಗಳಲ್ಲ; ಮೈಸೂರಿನ ಕಾಶೀನಾಥ ಶಾಸ್ತ್ರಿಗಳ ಕಾಲ್ಪನಿಕ ಸೃಷ್ಟಿ. ಯಾರ ಮುಲಾಜಿಗೂ ಒಳಗಾಗಿ ನಾವು ಸುಳ್ಳನ್ನು ಸತ್ಯವೆಂದು ಒಪ್ಪುವುದಿಲ್ಲ. ಉಳಿದ ವಿರಕ್ತರು ಏನಾದರೂ ಮಾಡಲಿ; ನಾವು ಎಂದೂ ಸತ್ಯವನ್ನು ನುಡಿಯುವವರು ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಕಾಲ್ಪನಿಕ ವ್ಯಕ್ತಿ ರೇಣುಕಾಚಾರ್ಯರ ಫೋಟೋ ಇಟ್ಟರೆ ಅವರ ಐತಿಹಾಸಿಕತೆಯನ್ನು ಒಪ್ಪಿಕೊಂಡಂತೆ ಆಗುತ್ತದೆ. ಆದ್ದರಿಂದ ಅದು ಸಾಧ್ಯವಾಗದು. ಆ ಸ್ವಾಮಿಗಳು ಬರಲಿ, ಬೇಕಾದರೆ ಚರ್ಚಿಸೋಣ." ಎಂದು ನಾನು ಹೇಳಿದೆ. ಅವರು ಬರಲು ಒಪ್ಪಲಿಲ್ಲ. ಕಾರ್ಯಕ್ರಮ ಬಹಳ ಚನ್ನಾಗಿ ಆಯಿತು. ಬಹಳ ಜನ ಸೇರಿದ್ದರು. ಉತಮ ಜಾಗೃತಿ ಆಯಿತು. ಲಿಂಗಾಯತ ಧರ್ಮ ಸ್ವತಂತ್ರ ಧರ್ಮ ಎಂಬ ಬಗ್ಗೆ ಚಿಂತನೆ ವಿಸ್ತೃತವಾಗಿ ನಡೆಯಿತು.

ನಂತರ ಆ ಸ್ವಾಮಿಗಳು ಸಹ ಒಂದು ಕಾರ್ಯಕ್ರಮ ಏರ್ಪಡಿಸಿ, "ನಮ್ಮದು ವೀರಶೈವ. ಇದು ಸ್ವತಂತ್ರ ಧರ್ಮವಲ್ಲ. ಹಿಂದು ಧರ್ಮದೊಳಗಣ ಒಂದು ಪಂಥ" ಎಂಬ ಅಭಿಪ್ರಾಯದ ಭಾಷಣಕಾರರನ್ನು ಕರೆಸಿ ಕಾರ್ಯಕ್ರಮವನ್ನು ಮಾಡಿಸಿದರಂತೆ. ಅವರ ಅಭಿಪ್ರಾಯ ಸರಿ, ನಮ್ಮ ಅಭಿಪ್ರಾಯವೂ ಸರಿ. ವೀರಶೈವ ಒಬ್ಬ ಮನುಷ್ಯ, ಲಿಂಗಾಯತ ಇನ್ನೊಬ್ಬ ಮನುಷ್ಯ. ಉಭಯತರಲ್ಲಿ ಹೋಲಿಕೆಯೂ ಇಲ್ಲ. ವಿನಾಕಾರಣ ಇಬ್ಬರಲ್ಲ ಒಬ್ಬನೇ ಎಂಬ ಗೊಂದಲವನ್ನು ಪಂಚಾಚಾರ್ಯ ಗುಂಪಿನ ವೀರಶೈವವಾದಿಗಳು, ಡಾ|| ಚಿ.ಮೂ.ರಂಥವರು ಹುಯಿಲೆಬ್ಬಿಸಿದ್ದಾರೆ. ವೀರಶೈವವಾದಿಗಳು ತಮ್ಮದೊಂದು ಪಂಥವನ್ನಾಗಿ ಗುರುತಿಸಿಕೊಂಡು ಹಿಂದು ಧರ್ಮದ ಅವಿಭಾಜ್ಯ ಅಂಗವಾಗಿಯೇ ಇರಲಿ. ಅದಕ್ಕೆ ನಮ್ಮ ಸಂಪೂರ್ಣ ಸಹಮತವಿದೆ. ಲಿಂಗಾಯತವು ಮಾತ್ರ ಸ್ವತಂತ್ರ ಧರ್ಮ. ಇದರ ಆಚಾರ - ವಿಚಾರ - ಅನುಭಾವ ಸಂಪೂರ್ಣ ಬೇರೆಯೇ ಇದೆ. ಲಿಂಗಾಯತ ಧರ್ಮವೆಂಬ ವೃಕ್ಷದ ಆಸರೆ ಬಯಸಿ ಬಂದ ವೀರಶೈವದ ಬಳ್ಳಿ ಆಶ್ರಯಿಸಿದ ಧರ್ಮವೃಕ್ಷವನ್ನು ಅಲಂಕರಿಸದೆ ತನ್ನ ಜಾತಿವಾದ, ಮತಾಂಧತೆಯಿಂದ ಬಿಗಿದು, ಕೊರೆಯಲು ಆರಂಭಿಸಿರುವ ಕಾರಣ ವೀರಶೈವವೆಂಬ ಪರೋಪಜೀವಿ ಬಳ್ಳಿಯನ್ನು ಕಿತ್ತು ಒಗೆಯಲೇ ಬೇಕಾಗಿದೆ. ಎಲ್ಲಿ ಹೋದಲ್ಲಿ ವೀರಶೈವವಾದಿಗಳು ಗೊಂದಲ ಎಬ್ಬಿಸುತ್ತ, ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯಕ್ಕೆ ವಿರುದ್ಧವಾಗಿ ನಡೆದು ಕೊಳ್ಳುತ್ತಿರುವ ಕಾರಣ ಇವೆರಡರ ಪ್ರತ್ಯೇಕತೆ ಅತ್ಯಗತ್ಯವಾಗಿದೆ ಎಂದು ಹೇಳದೆ ಗತ್ಯಂತರವಿಲ್ಲ.

---

## ಬಡ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ







## ಬಸವ ವಚನಾಮೃತ

### 297. ಧೃತಿಗೆಟ್ಟು ಅನ್ಯರ ಬೇಡದಂತೆ

ಧೃತಿಗೆಟ್ಟು ಅನ್ಯರ ಬೇಡದಂತೆ
ಮತಿಗೆಟ್ಟು ಅನ್ಯರ ಹೊಗಳದಂತೆ
ಪರಸತಿಯರ ರತಿಗೆ ಮನ ಹಾರದಂತೆ
ಶಿವಪಥವೊಲ್ಲದವರೊಡನಾಡದಂತೆ
ಅನ್ಯ ಜಾತಿಯ ಸಂಗವ ಮಾಡದಂತೆ
ಎನ್ನ ಪ್ರತಿಪಾಲಿಸು ಲಿಂಗದೇವಾ. -ಬ.ವ.ದೀ.265

ಸಾಮಾನ್ಯವಾಗಿ ವ್ಯಕ್ತಿಗೆ ಆರ್ಥಿಕ ಸಂಕಷ್ಟ ಬಂದಾಗ ಅವನು ಧೃತಿಗೆಡುತ್ತಾನೆ, ಬಹಳ ದೈನ್ಯತೆ ಹೊಂದಿ ಸಹಾಯಕ್ಕಾಗಿ ಬೇಡುತ್ತಾನೆ. ಸಾಮಾನ್ಯರು ಹಣಕ್ಕಾಗಿ, ಅಧಿಕಾರಕ್ಕಾಗಿ ತಮ್ಮ ಒಡೆಯರಲ್ಲಿ ಅಥವ ಇನ್ನಿತರರಲ್ಲಿ ಬಹುವಾಗಿ ಯಾಚಿಸುತ್ತಾರೆ. ಪ್ರಾಣಕ್ಕೆ ಕುತ್ತು ಬಂದಾಗಲೂ ಅಷ್ಟೆ ಪ್ರಾಣಭಿಕ್ಷೆ ನೀಡಲು ಪ್ರಾಣತೆಗೆಯಲು ಸಿದ್ದನಾದವನನ್ನು ಯಾಚಿಸುತ್ತಾರೆ. ಆದರೆ ತತ್ವ ನಿಷ್ಠರಾದ ಬಸವಣ್ಣನವರು ತಮಗೆ ಅಂತಹ ಮನಃಸ್ಥಿತಿ ಎಂದೆಂದೂ ಬರದಿರಲಿ ಎಂದು ದೇವನಲ್ಲಿ ಬೇಡುತ್ತಾರೆ. ಕಷ್ಟಗಳನ್ನು ಬೇಡವೆನ್ನುವುದಿಲ್ಲ, ಕಷ್ಟಬಂದಾಗ ಅನೇಕರು ಹೊಂದುವ ದೈನ್ಯತಾಭಾವ ತಮಗೆ ಬರದಿರಲಿ ಎನ್ನುತ್ತಾರೆ.

ಮತಿಗೆಟ್ಟು ಪರರನ್ನು ಹೊಗಳದ ಮನಃಸ್ಥಿತಿಯನ್ನೂ ದೇವನಲ್ಲಿ ಬೇಡುತ್ತಾರೆ. ರಾಜ -ಮಹಾರಾಜರನ್ನು, ಮಾಲಿಕರನ್ನು, ಅಥವಾ ಯಾರಿಂದ ಕೆಲಸವಾಗಬೇಕೋ ಅಂಥವರನ್ನು ಇಂದ್ರ, ಚಂದ್ರ ಎಂದು ಮತಿಗೆಟ್ಟು ಅತಿಯಾಗಿ ಹೊಗಳುವ ಸಮಯ ಸಾಧಕನ ಬಹುಪಾಲು ಜನರ ಸ್ವಭಾವವಾಗಿರುತ್ತದೆ. ಅದೂ ಒಂದು ದೌರ್ಬಲ್ಯ. ಇದು ಧರ್ಮಪಿತರಲ್ಲಿ ಇರಲಿಲ್ಲ. ಬಿಜ್ಜಳ ಮಹಾರಾಜನು ಸಹ ತಪ್ಪು ಮಾಡಿದಾಗ ಅದನ್ನು ಎತ್ತಿ ತೋರಿಸುತ್ತಿದ್ದರು. ವರ್ಣಾಂತರ ವಿವಾಹದ ಸನ್ನಿವೇಶದಲ್ಲಿ ಶರಣರ ಸಾಂಗತ್ಯವನ್ನು ಹಿರಿದಾಗಿ ಭಾವಿಸಿ ಅದಕ್ಕೆ ಅವಕಾಶವಿಲ್ಲದ ಅಧಿಕಾರ ಬೇಡ ಎಂದ ಪ್ರಧಾನಿಯ ಪಟ್ಟವನ್ನೇ ತೊರೆದು ಬಿಟ್ಟರು.

( ಸಾಮಾನ್ಯ ಜನರು ಅತ್ತಲಿರಲಿ ಅನೇಕ ಮಠಾಧೀಶರು ಸಹಿತ ಅಧಿಕಾರಾರೂಢ ರಾಜಕಾರಣಿಗಳನ್ನು ಹೊಗಳಿ, ಅವರ ತಪ್ಪುಗಳನ್ನು ಆಡಳಿತದಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸದೆ ತಮಗೆ ಎಷ್ಟು ಸಿಗಬೇಕೋ ಅಷ್ಟು ಹಣ ಪಡೆಯಲು ಕಾತುರರಾಗಿರುವುದನ್ನು ನೋಡಿದರೆ ನಾಚಿಕೆ ಎನಿಸುತ್ತದೆ)

ಪರಸತಿಯರನ್ನು ಕಂಡಾಗ ಮನಸ್ಸು ಚಂಚಲವಾಗಿ ಹರಿಯದಂತೆ ನಿಗ್ರಹಿಸು ಎಂದು ಗುರು ಬಸವಣ್ಣನವರು ದೇವರನ್ನು ಬೇಡುತ್ತಾರೆ. ನಿವೃತ್ತಿ ಮಾರ್ಗ ಪ್ರವೃತ್ತಿ ಮಾರ್ಗ ಎಂದು 2 ಬಗೆಯುಂಟು. ನಿವೃತ್ತಿ ಮಾರ್ಗವೆಂದರೆ ಸನ್ಯಾಸ. ವಿರಕ್ತನು ಜಗತ್ತಿನ ಸಮಸ್ತ ಮಹಿಳೆಯರನ್ನೂ ತಾಯಿಯ ಸ್ವರೂಪದಲ್ಲಿ ಕಾಣಬೇಕು. ಗೃಹಸ್ಥರು ತನ್ನ ಪತ್ನಿಯ ಹೊರತು ಉಳಿದೆಲ್ಲ ಮಹಿಳೆಯರನ್ನು ತಾಯಿಯ ಸ್ವರೂಪದಲ್ಲಿ ಕಾಣಬೇಕು. ಪರಸ್ತ್ರೀಯರ ಮೇಲೆ ಕಣ್ಣು ಹಾಕುವುದು ಮಹಾಪಾಪ. ಆದ್ದರಿಂದ ಪರಸ್ತ್ರೀಯರ ಸಂಗಕ್ಕೆ ಮನಸ್ಸು ಎಳಸಲಾರದಂತೆ ಅದನ್ನು ನಿಯಂತ್ರಿಸಬೇಕು.

ಶಿವಪಥ ಒಲ್ಲದವರ ಒಡನಾಡದಂತೆ: ವ್ಯಕ್ತಿಗಳು ಸನ್ಮಾರ್ಗದಲ್ಲಿ ಇರಬೇಕಾದರೆ ಅವರು ಮಾಡುವ ಸಹವಾಸ ಬಹಳ ಮುಖ್ಯ. ಸಿದ್ಧಪುರುಷರಾದ ಮೇಲೆ ಅಷ್ಟೊಂದು ವಿಕಾರಗಳು, ಆಮಿಷಗಳು ಕಾಡುವುದಿಲ್ಲ. ಸಾಧಕಾವಸ್ಥೆಯಲ್ಲಿ ಇವು ವ್ಯಕ್ತಿಯನ್ನು ವಿಚಲಿತಗೊಳಿಸುತ್ತವೆ. ಆದರ್ಶಗಳಿಂದ ವಿಮುಖನಾಗಿ ಮಾಡುತ್ತವೆ. ಶರಣರ ಶಿವ ಪಥಿಕರ ಒಡನಾಟ ಆದರ್ಶಗಳ ಎಳೆಯ ಸಸಿಗಳನ್ನು ರಕ್ಷಿಸುವ ಬೇಲಿಯಂತೆ. ಶಿವಪಥಿಕರಲ್ಲದವರ ಒಡನಾಟ ನಿಧಾನವಾಗಿ ಪ್ರಭಾವ ಬೀರಿ ವ್ಯಕ್ತಿಯ ಜೀವನದ ಶೈಲಿಯನ್ನು, ಧ್ಯೇಯವನ್ನು ಬದಲಿಸಬಹುದು. ಇನ್ನೊಬ್ಬರು ಪರಿವರ್ತನೆಗೊಳಿಸಿದಂತೆ ಎಚ್ಚರವಹಿಸಬೇಕು. ಅದಕ್ಕಾಗಿ ಶಿವಪಥದಲ್ಲಿ ಆಸಕ್ತಿ ಇಲ್ಲದವರ ಜೊತೆಗೆ ಒಡನಾಡಬಾರದು. ಅನ್ಯ ಜಾತಿಯ ಸಂಗ ಮಾಡದಂತೆ ಎಂದು ಗುರು ಬಸವಣ್ಣನವರು ಹೇಳಿರುವುದರ ಬಗ್ಗೆ ತಪ್ಪು ಕಲ್ಪನೆ ಉಂಟಾಗುವ ಸಂಭವವಿದೆ. "ಬೇರೆ ಜಾತಿಯವರನ್ನು ಮುಟ್ಟಿಸಿ

ಕೊಳ್ಳಬಾರದು, ಅವರೊಡನೆ ಒಡನಾಟ ಮಾಡಬಾರದು." ಎಂಬ ಸಂಕುಚಿತ ವಿಚಾರವನ್ನು ಹೇಳಿದ್ದಾರೆ ಎಂದು ತಪ್ಪು ಅರ್ಥಕಲ್ಪಿಸಲು ಸಾಧ್ಯವಿದೆ. ಪಂಚ ಸೂತಕಗಳಲ್ಲಿ ಒಂದು ಜಾತಿ ಸೂತಕ. ಇದನ್ನು ಬಸವಾದಿ ಪ್ರಮಥರು ನಿರಾಕರಿಸಿದ್ದಾರೆ. "ಇಷ್ಟಲಿಂಗಧಾರಿಯು ಇನ್ನೊಬ್ಬರನ್ನು ಮುಟ್ಟಿದರೆ ಅವನು ಮೈಲಿಗೆಯಾಗನು. ಶರಣನನ್ನು ಸ್ಪರ್ಶಿಸಿದ ಇತರರು ಪರಿಶುದ್ಧರಾಗುವರು." ಎನ್ನುವರು. ಅನುಭವ ಮಂಟಪಕ್ಕೆ ಅಸಂಖ್ಯಾತರು ಎಲ್ಲ ಜಾತಿಗಳಿಂದಲೂ ಬರುತ್ತಿದ್ದರು. ಧರ್ಮ ಪ್ರಚಾರಕ ಜಂಗಮರು ಎಲ್ಲರಿಗೂ ಧರ್ಮಬೋಧೆ ಮಾಡುತ್ತಿದ್ದರು. ಆ ಕಾಲದಲ್ಲಿ ಜಾತಿ ಪದಕ್ಕಿಂತಲೂ 'ಕುಲ' ಎಂಬುದು ಬಳಕೆಯಾಗುತ್ತಿತ್ತು. 'ಕುಲವನರಸದಿರಿಂ ಬೋ; ಕುಲದಿಂ ಮುನ್ನೇನಾದಿರಿಂ ಬೋ,' 'ಕುಲವನರಸುವರೇ ಶರಣರಲ್ಲಿ ಜಾತಿ ಸಂಕರವಾದ ಬಳಿಕ;' 'ಲಿಂಗಸ್ಥಲವನರಿದವನೇ ಕುಲಜನು', 'ವಾರವೇಳು ಕುಲ ಹದಿನೆಂಟು ಎಂಬರಯ್ಯಾ.' ಆದ್ದರಿಂದ ಮೇಲ್ಕಂಡ ವಚನದಲ್ಲಿ ಅನ್ಯ ಜಾತಿಯ ಸಂಗ ಮಾಡದಂತೆ ಎಂದರೆ ನನಗಿಂತ ಬೇರೆ ಅಭಿರುಚಿ ಇರುವ ಜನರೊಡನೆ ಸಾಂಗತ್ಯ ಬೇಡ ಎಂದಾಗುವುದು.

ಲಿಂಗಾಯತ ಧರ್ಮವು ಒಂದು ಸ್ವತಂತ್ರ ಧರ್ಮ, ಯಾರಿಗೆ ಬೇಕಾದರೂ ದೀಕ್ಷೆ ಕೊಡುವ ತತ್ತ್ವ ಉಳ್ಳುದು. ಇದರ ಪ್ರಕಾರ ಪತಿ -ಪತ್ನಿ ಇಬ್ಬರೂ ಒಂದೇ ಸಂಸ್ಕಾರದವರಾಗಬೇಕು. ಗಂಡ ಲಿಂಗದೇವರ ಭಕ್ತನಾಗಿ, ಹೆಂಡತಿ ಮಾರಿ ಮಸಣಿಯ ಭಕ್ತೆಯಾಗಬಾರದು. ಅಕ್ಕಿಗೆ ಸಂಸ್ಕಾರ -ವಾಗಿರುತ್ತದೆ ಭತ್ತಕ್ಕೆ ಆಗಿರುವುದಿಲ್ಲ. ಎರಡನ್ನೂ ಕೂಡಿಸಿ ಅಡಿಗೆ ಮಾಡಿದರೆ ತಿನ್ನಲೂ ಬರದು, ಅವೂ ವ್ಯರ್ಥವಾಗುವುವು. ಆದ್ದರಿಂದ ವ್ಯಕ್ತಿಯು ವಿವಾಹವಾಗುವಾಗ ದೀಕ್ಷೆಯಿಲ್ಲದ ವ್ಯಕ್ತಿಯನ್ನು ಆಗಬಾರದು. ದೀಕ್ಷೆ ಮಾಡಿಸಿ (ತಾನು ಮಾಡಿಸಿಕೊಂಡಿರದಿದ್ದರೆ, ತಾನೂ ದೀಕ್ಷಾವಂತನಾಗಿ) ವಿವಾಹ ವಾಗಬೇಕು. ಈ ದೃಷ್ಟಿಯಿಂದ ಅನ್ಯ ಜಾತಿಯ ಸಂಗ ಮಾಡದಂತೆ ಎಂಬ ವಾಕ್ಯವನ್ನು ದೀಕ್ಷಾ ಸಂಸ್ಕಾರ ವಿಲ್ಲದೆ ವಿವಾಹವಾಗಬಾರದು, ಅಂಥವರೊಡನೆ ಸಂಸಾರ ಮಾಡಬಾರದು ಎಂದು ಅರ್ಥವಿಸಬಹುದು.

ಈ ಎಲ್ಲ ಆದರ್ಶಗಳೊಡನೆ ನನ್ನನ್ನು ಪಾಲಿಸು ಲಿಂಗದೇವ ಎಂದು ಗುರು ಬಸವಣ್ಣನವರು ಬೇಡಿಕೊಂಡಿರುವುದು ಅರ್ಥಗರ್ಭಿತವೂ, ಆದರ್ಶಯುತವೂ ಆಗಿದೆ.

### 268. ಅನ್ಯ ವಿಷಯ ಬೇಡ

ಮತ್ತೊಂದ ಕಾಣದಂತೆ; ಮತ್ತೊಂದ ಕೇಳದಂತೆ
ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ
ಇರಿಸಯ್ಯಾ ಲಿಂಗದೇವಾ. - ಬ.ವ.ದೀ.266

ಈ ಜಗತ್ತಿನ ತುಂಬ ಪಂಚೇಂದ್ರಿಯಗಳ ಆಹಾರವಾದ ತನ್ಮಾತ್ರೆಗಳು ಅರ್ಥಾತ್ ವಿಷಯಗಳಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧ ತಮ್ಮ ಜಾಲವನ್ನು ಹಬ್ಬಿಸಿರುತ್ತದೆ. ಬೇಡವೆಂದರೂ ಕೆಟ್ಟ ದೃಶ್ಯಗಳು ಕಣ್ಣಿಗೆ ಬೀಳುತ್ತವೆ; ಕುಶಬ್ದಗಳು ಕಿವಿಗೆ ಕೇಳಿಸುತ್ತವೆ. ಏನು ಮಾಡುವುದು ? ಚಳಿಯಾಗುವುದೆಂದು ಇಡೀ ಭೂಮಿಗೆ ಕಂಬಳಿ ಹೊದ್ದಿಸಲು ಸಾಧ್ಯವಿಲ್ಲ; ಮುಳ್ಳಿದೆ ಎಂದು ಇಡೀ ಭೂಮಿಗೆ ಚರ್ಮ ಹಾಸಲು ಸಾಧ್ಯವಿಲ್ಲ. ನಮ್ಮ ಮೈಗೆ ಕಂಬಳಿ ಸುತ್ತಿಕೊಳ್ಳಬೇಕು; ನಮ್ಮ ಕಾಲಿಗೆ ಚಪ್ಪಲಿ ಹಾಕಿಕೊಳ್ಳಬೇಕು. ಹಾಗೆ ಮತ್ತೊಂದ ಕಾಣದಂತೆ, ಮತ್ತೊಂದ ಕೇಳದಂತೆ ನಮ್ಮ ಪರಿಸರವನ್ನು ಸೃಷ್ಟಿಸಿಕೊಳ್ಳಬೇಕು.ಶರಣರೊಡನೆಯೇ ಒಡನಾಡಬೇಕು; ಅವರ ಮಾತುಗಳನ್ನೇ ಕೇಳಬೇಕು. ಉತ್ತಮವಾದುದನ್ನೇ ನೋಡಬೇಕು. ಆದಿ ಶರಣರ ವಿಚಾರಧಾರೆಗೆ ಹೊರತಾದ ವಿಷಯಗಳನ್ನು ಓದಬಾರದು; ಆಚರಣೆಗೆ ಎಳಸಬಾರದು. ಇದೇ ಲಿಂಗದೇವನಲ್ಲಿ ಧರ್ಮಪಿತ ಬಸವಣ್ಣನವರ ಬೇಡಿಕೆ.

### 269. ಶರಣರಲ್ಲಿ ನಂಬಿಕೆ

ಮತಿ ಮಂದನಾಗಿ ಗತಿಯ ಕಾಣದೆ ಇದ್ದೆನಯ್ಯಾ;
ಹುಟ್ಟುಗುರುಡನ ಕೈಯ ಕೋಲ ಕೊಟ್ಟು ನಡೆಸುವಂತೆ
ನಡೆಸಯ್ಯಾ ಎನ್ನ,
ನಿಮ್ಮ ಅಚ್ಚ ಶರಣರ ಒಕ್ಕುದ ಮಿಕ್ಕುದ ನಚ್ಚಿಸು, ಮೆಚ್ಚಿಸು
ಲಿಂಗದೇವಾ. - ಬ.ವ.ದೀ.267



"ವ್ಯಕ್ತಿಗೆ ಯಾವಾಗ ಬುದ್ಧಿಯು ಮಂದವಾಗುವುದೋ ಆಗ ಮುಂದಿನ ದಾರಿ ತಿಳಿಯದು. ದಿಙ್ಮೂಢನಾಗಿ ಇರುವನು. ಅಂಥ ಸ್ಥಿತಿಯಲ್ಲಿ ಮುನ್ನಡೆಸುವವರು ಬೇಕು. ಹುಟ್ಟು ಕುರುಡನಾದ ವ್ಯಕ್ತಿಗೆ ಕಣ್ಣಿದ್ದವರೊಬ್ಬರು ಕೋಲನ್ನು ಕೈಗೆ ಕೊಟ್ಟು ಮುನ್ನಡೆಸುವಂತೆ ದೇವಾ ನನ್ನನ್ನು ಮುನ್ನಡೆಸು. ಶರಣರು ಅರಿವಿನ ಕಣ್ಣುಳ್ಳ ದೇವನ ಪ್ರತಿನಿಧಿಗಳು. ಅವರು ತಮ್ಮ ಸಾಂಗತ್ಯವನ್ನು, ಸಾನ್ನಿಧ್ಯವನ್ನು, ಒಕ್ಕು - ಮಿಕ್ಕ ಜ್ಞಾನಪ್ರಸಾದವನ್ನು ಕೊಟ್ಟು ನನ್ನನ್ನು ಮುನ್ನಡೆಸಲಿ. ಅವರಲ್ಲಿ ನಾನು ನಂಬಿಕೆ ಇಡುವಂತೆ, ಪ್ರೀತಿ ಇಡುವಂತೆ ನನ್ನನ್ನು ಅನುಗೊಳಿಸು" ಎಂದು ಈ ವಚನದಲ್ಲಿ ಬಸವಣ್ಣನವರು ಲಿಂಗದೇವನಲ್ಲಿ ಪ್ರಾರ್ಥಿಸುತ್ತಾರೆ.

### 270. ಕನಸು ಕಾಣುವಿಕೆ ಬೇಡ

ಕಾಣುದುದನೆಲ್ಲವ ಕಾಣಲಾರೆನಯ್ಯಾ
ಕೇಳುದುದನೆಲ್ಲವ ಕೇಳಲಾರೆನಯ್ಯಾ
ದ್ರೋಹವಿಲ್ಲ ಎಮ್ಮ ಶಿವನಲ್ಲಿ, ಸೀಮೆಯಯ್ಯಾ
ಒಲೆಯ ಮುಂದಿದ್ದು ಮಾಡದ ಕನಸ ಕಾಂಬವರನೊಲ್ಲನಯ್ಯಾ,
ಲಿಂಗದೇವಾ. - ಬ.ವ.ದೀ.267

ಅಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವಾಗ ಕೆಲವು ದಿವ್ಯಾನುಭವಗಳು ಆಗುತ್ತವೆ. ದೂರವಾಣಿ, ದೂರದರ್ಶನ, ಸಗುಣ ಸಾಕ್ಷಾತ್ಕಾರ ಅನಾಹತನಾದ ಕೇಳುವಿಕೆ, ಜ್ಯೋತಿ ಬಿಂದು ದರ್ಶನ, ಚಿತ್ಕಳಾನುಭವ ಇತ್ಯಾದಿ. ಆದರೆ ಕೆಲವರು ಅತಿರೇಕದ ವರ್ಣನೆ ಮಾಡಿ ಯಾವ್ಯಾವುದೋ ಸಿದ್ಧಿಗಳ ಬಗ್ಗೆ ಬಣ್ಣಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸಾಧಕ ಜೀವಿ ಬಸವಣ್ಣನವರು ಹೇಳುತ್ತಾರೆ, ಕಾಣಲಸಾಧ್ಯವಾದುದನ್ನು ನಾನು ಕಾಣಲು ಬಯಸುವುದಿಲ್ಲ, ಕೇಳಲಸಾಧ್ಯವಾದುದನ್ನು ನಾನು ಕೇಳುವ ಯತ್ನ ಮಾಡುವುದಿಲ್ಲ" ಎಂದು. ಉದಾಹರಣೆಗೆ, ಕೆಲವರು ಬರೆಯುತ್ತಾರೆ, "ಆಳವಾಗಿ ಧ್ಯಾನ ಮಾಡುತ್ತ ಹೋದರೆ ಹಿಂದಿನ ಜನ್ಮಗಳ ವಿವರ ತಿಳಿಯುತ್ತದೆ." ಎಂದು. ಗುರು ಬಸವಣ್ಣನವರ ದೃಷ್ಟಿಯಲ್ಲಿ ಇಂಥ ಪ್ರಯತ್ನ ಅನವಶ್ಯಕ; ಏಕೆಂದರೆ ಹಿಂದಿನ ಜನ್ಮದ ನೆನಪು ಮಾಡಿಕೊಂಡು ಏನು ಆಗಬೇಕಾಗಿದೆ? ಇಂಥ ಸಾಧನೆಯಿಂದ ಸಮಯ ಹರಣವಾಗುತ್ತದೆ.

ದೇವರು ದ್ರೋಹ ಮಾಡುವುದಿಲ್ಲ, ಸಾಧನೆಗೆ ತಕ್ಕ ಫಲವನ್ನು ಕೊಟ್ಟೇ ಕೊಡುತ್ತಾನೆ. ಆದರೆ ಎಲ್ಲ ಅನುಭವಕ್ಕೂ ಒಂದು ಸೀಮೆ (Limitation) ಇದೆ.

"ಒಲೆಯ ಮುಂದಿದ್ದು ಮಾಡದ ಕನಸ ಕಾಂಬವರನೊಲ್ಲನಯ್ಯ, ಲಿಂಗದೇವಾ." ಎಂಬ ವಾಕ್ಯವನ್ನು 2 ರೀತಿ ಅರ್ಥ ಮಾಡಬಹುದು. ತಿಪ್ಪೆಯ ಮೇಲೆ ಕುಳಿತು ನಾನು ಉಪ್ಪರಿಗೆಯ ಮೇಲಿದ್ದೇನೆ ಎಂದು ಭ್ರಮಿಸುವವನಂತೆ, ಒಲೆಯ ಮುಂದೆ ಕುಳಿತು ತಾನು ಆಕಾಶದಲ್ಲಿ ಇದ್ದೇನೆಂದು ಭ್ರಮಿಸಬಾರದು ಎಂದು ಒಂದು ಅರ್ಥ. ಇನ್ನೊಂದು. "ಒಲೆಯ ಮುಂದಿದ್ದು, ಮಾಡದೆ ಕನಸು ಕಾಂಬುವವವರ ಎಂದರೆ ವ್ಯಕ್ತಿಯು ಪ್ರಯೋಗಶೀಲ (Practical) ನಾಗಿ ಮುಂದುವರಿಯ ಬೇಕೇ ವಿನಾ ಬರೀ ಕನಸು ಕಾಣುತ್ತ ಮನಸ್ಸಿನಲ್ಲಿ ಮಂಡಿಗೆ ತಿನ್ನುತ್ತ ಹೋಗಬಾರದು. ಅದು ಭ್ರಾಂತಿಯಲ್ಲಿ ಕೊನೆಗೊಳ್ಳುವುದು.

### 271. ಶರಣರನ್ನು ಕಾಣಲು ಪುಣ್ಯಬೇಕು

ಕಾಣಬಹುದೆ ಪರುಷದ ಗಿರಿ ಅಂಧಕಂಗೆ ?
ಅರಿಯಬಹುದೆ ರಸದ ಭಾವ ನಿರ್ಭಾಗ್ಯಂಗೆ ?
ತೆಗೆಯಬಹುದೆ ಕಡವರವು ದರಿದ್ರಂಗೆ ?
ಕರೆಯಬಹುದೆ ಕಾಮಧೇನು ಅಶುದ್ಧಂಗೆ?
ಹೊನ್ನು ಹುಳವ ಕಂಡು ನರಿ ತನ್ನ ಬಾಲವ
ಹುಣ್ಣು ಮಾಡಿಕೊಂಡಡೆ ಹೋಲಬಹುದೆ?
ಎನ್ನೊಡೆಯ ಲಿಂಗದೇವನ ಶರಣರನು
ಪುಣ್ಯವಿಲ್ಲದೆ ಕಾಣಬಹುದೆ ? - ಬ.ವ.ದೀ.269

ಕಬ್ಬಿಣವನ್ನು ಸ್ಪರ್ಶಿಸಿ ಬಂಗಾರವನ್ನಾಗಿ ಮಾಡುವ ಪರುಷದ ಬೆಟ್ಟವು ಎದುರಿಗೇ ಇದ್ದರೂ

ಕುರುಡ ಅದನ್ನು ಕಾಣಲಾರ. ಅದರ ಸದುಪಯೋಗ ಪಡೆದುಕೊಳ್ಳಲಾರದ ಭಾಗ್ಯ ಹೀನನಾದವನಿಗೆ ರಸದ ಬಾವಿ ಸನಿಹದಲ್ಲೇ ಇದ್ದರೂ ಅದರ ಮಹತ್ವವು ತಿಳಿಯುವುದಿಲ್ಲ. ಇನ್ನೂ ದಾರಿದ್ರ್ಯ ಹರಿಯುವ ಸಮಯ ಬಂದಿರದ ವ್ಯಕ್ತಿಗೆ ನಿಧಿಯ ಬಿಂದಿಗೆ ಸಿಕ್ಕರೂ ಅದು ಕರಗತವಾಗುವುದಿಲ್ಲ.

ಇದಕ್ಕೊಂದು ಸುಂದರ ದೃಷ್ಟಾಂತವಿದೆ. ಒಬ್ಬ ಬಡ ರೈತ ತನ್ನ ಹೊಲವನ್ನು ಉತ್ತುತ್ತ ಬಿತ್ತುತ್ತ ಕೃಷಿ ಕಾಯಕ ಮಾಡುತ್ತ ಜೀವಿಸುತ್ತಿದ್ದ. ಒಮ್ಮೆ ಚೆನ್ನಾಗಿ ಬೆಳೆ ಬಂದು ತೆನೆಗಳು ಕಾಳನ್ನು ತುಂಬಿಕೊಂಡು ಓಲಾಡುತ್ತಿದ್ದವು. ಪಕ್ಷಿಗಳನ್ನು ಕಾಯಲು ಒಂದು ಮಂಚಿಕೆ (ಅಟ್ಟಣಿಗೆ) ಮಾಡಿ ಕವಣೆಯಿಂದ ಕಲ್ಲು ಬೀರಿ ಪಕ್ಷಿಗಳನ್ನು ಓಡಿಸತೊಡಗಿದ. ಅವನ ಮಗನಿಗೆ ಹಾರಿಸಲ್ಪಟ್ಟ ಒಂದು ಕಲ್ಲು ಸಿಕ್ಕಿತು. ಹೊಳೆಯುವ ಅದನ್ನು ತೆಗೆದುಕೊಂಡು ಕುತೂಹಲದಿಂದ ಮಾರಲು ಹೋದ. ಅದನ್ನು ನೋಡಿದ ಬಂಗಾರದ ಅಂಗಡಿಯವ ಚಕಿತನಾಗಿ ಇದು ಅಮೂಲ್ಯವಾದ ವಜ್ರ ಎಂದು ಉದ್ಗರಿಸಿ ಹತ್ತು ಸಾವಿರ ರೂ ಬೆಲೆ ಕಟ್ಟಿದ. ಆ ಹಣ ತೆಗೆದು ಕೊಂಡು ಬಂದ ಮಗ ತಂದೆಗೆ ಕೊಟ್ಟ. ತಂದೆ ಆಶ್ಚರ್ಯಪಟ್ಟ. ಆದರೆ ಆ ಹೊತ್ತಿಗೆ ಮಡಿಕೆಯಲ್ಲಿದ್ದ ಎಲಲ ಹರಳುಗಳೂ ಕವಣೆಯ ಮೂಲಕ ದೂರದೂರಕ್ಕೆ ಹಾರಿಸಲ್ಪಟ್ಟಿದ್ದವು. ಇವನ ಬಡತನ ಹರಿಯುವ ಸುವರ್ಣ ಗಳಿಗೆ ಒದಗಿ ಬಂದಿದ್ದರೂ ಅವನಿಗೆ ವಜ್ರದ ಬೆಲೆ ತಿಳಿಯಲಿಲ್ಲ.

ಕಾಮಧೇನು ಎಂಬ ದಿವ್ಯ ಆಕಳು ಅಶುದ್ಧರಾದವರಿಗೆ ಹಾಲು ಹಿಂಡುವುದಿಲ್ಲ. ಬಹಿರಂಗದಲ್ಲಿ ಸ್ನಾನ ಮಾಡಿ ಶುಚಿರ್ಭೂತರಾಗಿರಬೇಕು. ಅಂತರಂಗ ಶುದ್ಧಿಗಾಗಿ ದೇವನ ಪೂಜೆ, ಧ್ಯಾನ ಮಾಡಿರಬೇಕು. ಅಂದರೆ ಮಾತ್ರ ಅದು ಹಾಲು ಕರೆಯುತ್ತದೆ. ಬಾಲದಲ್ಲಿ ಬೆಳಕು ಇರುವ ಮಿಂಚು ಹುಳವನ್ನು ನೋಡಿ ನರಿಯು ತಾನೂ ಬೆಂಕಿಯಲ್ಲಿ ಬಾಲವನ್ನು ಇಟ್ಟು ಉರಿಸಿದರೆ ಹೊನ್ನಿಹುಳದ ಸೌಂದರ್ಯ ನರಿಗೆ ಬರಬಹುದೆ?

ಈ ಹೋಲಿಕೆಗಳನ್ನೆಲ್ಲ ಕೊಟ್ಟು ಗುರು ಬಸವಣ್ಣನವರು ತಮ್ಮನ್ನು ನಿರ್ಭಾಗ್ಯರೆಂದು ಕರೆದುಕೊಳ್ಳುವರು. ನಿಜ ಶರಣರು ಪರುಷದ ಗಿರಿಯಂತೆ; ಸ್ಪರ್ಶಿಸಿದ ಅಜ್ಞಾನಿಗಳನ್ನು ಸುಜ್ಞಾನಿಗಳನ್ನಾಗಿ ಮಾಡುವರು, ರಸದ ಭಾವಿಯಂತೆ ಅವಲೋಹದಂತಿರುವ ಭವಿಗಳನ್ನು ಭಕ್ತರನ್ನಾಗಿ ಮಾಡುವರು. ಶರಣರು ಧನದ ನಿಧಿಯಂತೆ ಜ್ಞಾನ ಸಂಪತ್ತಿನಿಂದ ಶೋಭಿಸುವವರು. ಅವರು ಕಾಮಧೇನುವಿನಂತೆ. ಅದು ಹೇಗೆ ಹಾಲನ್ನು ಕೊಟ್ಟು ಸಲಹುವುದೋ ಹಾಗೆ ಶರಣರು ಅನುಗ್ರಹದ ಹಾಲನ್ನು ಈಯುವರು. ಹೊನ್ನಹುಳವ ಕಂಡು ನರಿಯು ಬಾಲಸುಟ್ಟುಕೊಂಡು ಅನುಕರಿಸಲು ಹೋದಂತೆ ನಾನು ಶರಣ ಲಾಂಛನಗಳನ್ನು ಧರಿಸಿ ಶರಣನೆಂಬಂತೆ ತೋರಿಸಿಕೊಂಡ ಮಾತ್ರಕ್ಕೆ ಶರಣನಾಗಬಹುದೆ? ಏನು ಮಾಡಲಿ ನನ್ನಲ್ಲಿ ಪುಣ್ಯ ಸಂಪತ್ತಿಲ್ಲ. ಹೀಗಾಗಿ ಶರಣರ ದರ್ಶನವಾಗುತ್ತಿಲ್ಲ. ಅಂಧಕನು ಪರುಷದ ಗಿರಿಯನ್ನು ಕಾಣಲಾರದಂತೆ ನಾನು ಸಹ ಶರಣರನ್ನು ಗುರುತಿಸಲಾಗುತ್ತಿಲ್ಲ ಎಂದು ಗುರು ಬಸವಣ್ಣನವರು ಪರಿತಾಪ ಪಡುವರು.

## 272. ದೇವನಿಗಾಗಿ ಹಂಬಲ

ಎಂತಕ್ಕೆ ನಾ ನಿಮ್ಮ ದೇವರೆಂದರಿದೆನು ?
ಅಂತಾಗಿ ನೀವೆನ್ನನಾರೆಂದಯಿರಿ!
ನಂಬಲರಿಯೆ, ನಂಬಿಸಲರಿಯೆ,
ಒಲಿಯಲರಿಯ ಒಲಿಸಲರಿಯೆ !
ಲಿಂಗದೇವಾ, ಕೇಳಯ್ಯಾ
ಕೋಟಿ ಕೋಟಿ ವರುಷ ಕೋಟಲೆಗೊಂಡೆನಯ್ಯ. - ಬ.ವ.ದೀ.270

ಸಾಧಕಾವಸ್ಥೆಯಲ್ಲಿ ಒಂದು ಮಾನಸಿಕ ಸ್ಥಿತಿ ಬರುವುದು. ಆಗ ಸಾಧಕನು ದೇವರ ಕೃಪೆಗಾಗಿ ಹಂಬಲಿಸುವನು. ದೇವನೊಡನೆ ಸಂಭಾಷಿಸುವಾಗ ಕೋಪ - ತಾಪ ಪ್ರದರ್ಶಿಸುವನು. ಮೂದಲಿಸುವನು; ದೇವನೊಡನೆ ಮುನಿಸಿಕೊಳ್ಳುವನು. ಇದು ಒಂದು ರೀತಿಯಲ್ಲಿ ಮಗುವು ತಾಯಿಯೊಡನೆ ಮಾಡುವ ಮುನಿಸಿನಂತೆ ಇರುತ್ತದೆ.

"ಏನು ಕಾರಣ ನಾನು ನಿನ್ನ ದೇವರು ಎಂದು ಅರಿದೆನು? ಕರುಣಾಮಯಿ, ಭಕ್ತವತ್ಸಲ ಎಂದಲ್ಲವೆ. ಆದರೆ ನೀನೋ ನನ್ನ ಹೃದಯದ ಭಾವನೆ, ತುಡಿತವನ್ನು ಅರಿಯುತ್ತಲಿಲ್ಲ. ಏನು ಮಾಡಲಿ? ಹೇಗೆ ದೃಢವಾಗಿ ನಾನು ನಂಬಬೇಕೋ ಎಂಬುದು ನನಗೆ ತಿಳಿಯಲಿಲ್ಲ. ಇನ್ನು ನಿನ್ನನ್ನು



ಹೇಗೆ ನಂಬಿಸಬೇಕು, ನನ್ನ ಹೃದಯವನ್ನು ಹೇಗೆ ತೆರೆದಿಡಬೇಕೋ ಅದೂ ತಿಳಿಯುತ್ತಲಿಲ್ಲ. ಪರಿಶುದ್ಧ ಮನಸ್ಸಿನಿಂದ ಒಲಿಯುವುದೂ ನನಗೆ ಗೊತ್ತಿಲ್ಲ. ನಿನ್ನನ್ನು ಒಲಿಸುವುದೂ ಗೊತ್ತಿಲ್ಲ. ಹೀಗಾಗಿ ನಿಸ್ಸಹಾಯಕ ಭಾವದಿಂದ ನಾನು ಖಿನ್ನನಾಗುತ್ತಿದ್ದೇನೆ. ಲಿಂಗದೇವಾ, ಕೋಟಿ ಕೋಟಿ ವರುಷ ನಾನು ಕೋಟಲೆಗೊಳ್ಳುತ್ತಿದ್ದೇನೆ ಎಂದು ತಮ್ಮ ಪರಿತಾಪವನ್ನು ಹೇಳಿಕೊಳ್ಳುತ್ತಿದ್ದಾರೆ. ವ್ಯಕ್ತಿಯು ಬದುಕುವುದೇ ಹಲವು ದಶಕ ಕಾಲ. ಅಂದಾಗ ಕೋಟಿ ವರುಷ ಕೋಟಲೆಗೊಳ್ಳಲೆಂತು ಸಾಧ್ಯ? ಎಂದು ಯಾರಾದರೂ ಪ್ರಶ್ನಿಸಬಹುದು. ಲಿಂಗದೇವ ಪತಿಯ ಉತ್ಕಟ ವಿರಹದಲ್ಲಿ ಕಳೆಯುವ ಒಂದೊಂದು ಗಳಿಗೆಯೂ ಒಂದು ಕೋಟಿ ವರ್ಷದಷ್ಟು ಸುದೀರ್ಘ, ಅಸಹನೀಯ ಎಂದು ಇದರ ಅಂತರಾರ್ಥ.

## 273. ದೇವ ವಿರಹ

ಅರಿಶಿಣವನೇ ಮಿಂದು, ಹೊಂದೊಡಿಗೆಯನೆ ತೊಟ್ಟು
ಪುರುಷನ ಒಲವಿಲ್ಲದ ಲಲನೆಯಂತೆ ಆಗಿದ್ದೆನಯ್ಯಾ.
ವಿಭೂತಿಯನೆ ಪೂಸಿ, ರುದ್ರಾಕ್ಷಿಯನೆ ಕಟ್ಟಿ
ಶಿವ ನಿಮ್ಮೊಲವಿಲ್ಲದಂತೆ ಆಗಿದ್ದೆನಯ್ಯಾ
ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ
ನೀನೊಲಿದಂತೆ ಸಲಹಯ್ಯಾ ಲಿಂಗದೇವ. -ಬ.ವ.ದಿ. 271

ದೇವ ವಿರಹ ಭಾವವೇ ಇಲ್ಲೂ ಮುಂದುವರಿದಿದೆ. ಈ ಸ್ಥಿತಿಗೆ ಸಾಧಕನ ಜೀವನದ ಕಾಳರಾತ್ರಿ (Dark night of the soul) ಎನ್ನುತ್ತಾರೆ. ಈಗ ಧರ್ಮಪಿತರು ತಮ್ಮನ್ನು ವಿರಹಿಣಿಯೋರ್ವಳ ಸ್ಥಾನದಲ್ಲಿ ನೋಡಿಕೊಳ್ಳುತ್ತಾರೆ. ನವ ವಿವಾಹಿತೆ, ತನ್ನ ಪ್ರಿಯ ಪತಿ ಬರುತ್ತಾನೆ ಎಂದು ಚೆಂದಾಗಿ ಸಿಂಗರಿಸಿಕೊಂಡು ದಾರಿ ಕಾಯುತ್ತಿದ್ದಾಳೆ. ಎಣ್ಣೆ - ಅರಿಶಿಣ ಹಚ್ಚಿಕೊಂಡು ಮಿಂದಿದ್ದಾಳೆ. ಬಂಗಾರದ ಒಡವೆಗಳನ್ನೆಲ್ಲ ಹಾಕಿಕೊಂಡು ಅಲಂಕರಿಸಿಕೊಂಡಿದ್ದಾಳೆ, ಈಗ ಬರ್ತಾನೆ, ಆಗ ಬರ್ತಾನೆ ಎಂದು ದಾರಿ ಕಾಯುತ್ತಿದ್ದಾಳೆ. ಪ್ರಿಯ ಪತಿ ಬರಲೇ ಇಲ್ಲ. ಓರಣವಾಗಿ ಬಾಚಿಕೊಂಡ ಕೂದಲು ನಿಧಾನವಾಗಿ ಕೆದರುತ್ತಿದೆ. ಮುಡಿದ ಹೂವು ಬಾಡುತ್ತಿದೆ. ಮುಖದ ಅಲಂಕಾರ ನಿರಾಶೆಯಿಂದ ಮಂಕಾಗುತ್ತಿದೆ. ಪತಿಯ ಒಲವು ದೊರೆಯದ ಲಲನೆಯು ಚಟಪಟಿಸುತ್ತಾಳೆ.

ಶರಣ ಸತಿಯಾಗಿ ಗುರು ಬಸವಣ್ಣನವರು ದೀಕ್ಷಾ ನಂತರ ಪೂಜೆ ಮಾಡುತ್ತ ವಿಭೂತಿಯ ಲೇಪನ ಮಾಡಿಕೊಂಡು, ರುದ್ರಾಕ್ಷಿಯ ತೊಡಿಗೆಗಳನ್ನು ತೊಟ್ಟುಕೊಂಡು ಹಂಬಲಿಸುತ್ತ ದೇವ ಪತಿಯ ಅನುಗ್ರಹಕ್ಕಾಗಿ ಹಂಬಲಿಸುತ್ತಿದ್ದಾರೆ. "ಕೆಟ್ಟು ಬಾಳುವರಿಲ್ಲ ಎಮ್ಮವರ ಕುಲದಲ್ಲಿ" ಎಂಬ ವಾಕ್ಯ ಅದ್ಭುತವಾದ ಹೇಳಿಕೆ. ಈವರೆಗೂ ಶರಣರ ಕುಲದಲ್ಲಿ ಯಾರೂ ಕೆಟ್ಟು ಬಾಳುತ್ತಿಲ್ಲ. ಏಕೆಂದರೆ ನೀನು ಈವರೆಗೂ ಯಾರಿಗೂ ಮೋಸ, ವಂಚನೆ ಮಾಡಿಲ್ಲ. ಲೌಕಿಕ ಗಂಡಸರಂತೆ ಹೆಂಡತಿಗೆ ಮೋಸ ಮಾಡುವುದು, ಕೈ ಬಿಡುವುದು ನಿನ್ನ ಹವ್ಯಾಸವಲ್ಲ. ಹೀಗಿದ್ದೂ, ನನ್ನನ್ನು ಮಾತ್ರ ಏಕೆ ಕಾಡಿಸುತ್ತಿದ್ದೀಯೆ? ಹೋಗಲಿ ಬಿಡು, ನಾನಾದರೂ ಏಕೆ ಚಿಂತೆ ಮಾಡಲಿ, ಉದ್ವಿಗ್ನಗೊಳ್ಳಲಿ? ನಿನಗೆ ಮನಸ್ಸು ಬಂದಾಗ ಒಲಿದು, ನನ್ನನ್ನು ಸಲಹು" ಎಂದು ಸಾಧಕ ಬಸವಣ್ಣನವರು ಶರಣಾಗತ ಭಾವ ಹೊಂದುತ್ತಿದ್ದಾರೆ.

## 274. ಸ್ವದೂಷಣೆ

ಉದಯಾಸ್ತಮಾನವೆನ್ನ ಬೆಂದ ಬಸುರಿಂಗೆ ಕುದಿಯಲಲ್ಲದೆ
ನಿಮ್ಮ ನೆನೆಯಲು ತೆರಹಿಲ್ಲಯ್ಯಾ,
ಎಂತೋ! ಲಿಂಗ ತಂದೆ, ಎಂತಯ್ಯಾ ಎನ್ನ ಪೂರ್ವಲಿಖಿತ?
ಬೆರಣೆಯನಾಯಲಲ್ಲದೆ ಅಟ್ಟುಣ್ಣಲು ತೆರಹಿಲ್ಲೆನಗೆ ;
ನೀ ಕರುಣಿಸು ಲಿಂಗದೇವಾ. - ಬ.ವ.ದೀ.272

ದೇವನ ಒಲುಮೆಯಾಗುವುದು ತಡವಾದಂತೆಲ್ಲ ಒಂದು ಕ್ಷಣವೂ ಒಂದು ವರ್ಷದಂತೆ ದೀರ್ಘವಾಗುತ್ತಿದೆ. 'ಈ ತಡಕ್ಕೆ ಏನು ಕಾರಣ? ನನ್ನಲ್ಲೇ ತಪ್ಪಿದೆ, ನಾನೇ ಕಾರಣ' ಎಂದು ಚಟಪಟಿಸುತ್ತಾರೆ ಸಾಧಕ ಜೀವಿ ಬಸವಣ್ಣನವರು. "ಈ ಬಸಿರು ಅರ್ಥಾತ್ ಶರೀರ ಉರಿಯುವ ಕುಲುಮೆಯಂತೆ. ಇದರ ಜಠರಾಗ್ನಿಗೆ ಆಹಾರವನ್ನು ಹಾಕುವುದರಲ್ಲೇ ನನ್ನ ಉದಯ ಮತ್ತು

ಅಸ್ತಮಾನಗಳು ಮುಗಿದು ಹೋಗುತ್ತವೆ. ಹೀಗಾಗಿ ಲಿಂಗದೇವನ ಸ್ಮರಣೆಗೆ ಪುರುಷೊತ್ತೇ ಸಿಗದು. ಲಿಂಗ ತಂದೆ ಏನು ಮಾಡಲಿ? ಹಿಂದಿನ ಜನ್ಮದ ನನ್ನ ಹಣೆಯ ಬರಹ. ಜೀವಮಾನ ಪರ್ಯಂತರ ಬೆರಣೆಯನ್ನು ಆಯುವುದರಲ್ಲೇ ಆಯುಷ್ಯ ಸವೆಯುತ್ತಲಿದೆ; ಅಡಿಗೆ ಮಾಡಿ ಉಂಡು ಆನಂದಿಸಲು ಅವಕಾಶ ಲಭ್ಯವಾಗುತ್ತಿಲ್ಲ. ನನ್ನ ಕರುಣಾಜನಕ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ನೀನೇ ಅನುಗ್ರಹಿಸು ಲಿಂಗದೇವಾ."

## 275. ಹೊಯ್ದಾಡುವ ಭಕ್ತಿ

ತಾಮಸ ಮುಸುಕಿ ಕಂಗಳ ಕೆಡಿಸಿತ್ತೆನ್ನ ಭಕ್ತಿ;
ಕಾಮವೆಂಬ ಅಗ್ನಿಗೆ ಮುರಿದಿಕ್ಕಿತ್ತೆನ್ನ ಭಕ್ತಿ;
ಉದರಕ್ಕೆ ಕುದಿಕುದಿದು ಮುಂದುಗೆಡಿಸಿತ್ತೆನ್ನ ಭಕ್ತಿ
ಇದಿರನಾಶ್ರಯಿಸಲು ಹೋಯಿತ್ತೆನ್ನ ಭಕ್ತಿ;
ಹೆಣಮೂಲ ನಾನು ಲಿಂಗದೇವ,
ಕ್ಷಣ ಹದುಳವಿರದೆ ಬಾಯ ಟೊಣೆದು ಹೋಯಿತ್ತೆನ್ನ ಭಕ್ತಿ - ಬ.ವ.ದೀ.273

ಹಸಿವು - ತೃಷೆ ಕಾಯಗುಣ, ಕಾಮಕ್ರೋಧಾದಿ ಮನೋವಿಕಾರಗಳು, ತಾಮಸತನವು ಭಾವವಿಕಾರ - ಈ ಮೂರು ಸಾಧಕನನ್ನು ಬಹುವಾಗಿ ಬಾಧಿಸುತ್ತವೆ.

ತಾಮಸತನದಿಂದ ವ್ಯಕ್ತಿ ಮತಿಮಂದನಾಗುತ್ತಾನೆ. ಸಿಕ್ಕಾಪಟ್ಟೆ ತಾಮಸಕೋಪ ಎರಗಿತು ಎಂದುಕೊಳ್ಳೋಣ. ಆಗ ಅವನಿಗೆ ತಾನು ಏನು ಆಡುತ್ತಿದ್ದೇನೆ, ಏನು ಮಾಡುತ್ತಿದ್ದೇನೆ ಎಂಬ ಪರಿವೆ ಇರದು. ಕಾಮಾತುರಾಣಾಂ ನ ಭಯಂ ನ ಲಜ್ಜ ಕ್ರೋಧಾತುರಾಣಾಂ ನ ಗುರು ನ ಮಿತ್ರ ಎಂಬ ಸುಭಾಷಿತವಿದೆ. ಗುರುವೇ ಇರಲಿ, ತಾಯಿ ತಂದೆಯೇ ಇರಲಿ ತಾಮಸ ಕೋಪ ಎರಗಿದ ವ್ಯಕ್ತಿ ಹುಚ್ಚನಂತೆ ವರ್ತಿಸುವನು. ಎದುರು ನಿಂತವರು ಯಾರು ಎಂಬ ಕಣ್ಣಿನ ನೋಟವೇ ಮಂದವಾಗಿ ಬಿಡುತ್ತದೆ. ತಾಮಸ ಉದ್ರೇಕ ಇಳಿದ ಮೇಲೆ ಪಶ್ಚಾತ್ತಾಪವಾಗುವುದಾದರೂ ಆ ಕೋಪದ ಭರಾಟೆಯಲ್ಲಿ ಆಗಬಾರದ ಅನಾಹುತ ಆಗಿಬಿಟ್ಟಿರುತ್ತದೆ, ತಾಮಸತನದಿಂದ ದುಡುಕಿ ಕೆಲವರು ನಂತರ ಪಶ್ಚಾತ್ತಾಪಪಟ್ಟು ಕ್ಷಮೆ ಕೇಳುವರು. ಮತ್ತೆ ಕೆಲವರು ಹ್ಯಾವ (ಹಠ) ಸಾಧಿಸುವರು; ಅದು ದೊಡ್ಡಸ್ಥಿಕೆ ಎಂಬಂತೆ ಹೇಳಿಕೊಳ್ಳುವರು. ಹೀಗೆ ತಾಮಸತನವು ವಿವೇಚನಾ ಶಕ್ತಿಗೆ ಆವರಣಗೊಳ್ಳುವ ಒಂದು ಮಾಯೆ!

ಇನ್ನು ಮತ್ತೊಂದು, ಕಾಮಾಗ್ನಿ. ಇದು ಉದ್ರೇಕಗೊಳ್ಳುತ್ತಲೇ ತಾನು ಏನು ಮಾಡುತ್ತಿದ್ದೇನೆ ಎಂಬುದನ್ನೇ ಮರೆಸಿ ಬಿಡುತ್ತದೆ. ಈ ಅಗ್ನಿಗೆ ವ್ಯಕ್ತಿಗಳ ಹಲವಾರು ಆದರ್ಶಗಳು, ಮೌಲ್ಯಗಳು ಆಹುತಿಯಾಗುತ್ತವೆ. ಇನ್ನು ಎಲ್ಲಕ್ಕಿಂತ ಮಿಗಿಲು ಉದರದ ಜಠರಾಗ್ನಿ.ಇದು ತುಂಬದೆ ಇರುವ ಚೀಲ. ಹಾಕಿದಷ್ಟೂ ಪುನಃ ಬೇಡುತ್ತಲೇ ಇರುತ್ತದೆ. ಹಸಿವೆಯ ಸಂಕಟ ತಾಳಲಾರದೆ ವ್ಯಕ್ತಿ ದೈನ್ಯತೆಯಿಂದ ಅಂಗಲಾಚುತ್ತಾನೆ. ಮತಿಗೆಟ್ಟು ಅನ್ಯರನ್ನು ಹೊಗಳುತ್ತಾನೆ. ಎಲ್ಲ ಆದರ್ಶಗಳನ್ನು ಕೈ ಬಿಡುವ ಸಾಧ್ಯತೆ ಇದೆ.

ಹೀಗೆ ಭಕ್ತಿಯು ಹೊಯ್ದಾಡುತ್ತ ಹಸಿವು -ತೃಷೆ, ಕಾಮ - ಕ್ರೋಧ, ತಾಮಸತನಗಳಿಂದ ದುರ್ಬಲಗೊಳ್ಳುತ್ತದೆ ಮತ್ತು ಇತರರನ್ನು ಆಶ್ರಯಿಸುತ್ತದೆ. ತನ್ನ ಸ್ವಂತಿಕೆಯನ್ನು, ಧೀಮಂತಿಕೆಯನ್ನು ಆತ್ಮಬಲವನ್ನು ಕಳೆದುಕೊಳ್ಳುತ್ತದೆ. ಪತ್ನಿಯ ಕಾಮತೃಪ್ತಿಯಿಂದಾಗಿ ತಾಯಿ -ತಂದೆಯನ್ನು ಮರೆತು ವೃದ್ಧರಾದಾಗ ಅವರನ್ನು ಕೈ ಬಿಡುತ್ತಾನೆ, ಹಸಿವಿನ ತೃಪ್ತಿಗಾಗಿ ಕೂಲಿಕೊಡುವ ಒಡೆಯನನ್ನು ಆಶ್ರಯಿಸಿದರೆ, ಕಾಮಕ್ಕಾಗಿ ಪತ್ನಿಯನ್ನು (ಅಥವಾ ಪರಸ್ತ್ರೀಯನ್ನು) ಆಶ್ರಯಿಸುತ್ತಾನೆ. ಹೆಣದ ಸಮಾನವಾದ ಆದರ್ಶರಹಿತ ನಿಲುವು ಅವನದಾಗುತ್ತದೆ.

## 276. ಮಾನವರ ಆಸೆ ಬಿಡದು.

ಏನಿದ್ದೊಡೇನಿದ್ದದೊಲ್ಲದು ನಿಮ್ಮನುಭಾವಕ್ಕೆನ್ನ ಮನವು.
ಡಂಬಕನೆಂಬವ ನಾನು ಕಂಡಯ್ಯಾ
ಲಿಂಗದೇವನ ಪೂಜಿಸಿಯೂ ಮಾನವರಾಸೆ ಬಿಡದಾಗಿ. - ಬ.ವ.ದೀ.274



ಮನಸ್ಸು ಒಂದು ವಿಪತ್ಕಾರಕ ಆಯುಧ. ಬಹಳ ಎಚ್ಚರಿಕೆಯಿಂದ ಅದನ್ನು ನಿಯಂತ್ರಿಸಬೇಕು. ಪರಮಾತ್ಮನ ದಿವ್ಯಾನುಭವದ ರುಚಿಯನ್ನು ಆಸ್ವಾದಿಸುತ್ತ ಹೃದಯವು ಆನಂದವನ್ನು ಹೊಂದುತ್ತಲಿರುವಾಗಲೇ ಮನಸ್ಸು ತಟ್ಟನೆ ಬಹಿರ್ಮುಖವಾಗಿ ಬಿಡುವುದು. ಹಾಳು ಹರಟೆ ಹೊಡೆಯುವಾಗ ಉತ್ಸಾಹದಿಂದ ಭಾಗವಹಿಸುವ ಮನಸ್ಸು ಪೂಜೆ - ಧ್ಯಾನಕ್ಕೆ ಕುಳಿತುಕೊಳ್ಳುತ್ತಲೇ ಚಟಪಟಿಸತೊಡಗುವುದು. ನಾನು ಡಾಂಭಿಕ, ನಟನೆಗಾರ. ಲಿಂಗದೇವನನ್ನು ಪೂಜಿಸಿಯೂ ಮಾನವರ ಆಸೆ ಬಿಡದು. ಮತ್ತೆ ಬಂಧು, ಬಳಗ, ಮಿತ್ರರು, ಪರಿಚಿತರ ಒಲುಮೆ ಪಡೆಯಲು ಆತುರಪಡುವುದು.

## 277. ಸಿಕ್ಕದ್ದರಲ್ಲಿ ತೃಪ್ತಿ

ಬೆಲ್ಲವ ತಿಂದ ಕೋಡಗದಂತೆ ಸಿಹಿಯ ನೆನೆಯದಿರಾ, ಮನವೆ
ಕಬ್ಬ ತಿಂದ ನರಿಯಂತೆ ಹಿಂದಕ್ಕೆಳಸದಿರಾ, ಮನವೆ
ಗಗನವಡರಿದ ಕಾಗೆಯಂತೆ ದೆಸೆದೆಸೆಗೆ ಹಂಬಲಿಸದಿರಾ, ಮನವೆ
ಲಿಂಗದೇವನ ಶರಣರ ಕಂಡು ಲಿಂಗವೆಂದೆ ನಂಬು ಮನವೆ. - ಬ.ವ.ದೀ.275

ಒಂದು ಕೋತಿಗೆ ಆಕಸ್ಮಿಕವಾಗಿ ಬೆಲ್ಲದ ಉಂಡೆ ಸಿಕ್ಕಿದೆ. ಅದನ್ನು ಚಪ್ಪರಿಸಿ ಸವಿಯನ್ನು ನೋಡಿದೆ. ಸದಾ ಸಿಗಬೇಕು ಎಂದರೆ ಎಂತು ಸಾಧ್ಯ? ಆದರೆ ಬೆಲ್ಲದ ಸವಿ ನೋಡಿದ ಆ ಕೋಡಗ ಬೇರೆ ಆಹಾರವನ್ನು ಸ್ವೀಕರಿಸದೆ ಬರೀ ಬೆಲ್ಲದ ಸಿಹಿಯ ಬಗ್ಗೆ ನೆನಪು ಮಾಡಿಕೊಂಡರೆ ಹಸಿವು ಹಿಂಗುವುದೆ?

ಅದೇ ರೀತಿ ಕಬ್ಬನ್ನು ತಿಂದ ನರಿಯು ಅದರ ಸವಿಯಿಂದ ಪರಮಾನಂದ ಹೊಂದಿಬಿಟ್ಟು ನಂತರ ಬೇರೆ ಆಹಾರವನ್ನೇ ಮುಟ್ಟದೆ. ಕಬ್ಬಿನ ಸವಿಯನ್ನೇ ನೆನಪು ಮಾಡಿಕೊಂಡು ಉಪವಾಸವಿದ್ದರೆ ಆದೀತೆ? ಆಕಾಶದಲ್ಲಿ ಹಾರುತ್ತಿರುವ ಕಾಗೆ ಅತ್ತ ಇತ್ತ ಹಾರಾಡುತ್ತ ಎತ್ತ ಹೋಗಬೇಕು ಎಂಬ ಬಗ್ಗೆ ನಿರ್ಧಾರ ತೆಗೆದುಕೊಳ್ಳದೆ ಇದ್ದರೆ ಅದು ಕತ್ತಲಾಗುವ ಮುನ್ನವೆ ಒಂದು ನೆಲೆಯನ್ನು ಕಂಡುಕೊಳ್ಳಲು ಸಾಧ್ಯವೆ?

ಒಮ್ಮೆ ಒಂದು ಊರಿನಲ್ಲಿ ಬಸವ ಧರ್ಮ ಪೀಠದ ಜಂಗಮಮೂರ್ತಿಗಳಲ್ಲೊಬ್ಬರ ಪ್ರವಚನವಿತ್ತು. ಅಲ್ಲಿಂದ ಓರ್ವ ಭಕ್ತರು ಬಂದರು. ನಿಮ್ಮೂರಲ್ಲಿ ನಮ್ಮ ಸ್ವಾಮಿಗಳೊಬ್ಬರ ಪ್ರವಚನ ನಡೆಯುತ್ತಿದೆಯಷ್ಟೆ. ನೀವು ಹೋಗುತ್ತಿದ್ದೀರಾ? ಎಂದು ಕೇಳಿದೆ. ಇಲ್ಲ, ನಾವು ಪೂಜ್ಯ ಲಿಂಗಾನಂದ ಸ್ವಾಮಿಗಳ ಪ್ರವಚನ ಕೇಳಿದ್ದೇವೆ. ಅವರ ಪ್ರತಿಭೆ, ವಿದ್ವತ್ತಿಗೆ ಇವರಾರೂ ಸಮರಲ್ಲ. ಅದಕ್ಕೆ ಹೋಗುತ್ತಿಲ್ಲ. ಇವರ ಧೋರಣೆ ಹೇಗೆಂದರೆ ಒಮ್ಮೆ ಬೆಲ್ಲವನ್ನು ತಿಂದ ಕೋತಿ ಅದರ ನೆನಪನ್ನು ಮಾಡಿಕೊಳ್ಳುತ್ತ ಈಗ ಸಿಗುತ್ತಿರುವ ಆಹಾರವನ್ನು ಬಿಟ್ಟು ಕುಳಿತಂತೆ! ಒಮ್ಮೆ ಕಬ್ಬನ್ನು ತಿಂದ ನರಿಯು ಅದರ ಸವಿಯನ್ನೇ ಸ್ಮರಿಸುತ್ತ ಈಗ ಬೇರೆ ಆಹಾರವನ್ನು ಬಿಟ್ಟಂತೆ. ಒಂದು ವೇಳೆ ತಾತ್ವಿಕವಾದ ವ್ಯತ್ಯಾಸ, ದೋಷ ಇದ್ದರೆ ಬಿಟ್ಟು ಬಿಡಲಿ; ಪೂಜ್ಯ ಅಪ್ಪಾಜಿಯವರ ವಿಚಾರಧಾರೆಯನ್ನೇ ಪ್ರತಿಪಾದಿಸುವ ನಮ್ಮ ಧರ್ಮಪೀಠದವರೇ ಹೇಳುವಾಗ (ಪೂಜ್ಯ ಅಪ್ಪಾಜಿಯವರಷ್ಟು ವಾಗ್ಮಿತ್ವ ಇಲ್ಲವೆಂದು) ಕೇಳದೆ ಇರುವುದು ಹಾಸ್ಯಾಸ್ಪದವಾದುದು.

ದೆಸೆದೆಸೆಗೆ ಹಾರುವ ಕಾಗೆಯಂತಹ ಸ್ವಭಾವ ಲಿಂಗಾಯತ ಸಮಾಜಕ್ಕೆ ಬಹಳ ಅನ್ವಯವಾಗುತ್ತದೆ. ಧರ್ಮಗುರು ಬಸವಣ್ಣನವರು ಒಂದು ಸಮಗ್ರ ಮತ್ತು ಪರಿಪೂರ್ಣ ಧರ್ಮವನ್ನು, ಯೋಗವನ್ನು ಕೊಟ್ಟಿದ್ದರೂ ಅದನ್ನು ಅರಿಯದೆ, ಅಳವಡಿಸಿಕೊಳ್ಳದೆ ಎಲ್ಲ ಮಾರ್ಗಗಳಲ್ಲಿ ಹರಿಯುವ ದೌರ್ಬಲ್ಯ ಈ ಸಮಾಜದ್ದು. ಯಾರದಾದರೂ ಒಂದು ಹೊಸ ಪಂಥ ಕಂಡರೆ ಆಗಲೇ ಅವರ ಹಿಂದೆ ಹೋಗುವ ಪ್ರವೃತ್ತಿ ಇಲ್ಲಿಯದು. ಇದಕ್ಕೆ ಕಾರಣ ತನ್ನ ಧರ್ಮದ ಶ್ರೇಷ್ಠತೆಯ ಬಗ್ಗೆ ಜ್ಞಾನವಿಲ್ಲದಿರುವುದು. ಇಷ್ಟಲಿಂಗವನ್ನು ಧರಿಸುವ, ಆರಾಧಿಸುವ ಶರಣರನ್ನು ಕಂಡಾಗ ಅವರು ಲಿಂಗದೇವನ ಪ್ರತಿನಿಧಿಗಳೆಂದು ನಂಬಿ ಅವರ ಮಾರ್ಗದರ್ಶನದಲ್ಲಿ ಮುನ್ನಡೆಯಬೇಕು. ಎಂದು ಧರ್ಮಗುರು ಬಸವಣ್ಣನವರು ಆದೇಶಿಸುತ್ತಾರೆ. ಸಹ ಧರ್ಮೀಯರ ಸಂಬಂಧ ಕುರಿತು ಹೇಳುವಾಗ ಪ್ರತಿಯೊಬ್ಬನೂ ಭಕ್ತ ಇನ್ನೊಬ್ಬ ಸಹ ಧರ್ಮಿ ಜಂಗಮವಾಗುವನು.

## 278. ಕಿಂಕರತೆ

ಒಡೆಯನ ಕಂಡಡೆ ಕಳ್ಳನಾಗದಿರಾ, ಮನವೆ
ಭವದ ಬಾಧೆಯ ತಪ್ಪಿಸಿಕೊಂಬಡೆ
ನೀನು ನಿಯತನಾಗಿ ಭಯಭರಿತನಾಗಿ
ಅಹಂಕಾರಿಯಾಗದೆ ಶರಣೆನ್ನು, ಮನವೆ.
ಲಿಂಗದೇವನ ಶರಣರಲ್ಲಿ ಭಕ್ತಿಯನೊಲುವಡೆ
ಕಿಂಕಿಲನಾಗಿ ಬದುಕು, ಮನವೆ. - ಬ.ವ.ದೀ.276

ಧರ್ಮಪಿತ ಬಸವಣ್ಣನವರು ತಾಯಿಯು ಮಗುವಿಗೆ ನೀತಿ ಬೋಧೆಯನ್ನು ಮಾಡುವ ರೀತಿ ಮನವನ್ನು ಉದ್ದೇಶಿಸಿ ಬೋಧೆ ಮಾಡುವರು. ತಮ್ಮ ಮನಸ್ಸಿಗೆ ಹೇಳಿಕೊಂಡಿದ್ದಾರೆನ್ನಿಸಿದರೂ ಇಡೀ ಜಗತ್ತಿಗೆ ನೀತಿ ಬೋಧೆಯನ್ನು ಮಾಡಿದ್ದಾರೆ ಪ್ರಸ್ತುತ ವಚನದ ಮೂಲಕ.

ಒಡೆಯರ ಕೈಕೆಳಗೆ ಅನೇಕ ಸೇವಕರು ಕೆಲಸ ಮಾಡುತ್ತಿರುತ್ತಾರೆ. ಯಾರು ಪ್ರಾಮಾಣಿಕವಾಗಿ ದುಡಿಯುತ್ತಾರೋ ಅವರು ಒಂದೇ ರೀತಿ ತಮ್ಮ ಪಾಡಿಗೆ ತಾವು ಕಾರ್ಯನಿರತರಾಗಿರುತ್ತಾರೆ. ಅಪ್ರಾಮಾಣಿಕರು, ಮೈಗಳ್ಳರು ಸೋಮಾರಿಗಳಾಗಿಯೋ ಹರಟೆ ಹೊಡೆಯುತ್ತಲೋ ಕಾಲ ಕಳೆಯುತ್ತಿದ್ದು ಒಡೆಯರು ಬಂದ ತಕ್ಷಣ ಚುರುಕಾಗಿ ಕೆಲಸ ಮಾಡುವ ನಟನೆ ಮಾಡುವ ಕಳ್ಳರಾಗಿರುತ್ತಾರೆ. ಒಡೆಯನ ದೃಷ್ಟಿ ಬಿದ್ದಾಗ ಪ್ರಾಮಾಣಿಕರು ನಿರ್ಭಯರಾಗಿದ್ದರೆ ಮೈಗಳ್ಳರು ಕಳ್ಳನೋಟ ಪ್ರದರ್ಶಿಸುತ್ತಾರೆ. ಎಲೈ ಮನಸ್ಸೇ, ಇಂಥ ಕಳ್ಳ ನಾಟಕವನ್ನು ಪ್ರದರ್ಶಿಸಬೇಡ ಎಂದು ಮೈಗಳ್ಳರಿಗೆ ಬಸವಣ್ಣನವರು ಬೋಧೆ ಮಾಡಿರುವುದು ಬಹು ರಂಜನೀಯ ಎನ್ನಿಸುತ್ತದೆ.

ಹುಟ್ಟು ಸಾವುಗಳ ಭವದ ಬಾಧೆ ತಪ್ಪಿಸಿಕೊಳ್ಳಲು ಕೇವಲ ಪೂಜೆ-ಧ್ಯಾನ, ಯೋಗಾಭ್ಯಾಸ ಮುಂತಾದ ಧಾರ್ಮಿಕ, ಅಧ್ಯಾತ್ಮಿಕ ಕ್ರಿಯೆಗಳಷ್ಟೇ ಸಾಲದು, ಸಾಮಾಜಿಕ ನೀತಿಯೂ ಅಗತ್ಯ. ಅವು ಯಾವುವೆಂದರೆ 1. ನಿಯತ್ತು ಮತ್ತು 2. ವಿನಯ. ತಾನು ಕೈಗೊಂಡ ಉದ್ಯೋಗದಲ್ಲಿ ನಿಯತ್ತು ಬಹಳ ಮುಖ್ಯ. ಯಾರು ನೋಡಲಿ ಬಿಡಲಿ ತನ್ನ ಪಾಲಿನ ಕೆಲಸವನ್ನು ತಾನು ನಿಷ್ಠೆಯಿಂದ "ಕಾಯಕವೇ ಕೈಲಾಸ" ಎಂಬ ಸಮರ್ಪಣ ಮನೋಭಾವದಿಂದ ಮಾಡಬೇಕು. ಒಡೆಯ - ಸೇವಕ ಸಂಬಂಧದಲ್ಲಿ ವಿನಯವು ಬಹಳ ಮುಖ್ಯ. ಒಡೆಯನ ಎದುರು ಒರಟಾಗಿ ಉದ್ಧಟತನದಿಂದ ವರ್ತಿಸಬಾರದು ಭಯಭರಿತನಾಗಿ, ಅಹಂಕಾರಿಯಾಗದೆ ವಂದಿಸಬೇಕು ವಿನಯವು ಹೇಡಿತನವೇನಲ್ಲ ಒರಟುತನವು ಧೀರತನವೇನಲ್ಲ. ವಿನಯವು ಸುಸಂಸ್ಕೃತ ವ್ಯಕ್ತಿಯ ಲಕ್ಷಣ, ವ್ಯಕ್ತಿತ್ವಕ್ಕೆ ಮೆರಗು.

ಶರಣರೊಡನೆ ವ್ಯವಹರಿಸಬೇಕಾದರೂ ಅಷ್ಟೆ, ಭಕ್ತ ಎನಿಸಿಕೊಳ್ಳಬೇಕಾದರೆ ಕಿಂಕರತೆಯಿಂದ ವರ್ತಿಸಬೇಕು. ಅಂದರೆ ಮಾತ್ರ ಶರಣರೊಲುಮೆ, ಲಿಂಗದೇವನೊಲಿಮೆ ಎರಡೂ ಲಭ್ಯವಾಗುವುದು ವ್ಯಕ್ತಿಗಳು ಪರಧರ್ಮೀಯರೊಡನೆ ವ್ಯವಹರಿಸಬೇಕಾದರೆ ನಮಸ್ಕಾರ, ಗುಡ್ ಮಾರ್ನಿಂಗ್ ಮುಂತಾಗಿ ಹೇಳಬಹುದು. ಸಹ ಧರ್ಮೀಯರೊಡನೆ ವ್ಯವಹರಿಸುವಾಗ, ಪರಸ್ಪರ ಕಂಡೊಡನೆ ಶರಣು, ಶರಣು ಶರಣಾರ್ಥಿ ವಿನಿಮಯ ಮಾಡಿಕೊಳ್ಳಬೇಕು.

## 279. ಶರಣರೊಡನೆ ಬದುಕು

ಕೋಟ್ಯಾನು ಕೋಟಿ ಜಪವ ಮಾಡಿ ಕೋಟಲೆಗೊಳ್ಳಲದೇಕೆ ಮನವೆ?
ಕಿಂಚಿತು ಗೀತವೊಂದನಂತಕೋಟಿ ಜಪ!
ಜಪವೆಂಬುದೇಕೆ, ಮನವೆ?
ಲಿಂಗದೇವನ ಶರಣರ ಕಂಡು
ಆಡಿ ಹಾಡಿ ಬದುಕು ಮನವೆ? - ಬ.ವ.ದೀ.277

ಕೆಲವರು ಕೋಟಿ ಜಪ ಮಾಡಬೇಕು; ಕೋಟಿ ಜಪ ಬರೆಯಬೇಕು ಎಂಬ ವ್ರತ ಹಿಡಿಯುವರು. ಇದು ಕಾಯಕದ ಸಮಯವನ್ನು ಸೇವೆ ಮಾಡಬಹುದಾದ ಸಮಯವನ್ನು ಕಬಳಿಸಿ ಶ್ರಮಯವನ್ನು ವ್ಯರ್ಥಗೊಳಿಸುತ್ತದೆ. ಅದರ ಬದಲು ವಚನಗಳನ್ನು ಓದಿದರೆ, ಬರೆದರೆ ಅಪಾರ ಜ್ಞಾನ ಉಂಟಾಗುತ್ತದೆ. ಮಂತ್ರ ಜಪದಲ್ಲಿ ಭಕ್ತಿ ಮಾತ್ರ ಇದೆ. ವಚನಾಧ್ಯಯನದಲ್ಲಿ ಸಮ್ಯಕ್ ಜ್ಞಾನ, ವೈಚಾರಿಕತೆ ಭಕ್ತಿಯೊಡನೆ ಮೇಳೈಸುತ್ತವೆ.

ಒಂದು ಸಲ ಒಬ್ಬ ಗುರುಗಳನ್ನು ಭಕ್ತಿವಂತನಾದ ಶ್ರೀಮಂತನೊಬ್ಬ ಮನೆಗೆ ಆಹ್ವಾನಿಸಿ



ಕರೆದೊಯ್ದ. ಅವರ ಮನೆಯ ಕಪಾಟಿನಲ್ಲಿ ಬಹಳಷ್ಟು ಪುಸ್ತಕಗಳಿದ್ದವು. ಕಂಡು ಗುರುಗಳಿಗೆ ಸಂತೋಷವಾಯಿತು. "ಪರವಾಗಿಲ್ಲ ಒಳ್ಳೆಯ ಅಭಿರುಚಿ ಇದೆ. ಇವೆಲ್ಲ ನೀವು ಓದುವ ಪುಸ್ತಕಗಳೆ?" ಎಂದು ಗುರುಗಳು ಕೇಳಿದರು. ಇವೆಲ್ಲ ನಾನು ಬರೆದ ಪುಸ್ತಕ ಎಂದ ಆ ಶ್ರೀಮಂತ. "ಭಲೆ ಭಲೆ ಯಾವ ವಿಷಯದ ಮೇಲೆ ಬರೆದಿದ್ದೀರಿ." "ನಾನು ಕೋಟಿ ಜಪ ಮಾಡಬೇಕೆಂದು ನೋಟ್ ಬುಕ್‌ನಲ್ಲಿ ಮಂತ್ರವನ್ನು ಬರೆಯುತ್ತ ಬಂದಿದ್ದೇನೆ. ಅವೇ ಇವು" ಎಂದ. ಆಗ ಗುರುಗಳು ವಿಷಾದದಿಂದ, "ಇಷ್ಟು ನೋಟ್ ಬುಕ್ಕನ್ನು ಜಪ ಬರೆದು ವ್ಯರ್ಥ ಮಾಡುವ ಬದಲು ಬಡ ವಿದ್ಯಾರ್ಥಿಗಳಿಗೆ ಕೊಡಬಹುದಿತ್ತು. ಮಂತ್ರವನ್ನು ಬರೆಯುವ ಸಮಯವನ್ನು ಕಾಯಕಕ್ಕೆ, ಸಮಾಜ ಸೇವೆಗೆ ವಿನಿಯೋಗಿಸಬಹುದಿತ್ತು" ಎಂದರು.

ಮಂತ್ರವನ್ನು ಬರೆಯುವ ಬದಲು ಅದೇ ಸಮಯದಲ್ಲಿ ವಚನಗಳನ್ನು ಬರೆಯುತ್ತ ಹೋದರೆ ಅದರೊಳಗಣ ತತ್ವವು ಮನದಟ್ಟಾಗುತ್ತ ಹೋಗುವುದು. ಧರ್ಮಪಿತ ಬಸವಣ್ಣನವರು ಹೇಳುತ್ತಾರೆ ಜಪದ ಜಂಜಾಟ ಹಚ್ಚಿಕೊಳ್ಳುವ ಬದಲು ಶರಣರ ಕಂಡು, ಅವರ ಒಡನಾಡಿ ಅವರ ವಚನಗಳನ್ನು ಹಾಡಿ ತತ್ವಗಳನ್ನು ಅಳವಡಿಸಿಕೊಂಡು ಬದುಕನ್ನು ಸುಂದರಗೊಳಿಸಿಕೊಳ್ಳಬೇಕು.

## 280. ದೇವನ ಬೆಂಬತ್ತಬೇಕು

ಮನವೆ, ನಿನ್ನ ಜನ್ಮದ ಪರಿಭವವ ಮರೆದೆಯಲ್ಲಾ, ಮನವೆ!
ಲಿಂಗವ ನಂಬು ಕಂಡಾ, ಮನವೆ!
ಜಂಗಮವ ನಂಬು ಕಂಡಾ, ಮನವೆ!
ಲಿಂಗದೇವರ ಬಿಡದೆ ಬೆಂಬತ್ತು ಕಂಡಾ ಮನವೆ! - ಬ.ವ.ದೀ.278

ಒಬ್ಬ ವ್ಯಕ್ತಿಯನ್ನು ಎದುರಲ್ಲಿ ಕೂರಿಸಿಕೊಂಡು ಮಾನವಾ, ನೀನು ಹೀಗೆ ಮಾಡಬೇಡ, ಈ ರೀತಿ ಬದುಕುವುದನ್ನು ರೂಢಿಸಿಕೊ ಎಂಬ ಹಿತೋಪದೇಶವನ್ನು ಓರ್ವ ತತ್ವಜ್ಞಾನಿ ಹೇಳುವಂತೆ, ಮನಸ್ಸನ್ನೇ ಎದುರಲ್ಲಿ ನಿಲ್ಲಿಸಿಕೊಂಡು ಅದಕ್ಕೆ ಹಿತೋಪದೇಶ ಮಾಡುತ್ತ ಜಗತ್ತಿಗೆ ಮಾರ್ಗದರ್ಶನ ಮಾಡುವ ಧರ್ಮಪಿತ ಬಸವಣ್ಣನವರ ಶೈಲಿ ಬಹು ರಮ್ಯ.

"ಎಲೆ ಮನಸ್ಸೆ, ನಿನ್ನಲ್ಲಿ ಚಿಂತನ ಶಕ್ತಿಯು ಅಂತರ್ಗತವಾಗಿದೆ; ಸ್ವಲ್ಪ ಆಲೋಚಿಸಿ ನೋಡು. ಜನ್ಮಜನ್ಮಾಂತರದ ಪರಿಭವ, ಕಷ್ಟ ಕೋಟಲೆ ಎಲ್ಲವನ್ನು ಮರೆತು ಪುನಃ ಭವ ಚಕ್ರದಲ್ಲಿ ಸುತ್ತುತ್ತಿರುವೆಯಲ್ಲ! ನಿನಗಿರುವುದು ಒಂದೇ ಪರಿಹಾರ, ಸೃಷ್ಟಿಕರ್ತನಾದ ದೇವನನ್ನು ದೃಢವಾಗಿ ನಂಬು. ಆ ದೇವನ ಪ್ರತಿನಿಧಿಯಾದ, ಜೀವನ ಮಾರ್ಗದರ್ಶಕನಾದ ಜಂಗಮನನ್ನೂ ನಿಶ್ಚಲವಾಗಿ ನಂಬು. ಜೀವನದಲ್ಲಿ ಏನೇ ಏರಿಳಿತ, ನೋವು ನಲಿವು, ಕಷ್ಟ ಸುಖಗಳು ಬರಲಿ ಲಿಂಗದೇವನನ್ನು ಬಿಡದೆ ಬೆಂಬತ್ತು."

## 281. ಅನ್ಯರ ಬೇಡಿ ಕೆಡಬೇಡ

ಸುರರ ಬೇಡಿದಡಿಲ್ಲ, ನರರ ಬೇಡಿದಡಿಲ್ಲ
ಬರಿದೆ ಧೃತಿಗೆಡಬೇಡ ಮನವೆ!
ಆರನಾದಡೆಯೂ ಬೇಡಿ ಬೇಡಿ
ಬರಿದೆ ಧೃತಿಗೆಡಬೇಡ ಮನವೆ!
ಲಿಂಗದೇವನಲ್ಲದೆ,
ಆರ ಬೇಡಿದಡಿಲ್ಲ ಮನವೆ! - ಬ.ವ.ದೀ.279

ಪುರಾಣಗಳು ಹಲವಾರು ದೇವತೆಗಳನ್ನು ಕಲ್ಪನೆ ಮಾಡಿಕೊಂಡಿವೆ. ನೀರಿಗೊಬ್ಬ ದೇವತೆ, ಬೆಂಕಿಗೊಬ್ಬ ದೇವತೆ, ದುಡ್ಡಿಗೆ ಒಬ್ಬ ದೇವತೆ, ವಿದ್ಯೆಗೊಬ್ಬ ದೇವತೆ! ಇವೆಲ್ಲ ಕಾಲ್ಪನಿಕ, ಬಂಜೆಯ ಮಕ್ಕಳಂತೆ. ದೇವರೂ ಅಲ್ಲದೆ ಐತಿಹಾಸಿಕ ಮಹಾತ್ಮರೂ ಅಲ್ಲದ ಈ ಕಾಲ್ಪನಿಕ ದೇವತೆಗಳು ನಮಗೆ ಏನನ್ನಾದರೂ ಕೊಡುತ್ತವೆ ಎಂಬುದು ಭ್ರಾಂತಿ ಮಾತ್ರ. ಆದ್ದರಿಂದ ನಿನಗೆ ಬೇಕಾಗುವ ಸಂಪತ್ತಿಗಾಗಿ, ಆವಶ್ಯಕತೆಗಾಗಿ ದೇವತೆಗಳನ್ನು ಆಶ್ರಯಿಸಬೇಡ. ಇನ್ನು ಮಾನವರು, ಸಿರಿವಂತರು ಏನನ್ನಾದರೂ ಕೊಡುತ್ತಾರೆಂದು ದೈನ್ಯತೆಯಿಂದ ಅವರನ್ನು ಬೇಡಬೇಡ. ಅವರಿಂದ ಏನೂ ಸಿಗದೆ ಇದ್ದ ಮಾತ್ರಕ್ಕೆ ಧೈರ್ಯ, ಸ್ಥೈರ್ಯ ಕಳೆದುಕೊಳ್ಳಬೇಡ. ಸರ್ವಶಕ್ತನಾದ ಸೃಷ್ಟಿಕರ್ತನಾದ ಲಿಂಗದೇವನನ್ನು ಬೇಡು. ನಿನ್ನ ಎಲ್ಲ ಇಷ್ಟಾರ್ಥಗಳನ್ನು ಲಿಂಗದೇವನು ಪೂರೈಸುವನು.

## 282. ಶರಣರ ಬೇಡು

ಆಡಿ ಅಳಿಸದಿರಾ, ಲೇಸ ಮಾಡಿ ಮರುಗದಿರಾ, ಎಲೆ ಮನವೆ.
ಕೂಡಿ ತಪ್ಪದಿರಾ, ಬೇಡಿದವರಿಗಿಲ್ಲೆನ್ನದಿರು ಕಂಡಾ.
ನಾಡ ಮಾತು ಬೇಡ; ಸೆರಗೊಡ್ಡಿ ಬೇಡು
ಲಿಂಗದೇವನ ಶರಣರ. - ಬ.ವ.ದೀ.280

'ಮಾತನ್ನಾಡಿ ಅಳಿಸದಿರು,' ಬಹಳ ಮಹತ್ವಪೂರ್ಣವಾದ ಬೋಧನೆ. ಒಬ್ಬ ವ್ಯಕ್ತಿ ಏನೋ ಒಂದು ಮಾತನ್ನು ಆಡಿಬಿಡುತ್ತಾನೆ. ಅದಕ್ಕೆ ವಿರೋಧ, ಆಕ್ಷೇಪ ವ್ಯಕ್ತವಾದಾಗ ತಾನು ಆ ಮಾತನ್ನು ಆಡಿಯೇ ಇಲ್ಲವೆಂದು ಅಳಿಸಲು ಹೋಗುತ್ತಾನೆ. ಇದು ತಪ್ಪು. ಒಂದು ವೇಳೆ ಹಾಗೆ ಆಡಿದ ಮಾತು ಸತ್ಯಕ್ಕೆ, ತತ್ವಕ್ಕೆ ಸಂಬಂಧಿಸಿದ್ದರೆ ತತ್ವನಿಷ್ಠುರನಾಗಿ ತಾನಾಡಿದ ಮಾತಿಗೆ ಬದ್ಧನಾಗಿರಬೇಕು. ಒಂದು ವೇಳೆ ಆ ಮಾತು ತನ್ನ ನಾಲಿಗೆ ಜಾರಿ ಬಂದ ಅಥವಾ ಆವೇಶದಲ್ಲಿ ಬಂದ ದುಡುಕಿನ ಮಾತು ಎನ್ನಿಸಿದರೆ ಆ ತಪ್ಪನ್ನು ಒಪ್ಪಿಕೊಂಡು, ಕ್ಷಮೆ ಕೇಳಬೇಕು. ಈ ಎರಡೂ ಮಾರ್ಗ ಬಿಟ್ಟು "ನಾನು ಹಾಗೆ ಆಡಿಯೇ ಇಲ್ಲ, ಇದು ಬೇರೆ ಯಾರದೋ ಸೃಷ್ಟಿ" ಎಂದು ತಪ್ಪಿಸಿಕೊಳ್ಳುವುದು ಶರಣನ ನಡೆಯಲ್ಲ. ಈ ಪದಪುಂಜವನ್ನು "ಆಡಿ ಅಳುಕದಿರಾ" ಎಂದು ಸಹ ಅರ್ಥೈಸಲು ಬರುತ್ತದೆ. ಕೆಲವೊಮ್ಮೆ ಅಂತರ್ ಪ್ರೇರಣೆಯಿಂದ ಕೆಲವು ಮಾತುಗಳು ಹೊರಬರುತ್ತವೆ. ಅವು ಪೂರ್ವನಿರ್ಧಾರಿತ ವಿರುವುದಿಲ್ಲ. ಆ ಮಾತು ಹೊರಬಂದಾಗ ಕೇಳಿದವರಿಗಿರಲಿ ಆಡಿದವರಿಗೇ ಆಶ್ಚರ್ಯವೆನಿಸುತ್ತದೆ. ಹಾಗಿದ್ದಾಗ ಆಡಿದವರು ಅಳುಕಬಾರದು. ಅದು ದೇವೇಚ್ಛೆ ಎಂದು ಭಾವಿಸಬೇಕು.

ಉದಾ: ಬಸವ ಕಲ್ಯಾಣದಲ್ಲಿ 1967ರಲ್ಲಿ ಜರುಗಿದ ಸರ್ಕಾರದ ಪ್ರಾಯೋಜಿತ ಅಷ್ಟಶತಮಾನೋತ್ಸವದಲ್ಲಿ ನನಗೆ ಮಾತನಾಡಲು ಅವಕಾಶ ಸಿಕ್ಕುದು ತೀರಾ ಆಕಸ್ಮಿಕ. ಅಂತರ್ ಪ್ರೇರಣೆಯಿಂದ ಮಹಿಳಾ ಜಗದ್ಗುರು ಪೀಠವನ್ನು ಸ್ಥಾಪಿಸುತ್ತೇನೆಂದು ನಾನು ಘೋಷಿಸಿದ್ದು ತೀರಾ ಅನಿರೀಕ್ಷಿತ. ಶ್ರೋತೃವೃಂದಕ್ಕೆ ಅಷ್ಟೇ ಅಲ್ಲ ಪೂಜ್ಯ ಗುರೂಜಿಯವರಿಗೂ ಅದನ್ನು ಕೇಳಿ ಆಶ್ಚರ್ಯ. ನನಗೂ ಆಶ್ಚರ್ಯ. ಅನೇಕರು ಆಕ್ಷೇಪಿಸಿದರು, ಪ್ರತಿರೋಧ ಒಡ್ಡಿದರು. ಆದರೆ ನಾವು ಎದೆಗೆಡಲಿಲ್ಲ. ಬಹುಶಃ ಅದು ಗುರು ಬಸವಣ್ಣನವರ ಆಶಯ. ಬಸವ ಕಲ್ಯಾಣದ ಪರಿಸರದಲ್ಲಿ ಸುಪ್ತವಾಗಿದ್ದು ನನ್ನ ಮೂಲಕ ಅಭಿವ್ಯಕ್ತವಾಗಿದೆ ಎಂದೇ ನಂಬಿ ಮುನ್ನಡೆದೆವು. ಇದಕ್ಕಾಗಿಯೇ ಗುರು ಬಸವಣ್ಣನವರು, ಆಡಿ ಅಳುಕದಿರಾ ಎಂದು ಹೇಳಿರಬಹುದು.

"ಲೇಸು ಮಾಡಿ ಮರುಗದಿರಾ" - ಒಳ್ಳೆಯದನ್ನು, ಪರಹಿತವನ್ನು ಮಾಡಿ ನಂತರ ಮರುಗಬಾರದು. ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ಧನ ಸಹಾಯ ಮಾಡಿರುತ್ತೇವೆ ಎಂದುಕೊಳ್ಳೋಣ. ಓದಿ ನೌಕರಿ ಸಿಕ್ಕ ಮೇಲೆ ಏನಾದರೂ ಕಾಣಿಕೆ ಸಲ್ಲಿಸಬೇಕು. ಅದರಿಂದ ಇನ್ನಷ್ಟು ಬಡ ವಿದ್ಯಾರ್ಥಿಗಳಿಗೆ ಸಹಾಯವಾಗುತ್ತದೆ ಎಂಬ ಋಣಭಾವವೂ ಬಹುಪಾಲು ಜನರಲ್ಲಿ ಇರುವುದಿಲ್ಲ. ಆಗ ಕೆಲವರು ಹೇಳುತ್ತಾರೆ. ಬಹುಪಾಲು ಜನರಲ್ಲಿ ಕೃತಜ್ಞತೆ ಇರುವುದಿಲ್ಲ; ಅಂಥವರಿಗೆ ಏಕೆ ಸಹಾಯ ಮಾಡಬೇಕು? ಈ ಪ್ರಶ್ನೆಗೆ ಉತ್ತರ ಲೇಸು ಮಾಡಿ ಮರುಗದಿರಾ ಎಂಬ ಮಾತಿನಲ್ಲಿದೆ. ಒಳ್ಳೆಯದನ್ನು ಮಾಡುವುದಷ್ಟೆ ನಮ್ಮ ಕರ್ತವ್ಯ. ಮರಳಿ ಅವರಿಂದ ಏನನ್ನೂ ಬಯಸಬಾರದು. ಮತ್ತು ಒಳ್ಳೆಯದು ಮಾಡಿದ್ದಕ್ಕೆ ಅವರಿಂದ ಉಪಕಾರ ಆಗಲಿಲ್ಲ ಎಂದು ಪರಿತಪಿಸಲೂ ಬಾರದು.

ಕೂಡಿ ತಪ್ಪದಿರಾ : ಗುರು-ಶಿಷ್ಯ, ಸ್ನೇಹಿತರು, ಪತಿ-ಪತ್ನಿ, ಶರಣ ಬಂಧುಗಳು ಇತ್ಯಾದಿ ಪರಸ್ಪರ ಸಂಬಂಧಗಳು ಏರ್ಪಡುತ್ತವೆ. ಕೆಲವೊಮ್ಮೆ ಬಿರುಕು, ಭಿನ್ನಾಭಿಪ್ರಾಯ ಉಂಟಾಗುತ್ತವೆ. ಸಾಧ್ಯವಾದಷ್ಟು ಬೆಸುಗೆ ಹಾಕಿಕೊಂಡು ಹೋಗಲು ಯತ್ನಿಸಬೇಕು.

ಬೇಡಿದವರಿಗೆ ಇಲ್ಲೆನ್ನದಿರು ಕಂಡಾ : ವೈಯಕ್ತಿಕ ಹಸಿವೆ, ಬಡತನಕ್ಕಾಗಿ ವ್ಯಕ್ತಿಯು ಬೇಡಬಹುದು. ವಿದ್ಯಾಭ್ಯಾಸ ಮುಂತಾದಕ್ಕೆ ಬೇಡಬಹುದು. ಅಥವಾ ಜಂಗಮನು ಧರ್ಮ ಪ್ರಚಾರಕ್ಕೆ, ಸಾಂಘಿಕವಾಗಿ ಸಮಾಜದ ಕೆಲಸಕ್ಕಾಗಿ ಬೇಡಬಹುದು. ಅವರವರ ಅಗತ್ಯಕ್ಕನುಸಾರವಾಗಿ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ವ್ಯಕ್ತಿಯು ಧನ ಸಹಾಯ ಮಾಡಬೇಕು.

ನಾಡ ಮಾತು ಬೇಡ : ಲೋಕದ ಜನರು ತಮಗೆ ತಿಳಿದಂತೆ ಅಭಿಪ್ರಾಯಗಳನ್ನು ಕೊಡುತ್ತಿರುತ್ತಾರೆ. ಲೋಕಾಭಿಪ್ರಾಯದಂತೆ ನಿರ್ಧಾರ ತೆಗೆದುಕೊಳ್ಳದೆ ತನ್ನ ಅಂತರಾತ್ಮದ ಅಭಿಪ್ರಾಯಕ್ಕೆ ತಲೆಬಾಗಬೇಕು.

ಸೆರಗೊಡ್ಡಿ ಬೇಡು ಶರಣರ : ಪ್ರಸಾದ ಭಿಕ್ಷೆಯಾಗಲಿ, ಜ್ಞಾನ ಭಿಕ್ಷೆಯಾಗಲಿ ಶರಣರಲ್ಲಿ



ಬೇಡಿ ಪಡೆಯಬೇಕು. ಗುರುಗಳು ಕರುಣ ಪ್ರಸಾದ ವಿತರಿಸುತ್ತಿರುತ್ತಾರೆ ಎಂದುಕೊಳ್ಳುವ. ಜನ ಸಂದಣಿ ಬಹಳವಿದ್ದಾಗ ಯಾರಿಗಾದರೂ ಕೊಡಲು ಮರೆಯಬಹುದು. ಆಗ ಪ್ರಸಾದವನ್ನು ಕೇಳಿಯಾದರೂ ಪಡೆಯಬೇಕು.

## 283. ಕಪಟತನ ಸಲ್ಲದು

ಹೃದಯ ಕತ್ತರಿ; ತುದಿ ನಾಲಿಗೆ ಬೆಲ್ಲಂ ಬೋ !
ಆಡಿಹೆನು ಏಂ ಬೋ, ಹಾಡಿಹೆನು ಏಂ.ಬೋ !
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಿಹೆನು ಏಂ ಬೋ !
ಆನು ಎನ್ನಂತೆ, ಮನ ಮನದಂತೆ;
ಲಿಂಗದೇವ ತಾನು ತನ್ನಂತೆ. - ಬ.ವ.ದೀ.281

ಕೆಲವರ ನಾಳಿಗೆ ಒರಟಿರುತ್ತದೆ, ಹೃದಯ ಮೃದುವಾಗಿರುತ್ತದೆ. ಮತ್ತೆ ಕೆಲವರ ನಾಲಿಗೆ ಬಲು ಮೃದು, ಬೆಲ್ಲದಂತಹ ಸವಿ ಮಾತು, ವಿನಯಪೂರ್ಣ ವರ್ತನೆಯಿಂದ ಕೂಡಿರುತ್ತದೆ. ಆದರೆ ಹೃದಯ ಮಾತ್ರ ಕತ್ತರಿಯಂತೆ, ಸದಾ ಎದುರಾಳಿಯ ಕೆಡುಕು ಬಯಸುತ್ತದೆ. ಇಂಥವರು ಸಹ ಧರ್ಮಿಗಳೊಡನೆ ಆಡುವುದೇನು, ಹಾಡುವುದೇನು, ದಿನ ನಿತ್ಯ ಪೂಜೆ ಮಾಡುವುದೇನು, ಜಪ ಮಾಡುವುದೇನು! ಆದರೆ ಮನಸ್ಸು ಎಳ್ಳಷ್ಟು ಶುದ್ಧೀಕರಣ ಗೊಂಡಿರುವುದಿಲ್ಲ. ಅಂಥವರ ಮೇಲೆ ಲಿಂಗದೇವನು ಕೃಪಾದೃಷ್ಟಿ ಬೀರದೆ ನಿರ್ಲಿಪ್ತವಾಗಿರುವನು.

## 284. ಕಪಟ ಭಕ್ತಿ

ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು,
ಹೊರಗಣ ಬಣ್ಣ ಕರ ಲೇಸಾಯಿತ್ತಯ್ಯ
ಶ್ವಾನನ ನಿದ್ರೆ, ಅಜ್ಞಾನಿಯ ತಪದಂತೆ
ಆಯಿತ್ತಯ್ಯಾ ಎನ್ನ ಮತಿ, ಲಿಂಗದೇವಾ - ಬ.ವ.ದೀ.282

ಮೈಲಾರನ ಗೊಂಬೆಯನ್ನು ಮಾಡಿ, ಚೆಂದವಾಗಿ ಕಾಣುವಂತೆ ಬಣ್ಣಗಳನ್ನು ಕೊಟ್ಟಿರುತ್ತಾರೆ. ಒಳಗೆ ನೋಡಿದರೆ ಸಣಬಿನ ನಾರು. ಗಣಪತಿಯ ಮೂರ್ತಿಯನ್ನೇ ತೆಗೆದುಕೊಂಡರೆ ಹೊರಗೆ ನೋಡಿದರೆ ಚಂದವಾದ ಬಣ್ಣಗಳು, ಒಳಗೆ ನೋಡಿದರೆ ಜೇಡಿ ಮಣ್ಣು ತಾನೆ? ಹಾಗೆ, ಹೊರಗೆ ನೋಡಿದರೆ ಶರಣನ ವೇಷಭೂಷಣ. ಶುಭ್ರ ಬಿಳಿಯ ಬಟ್ಟೆಗಳು, ಹಣೆಯ ಮೇಲೆ ಢಾಳಾಗಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಇಷ್ಟಲಿಂಗ. ಅಂತರಂಗ ನೋಡಿದರೆ ದೌರ್ಬಲ್ಯಗಳ ಆಗರ. ಈತನ ತಪಸ್ಸು ಶ್ವಾನನ ನಿದ್ರೆಯಂತೆ, ಅಜ್ಞಾನಿಯ ತಪಸ್ಸಿನಂತೆ. ನಾಯಿಯು ಕಣ್ಣು ಮುಚ್ಚಿ ನಿದ್ರೆ ಮಾಡುವಂತೆ ಮಲಗಿರುತ್ತದೆ. ಸಣ್ಣ ಸಪ್ಪುಳವಾದರೂ ಬೊಗಳುತ್ತದೆ, ಇಲ್ಲವೇ ಬಂದವರ ಮೇಲೆ ಎಗರುತ್ತದೆ. ಅಜ್ಞಾನಿ ಕಣ್ಣುಮುಚ್ಚಿಕೊಂಡು ಜಪ ಮಾಡುತ್ತಿದ್ದರೂ ಏಕಾಗ್ರತೆಯಿಂದ ಮಾಡದೆ, ಹೊರಗೆ ನಡೆಯುವ ಚಲನವಲನ, ಮಾತುಗಳ ಮೇಲೆ ಗಮನವನ್ನು ಇಟ್ಟೇ ಇರುತ್ತಾನೆ. ಅದೇ ರೀತಿ ನನ್ನ ಮತಿಯೂ ಸಹ ಎಂದು ಗುರು ಬಸವಣ್ಣನವರು ಸ್ವವಿಮರ್ಶೆ ಮಾಡಿಕೊಳ್ಳುತ್ತಾರೆ.

## 285. ಲೋಕೋಪಚಾರದ ಪೂಜೆ

ಲೋಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯಾ;
ಮನದ ತಾಮಸ ಬಿಡದು, ಮನದ ಕಪಟ ಬಿಡದು !
ಶಿವಶರಣೆಂಬುದು ಒಪ್ಪಚ್ಚಿ ಅಳವಡದಯ್ಯಾ
ಎನ್ನ ಮನದಲ್ಲಿ ಎರಡುಳನ್ನಕ್ಕ
ಲಿಂಗದೇವನೆಂತೊಲಿವ ? -ಬ.ವ.ದೀ.283

ಲೋಕೋಪಚಾರಕ್ಕಾಗಿ ಬಹಳ ಜನರು ಇಷ್ಟಲಿಂಗ ಪೂಜೆ ಮಾಡುವರು. ಬೆಳಿಗ್ಗೆ ಮಾಡುವ ಒಂದು ನಿಯಮವೆಂದು ಯಾಂತ್ರಿಕವಾಗಿ ಪೂಜೆ ಮಾಡುವರು; ಆದರೆ ಆಂತರಿಕ ಪರಿವರ್ತನೆ ಆಗುವುದಿಲ್ಲ. ಮನಸ್ಸಿನಲ್ಲಿ ತಾಮಸತನ ಮತ್ತು ಕಪಟತನ ತುಂಬಿರುವುದು. ದೇವನಿಗೆ ಒಮ್ಮನದಿಂದ ಶರಣಾಗತರಾಗಬೇಕೆಂಬುದು ಒಮ್ಮೆಯೂ ಅಳವಡದು. ಇಮ್ಮನದ ದ್ವಂದ್ವ ವ್ಯಕ್ತಿತ್ವವಿದ್ದರೆ ಲಿಂಗದೇವನು ಹೇಗೆ ಒಲಿಯಲು ಸಾಧ್ಯ?

### 286. ದೃಢ ನಂಬಿಕೆ ಮುಖ್ಯ

ಮಜ್ಜನಕ್ಕೆರೆವೆನಲ್ಲದಾನು, ಸಜ್ಜನವೆನ್ನಲ್ಲಿಲ್ಲಯ್ಯಾ !
ಎನ್ನಲ್ಲೇನನರಸುವೆ ?
ನಂಬಿಯೂ ನಂಬದ ಡಂಬಕ ನಾನಯ್ಯಾ;
ಹಾವ ತೋರಿ ಹವಿಯ ಬೇಡುವಂತೆ, ಲಿಂಗದೇವಾ -ಬ.ವ.ದೀ.284

ಬಹಳಷ್ಟು ಜನರು ಇಷ್ಟಲಿಂಗಕ್ಕೆ ಮಜ್ಜನಕ್ಕೆ ಯಾಂತ್ರಿಕವಾಗಿ ಎರೆವರು, ಆದರೆ ಸಜ್ಜನಿಕೆಯನ್ನು ಅಳವಡಿಸಿಕೊಂಡಿರುವುದಿಲ್ಲ; ದುರ್ಜನತ್ವದಿಂದ ಕೂಡಿರುವರು. ದೇವನನ್ನು ನಂಬಿದಂತೆ ಕಂಡರೂ ನಿಜವಾಗಿಯೂ ನಂಬಿರುವುದಿಲ್ಲ. ಡಾಂಬಿಕ ಬೂಟಾಟಿಕೆಯ ಭಕ್ತಿಯೇ ಜಾಸ್ತಿ ಇರುತ್ತದೆ. ಹಾವನ್ನು ತೋರಿ ತುಪ್ಪವನ್ನು ಬೇಡುವಂತೆ, ತಾವು ಅಳವಡಿಸಿಕೊಂಡಿರುವುದು ದುರ್ಜನತ್ವವನ್ನು ; ಆದರೆ ದೇವರಿಂದ ಬೇಡುವುದು ಮಾತ್ರ ಸಕಲ ಸಂಪತ್ತನ್ನು! ಇಂಥ ಕಪಟತನದ ಭಕ್ತಿ ಲಿಂಗದೇವನಿಗೆ ತಿಳಿಯದಿರಲು ಸಾಧ್ಯವೆ? (ಮಾನವರನ್ನು ಬೂಟಾಟಿಕೆಯ ಭಕ್ತಿಯಿಂದ ವಂಚಿಸಬಹುದು; ದೇವರನ್ನು ವಂಚಿಸಲು ಸಾಧ್ಯವಿಲ್ಲ)

### 287. ಭಾವ ಶುದ್ಧಿ ಬಹುಮುಖ್ಯ

ಕೆಲಕ್ಕೆ ಶುದ್ಧನಾದೆನಲ್ಲದೆ, ಎನ್ನ ಮನಕ್ಕೆ ಶುದ್ಧನಾಗೆನೇಕಯ್ಯಾ?
ಕೈ ಮುಟ್ಟಿ ಪೂಜಿಸುವಡೆ, ಎನ್ನ ಕೈ ಶುದ್ಧವಲ್ಲಯ್ಯಾ,
ಮನಮುಟ್ಟಿ ಪೂಜಿಸುವಡೆ, ಎನ್ನ ಮನ ಶುದ್ಧವಲ್ಲಯ್ಯಾ
ಭಾವ ಶುದ್ಧವಾದಡೆ, ಲಿಂಗದೇವಯ್ಯನು
ಇತ್ತ ಬಾಯೆಂದೆತ್ತಿಕೊಳ್ಳನೇಕಯ್ಯಾ? -ಬ.ವ.ದೀ.285

ಕೆಲಕ್ಕೆ ಅಂದರೆ ಅಕ್ಕಪಕ್ಕದವರಿಗೆ ಅರ್ಥಾತ್ ನೆರೆಹೊರೆಯವರಿಗೆ ನಾನು ಬಹು ಶುದ್ಧನಂತೆ ಕಾಣಿಸುವೆನಲ್ಲದೆ ನನ್ನ ಮನಸಾಕ್ಷಿಯಾಗಿ ಶುದ್ಧನಲ್ಲ. ಕೈಮುಟ್ಟಿ ಪೂಜಿಸುವ ಎಂದರೆ ನನ್ನ ಕೈ ಅಥವಾ ಕ್ರಿಯೆಗಳು ಶುದ್ಧವಿಲ್ಲ. ಮನಮುಟ್ಟಿ ಪೂಜಿಸುವ ಎಂದರೆ ಮನಸ್ಸು, ಅಂತಃಕರಣಗಳು ಶುದ್ಧವಿಲ್ಲ. ಶರೀರ ಮತ್ತು ಮನಸ್ಸಿಗಿಂತ ಸೂಕ್ಷ್ಮವಾದುದು ಭಾವ. ಅದು ಶುದ್ಧವಾದರೆ ಲಿಂಗದೇವನು ಎತ್ತಿಕೊಳ್ಳದಿರುವನೆ? ನನ್ನನ್ನು ಅನುಗ್ರಹಿಸುತ್ತಲಿಲ್ಲ ಎಂದರೆ ಅದರ ಅರ್ಥ ನನ್ನ ಭಾವ ಶುದ್ಧಗೊಂಡಿಲ್ಲ ಎಂದಾಗುವುದಲ್ಲವೆ?

### 288. ಭೇದ ಸಲ್ಲದು

ಕುಲಮದಕ್ಕೆ ಹೋರಿ ಜಂಗಮಭೇದವ ಮಾಡುವೆ; ಫಲವೇನು ?
ನಿತ್ಯ ಲಿಂಗಾರ್ಚನೆ ಪ್ರಾಯಶ್ಚಿತ್ತ!
ಛಲಮದಕ್ಕೆ ಹೋರಿ ಲಿಂಗ ಭೇದವ ಮಾಡುವೆ.
ಜಂಗುಳಿಯ ಕಾವ ಗೋವಳ ಹಲವು ಪಶುವ ನಿವಾರಿಸುವಂತೆ!
ತನು ಭಕ್ತನಾಯಿತ್ತು; ಎನ್ನ ಮನ ಭವಿ ಲಿಂಗದೇವಾ -ಬ.ವ.ದೀ.286

ಲಿಂಗಾಯತ ಧರ್ಮದ ಮುಖ್ಯ ಲಾಂಛನವಾದ ಇಷ್ಟಲಿಂಗ ಧರಿಸಿ ದೀಕ್ಷಾ ಸಂಸ್ಕಾರದ ಮೂಲಕ ಒಳಬಂದವರೆಲ್ಲರೂ ಸಮಾನರು. ನಾನಾ ಕಾರಣಗಳಿಗಾಗಿ ವಿವಿಧ ಕುಲ, ಜಾತಿಗಳವರು ವೃತ್ತಿಗಳವರೂ ಈ ಧರ್ಮವನ್ನು ಸೇರಿದರು. ಹಾಗೆ ಸೇರಿದ ಮೇಲೆ ಎಲ್ಲರೂ ಸಮಾನರು ಯಾರು ಮೇಲಲ್ಲ ಕೀಳಲ್ಲ. ಆದರೆ ಕೆಲವು ಕುಲಗಳವರು ಧರ್ಮಾನುಯಾಯಿಗಳಲ್ಲಿಯೇ ಭೇದವೆಣಿಸ ತೊಡಗಿದರು. ಈ ಧರ್ಮದ ಪ್ರಚಾರಕರೂ, ತ್ಯಾಗಿಗಳ ಆದ ಜಂಗಮರ ಪೂರ್ವಾಶ್ರಯ ಹಿಡಿದು ಭೇದಭಾವ ಮಾಡತೊಡಗಿದರು. ಇದನ್ನು ಕಂಡು ಮನನೊಂದ ಧರ್ಮಪಿತರು ಅಂಥವರಿಗೆ ಹೇಳುತ್ತಾರೆ, ನೀವು ನಿತ್ಯವೂ ಇಷ್ಟಲಿಂಗಾರ್ಚನೆ ಮಾಡಿ ಪ್ರಯೋಜನವೇನು? ಅದು ಪ್ರಾಯಶ್ಚಿತ್ತದಂತಾಗುವುದು ಅಷ್ಟೆ; ನಿಮ್ಮ ಪೂಜೆ ದೇವನೊಲುಮೆಯನ್ನು ಗಳಿಸದು. ಹಾಗೆಯೇ ಕೆಲವರು (ಪುರುಷರೆಂಬ) ಛಲಮದ ಹೊಂದಿ ಲಿಂಗಭೇದ ಮಾಡುತ್ತ ಸ್ತ್ರೀಯರನ್ನು 2ನೆಯ ದರ್ಜೆಯ ಪ್ರಜೆಗಳಂತೆ ಕಾಣುತ್ತಿದ್ದರು. ಇದೂ ಧರ್ಮಪಿತ ಬಸವಣ್ಣನವರಿಗೆ ಸಹ್ಯವಾಗಲಿಲ್ಲ.



ಹಳ್ಳಿಗಳಲ್ಲಿ ಗೋವಳಿಗರು ಇರುತ್ತಾರೆ. ಅವರು ಇಷ್ಟಿಷ್ಟು ಮನೆಯ ಗೋವುಗಳನ್ನು ಕಾಯುವ ಒಪ್ಪಂದ ಮಾಡಿಕೊಂಡು ಅವನ್ನು ತೆಗೆದುಕೊಂಡು ಮೇಯಿಸಲು ಹೋಗುತ್ತಾರೆ. ಬೇರೆ ಗೋವಳಿಗರ ಹಿಂಡಿನ ದನ ಬಂದರೆ ತಮ್ಮ ಹಿಂಡಿನಿಂದ ಅದನ್ನು ಹೊರಗೆ ಓಡಿಸುತ್ತಾರೆ. ಈ ಹೋಲಿಕೆಯನ್ನು ಕೊಟ್ಟು ಧರ್ಮಪಿತರು ಹೇಳುತ್ತಾರೆ. ಜಂಗುಳಿಯ ದನಗಳನ್ನು ಕಾಯುವ ದನಗಾಹಿ ತನ್ನ ಹಿಂಡಿನದಲ್ಲದ ಪಶುವನ್ನು ದೂರಮಾಡುವಂತೆ ವಿವಿಧ ಕುಲಗಳವರು ತಮ್ಮ ಕುಲದವರಲ್ಲದ ಶರಣರನ್ನು ದೂರವಿಡುವುದು ಸರಿಯಲ್ಲ. ಇವರ ಶರೀರಗಳು ದೀಕ್ಷಾ ಸಂಸ್ಕಾರ ಹೊಂದಿ 'ಭಕ್ತ' ಆಗಿದ್ದರೂ ಮನಸ್ಸುಗಳು ಮಾತ್ರ ತಾತ್ವಿಕ ಪರಿವರ್ತನೆ ಹೊಂದದ "ಭವಿಗಳೇ ಆಗಿವೆ." ಎಂದು ವಿಷಾದಿಸುತ್ತಾರೆ.

### 289. ದುರ್ಬಲ ಮನದ ಭಕ್ತಿ

ಲಿಂಗದಲ್ಲಿ ಕಠಿಣವುಂಟೆ? ಜಂಗಮದಲ್ಲಿ ಜಾತಿ ಕುಲವುಂಟೆ?
ಪ್ರಸಾದದಲ್ಲಿ ಅರುಚಿಯುಂಟೆ ?
ಈ ತ್ರಿವಿಧದಲ್ಲಿ ಭಾವಭೇದವನರಸುವೆನು;
ಲಿಂಗದೇವಾ, ಧಾರೆವಟ್ಟಲೆನ್ನ ಭಕ್ತಿ! -ಬ.ವ.ದೀ.287

ಲಿಂಗದಲ್ಲಿ ಕಠಿಣವುಂಟೆ? ಎಂಬ ವಾಕ್ಯವನ್ನು ಎರಡು ರೀತಿಯಲ್ಲಿ ಅರ್ಥಮಾಡಬಹುದು. ಲಿಂಗದೇವ ಅರ್ಥಾತ್ ಸೃಷ್ಟಿಕರ್ತನಲ್ಲಿ ಕಾಠಿಣ್ಯ, ಕ್ರೌರ್ಯ ಉಂಟೆ? ಪಕ್ಷಪಾತ ಭೇದಭಾವ ಉಂಟೆ? ಇಲ್ಲ, ಅವನು ದಯಾಶೀಲ, ಕರುಣಾಮಯಿ. ಇನ್ನೊಂದು ಅರ್ಥದಲ್ಲಿ ಇಷ್ಟಲಿಂಗವು ಶಿಲೆಯಂತೆ ಗಟ್ಟಿಯಾಗಿ ಇದ್ದರೂ ಶಿಲೆಯಲ್ಲ; ಆದ್ದರಿಂದ ಅದನ್ನು ಶಿಲೆ ಎನ್ನಬಾರದು. ತ್ರಾಟಕಯೋಗಕ್ಕಾಗಿ ಹೊಳಪು ಬರುವಂತೆ ರಾಸಾಯನಿಕ ಮಿಶ್ರಣಗಳಿಂದ ಆದ ವಸ್ತುವದು. ಜಂಗಮದಲ್ಲಿ ಜಾತಿ ಕುಲವುಂಟೆ? ಜಂಗಮ ಪದವನ್ನು 2 ರೀತಿಯ ಅರ್ಥವ್ಯಾಪ್ತಿಯಿಂದ ಬಳಸಲಾಗುವುದು. ಜಂಗಮವೆಂದರೆ ಧರ್ಮಬೋಧಕ ತ್ಯಾಗಿ. ಅವನು ಜಂಗಮ ದೀಕ್ಷೆ ಹೊಂದಿದ ಮೇಲೆ ಅವನ ಪೂರ್ವದ ಜಾತಿಯನ್ನು, ಕುಲವನ್ನು ಅರಸಬಾರದು. ಜಂಗಮವೆಂದರೆ ಧರ್ಮದ ಅನುಯಾಯಿ. ಪೂರ್ವದ ಕುಲಜಾತಿಗಳು ಏನೇ ಇರಲಿ, ದೀಕ್ಷೆಯ ಮೂಲಕ ಒಳಬಂದ ಮೇಲೆ ಪೂರ್ವದ ಜಾತಿಯನ್ನು ಹುಡುಕದೆ ಉಣ್ಣುವ - ಉಣ್ಣಿಸುವ ಕ್ರಿಯೆ, ಹೆಣ್ಣು - ಗಂಡು ಕೊಡುವ - ಕೊಳ್ಳುವ ಕ್ರಿಯೆಯನ್ನು ಮಾಡಬೇಕು. ಪ್ರಸಾದದಲ್ಲಿ ರುಚಿಯನ್ನು ಹುಡುಕಬಾರದು. ಹೊತ್ತಿಗೆ ಸರಿಯಾಗಿ ತನಗೆ ಒದಗಿದ ಪ್ರಸಾದವನ್ನು ಸಂತೋಷವಾಗಿ ಸ್ವೀಕರಿಸಬೇಕು.

ಧರ್ಮಪಿತ ಬಸವಣ್ಣನವರು ಎಲ್ಲರಿಗೂ ಅನ್ವಯಿಸುವಂತೆ ಬೋಧೆ ಮಾಡಿದ್ದಾರೆ. ಆದರೆ ವಿಶೇಷವಾಗಿ ಧರ್ಮಬೋಧಕರಿಗೆ ಹೇಳಿದ್ದಾರೆಂದು ಊಹಿಸಬಹುದು. ಏಕೆಂದರೆ ಜಂಗಮರು ಮೇಲ್ಜಾತಿಯವರ ಮನೆಗೆ ಪೂಜೆ ಪುರಸ್ಕಾರಕ್ಕೆ ಹೋಗುವುದು ಸ್ವಾಭಾವಿಕವಾಗಿರುತ್ತಿತ್ತು. ಶ್ರೀಮಂತರ ಮನೆಯ ಭಕ್ಷ್ಯ ಭೋಜ್ಯಗಳ ರುಚಿಗೆ ಆಸೆ ಪಟ್ಟು ಅವರ ಮನೆಯ ಬಿನ್ನಹಕ್ಕೆ ಹೆಚ್ಚಿನ ಮಹತ್ವ ಕೊಡುವುದೂ ಸಹಜವಾಗಿರುತ್ತಿತ್ತು. ಇಂಥ ಪ್ರವೃತ್ತಿಯನ್ನು ಧರ್ಮಪಿತ ಬಸವಣ್ಣನವರು ಖಂಡಿಸಿ ಈ ತ್ರಿವಿಧದಲ್ಲಿ ಭಾವಭೇದವನ್ನು ಹುಡುಕಬಾರದು. ಅಂಥ ಭೇದ ಮಾಡುವವರ ಭಕ್ತಿ ಧಾರೆವಟ್ಟಲಿನಂತೆ ಸದಾ ಸೋರುವಂತಹುದು ಎಂದು ಟೀಕಿಸಿದ್ದಾರೆ. ಧಾರೆವಟ್ಟಲಿನಲ್ಲಿ ನೀರು ಸಂಗ್ರಹವಾಗದೆಂತೋ ಹಾಗೆ ಭಕ್ತಿಯು ಭೇದಭಾವ ಮಾಡುವ ಜಂಗಮನಲ್ಲಿ ಗಟ್ಟಿಗೊಳ್ಳದು.

### 290. ಪರರ ಅನುಕರಣೆ

ಲೌಕಿಕರ ಕಂಡು ಆಡುವೆ, ಹಾಡುವೆ;
ತಾರ್ಕಿಕರ ಕಂಡು ಆಡುವೆ ಹಾಡುವೆ;
ಸಹಜಗುಣವೆನ್ನಲ್ಲಿಲ್ಲಯ್ಯಾ;
ನಿಜ ಭಕ್ತಿಯೆನಗಿಲ್ಲ ತಂದೆ.
ಏಕೋಭಾವ ಎನಗುಳ್ಳಡೆ, ಏಕೆ ನೀ ಕರುಣಿಸೆ ಲಿಂಗದೇವಾ? -ಬ.ವ.ದೀ.288

ಲೌಕಿಕ ಜನರ ಆದರ ಗಳಿಸಿಕೊಳ್ಳಲು ಅವರಂತೆ ವರ್ತಿಸುವುದು, ಹಾಡುವುದು, ಭಜನೆ ಮಾಡುವುದು. ಅದೇ ರೀತಿ ತಾರ್ಕಿಕರನ್ನು ಕಂಡು ಅವರಂತೆ ಆಡುವುದು, ಹಾಡುವುದು; ಬಹಳ ಜನರಲ್ಲಿ ದೃಢಭಕ್ತಿಯಾಗಲಿ, ನಿಷ್ಠೆಯಾಗಲಿ ಇರದೆ ಅನ್ಯರನ್ನು ಯಾಂತ್ರಿಕವಾಗಿ ಅನುಕರಿಸುವರು. ಏಕ ನಿಷ್ಠೆ ಇದ್ದರೆ ಲಿಂಗದೇವನು ಖಂಡಿತವಾಗಿಯೂ ಅನುಗ್ರಹಿಸುವನು.

## 291. ಚಂಚಲ ಮನ

ಓತಿ ಬೇಲಿವರಿವಂತೆ ಎನ್ನ ಮನವಯ್ಯಾ.
ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆನ್ನ ಮನವು;
ಬಾವುಲ ಬಾಳುವೆಯಂತೆನ್ನ ಮನವು!
ನಡುವಿರುಳೆದ್ದ ಕುರುಡಂಗೆ ಅಗುಸೆಯಲ್ಲಿ ಬೆಳಗಾದಂತೆ -
ನಾನಿಲ್ಲದ ಭಕ್ತಿಯ ಬಯಸಿದುಂಟೆ ಲಿಂಗದೇವಾ ? -ಬ.ವ.ದೀ.259

ಈ ವಚನದಲ್ಲಿ ಧರ್ಮಪಿತರು ಮಾನವ ಮನಸ್ಸನ್ನು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಮನದ ಗುಣ ಚಂಚಲತೆ. ಓತಿಕ್ಯಾತ ಬೇಲಿಯ ಮೇಲೆ ಹರಿದಾಡುತ್ತಿರುತ್ತದೆ. ಇದ್ದಲ್ಲಿ ಇರದು. ನಿಂತಲ್ಲಿ ನಿಲ್ಲದು, ಚಟಪಟಿಕೆಯಿಂದ ಕೂಡಿ ಸರಿದಾಡುತ್ತಿರುತ್ತದೆ. ಅದರಂತೆ ಮನಸ್ಸು ಸಹ ಹರಿದಾಡುತ್ತಿರುತ್ತದೆ. ಮನದ ಇನ್ನೊಂದು ಗುಣ ಗೋಸುಂಬೆಯದು. ಗೋಸುಂಬೆ ಅಥವಾ ಊಸರವಳ್ಳಿಯು ಪಟಪಟನೆ ಬಣ್ಣ ಬದಲಾಯಿಸುತ್ತದೆ. ಒಂದು ಕ್ಷಣದಲ್ಲಿ ಹಲವಾರು ಬಣ್ಣಗಳನ್ನು ಹೊಂದುತ್ತದೆ. ಆಶ್ರಯಿಸಿದ ಪರಿಸರಕ್ಕೆ ಅನುಗುಣವಾಗಿ ಬಣ್ಣವನ್ನು ಬದಲಿಸುತ್ತದೆ. ಹಾಗೆ ಮನಸು ಕೂಡ ನಾನಾ ಕಾರಣಗಳಿಗಾಗಿ ತನ್ನ ಆದರ್ಶಗಳನ್ನು ಬದಲಿಸುತ್ತದೆ. ಬಾವುಲವು (ತೊಗಲ ಬಾವಲಿ) ಕತ್ತಲೆಯನ್ನು ಹೆಚ್ಚು ಪ್ರೀತಿಸುತ್ತ ತಲೆ ಕೆಳಗಾಗಿ ತೂಗಾಡುತ್ತದೆ. ಜಗತ್ತಿಗೆಲ್ಲ ಬೆಳಕಾದಾಗ ಅದಕ್ಕೆ ಕತ್ತಲೆ. ಜಗತ್ತಿಗೆ ಕತ್ತಲೆಯಾದಾಗ ಬಾವಲಿಗೆ ಕಣ್ಣು ಕಾಣಿಸುತ್ತದೆ. ಮತ್ತು ಇದು ಕೆಳಕ್ಕೆ ಮಲವಿಸರ್ಜನೆ ಮಾಡಿ ವಾತಾವರಣವನ್ನು ದುರ್ಗಂಧಮಯವಾಗಿ ಮಾಡುತ್ತದೆ. ಅದೇ ರೀತಿ ಮನಸ್ಸು ಅಜ್ಞಾನದ ಕತ್ತಲೆಯಲ್ಲಿ ಆಶ್ರಯವನ್ನು ಪಡೆಯಲು ಬಯಸುತ್ತದೆ. ಹೊರ ಜಗತ್ತಿನಿಂದ ವಿಷಯಗಳ ಮಲವನ್ನು ತಂದು ಹಾಕಿ ಅಂತಃಕರಣಗಳನ್ನು ದುರ್ಗಂಧಮಯವಾಗಿಸುತ್ತದೆ. ಬಾವಲಿಯು ತಲೆ ಕೆಳಗಾಗಿ ತೂಗುತ್ತ ಜಗತ್ತನ್ನು ತದ್ವಿರುದ್ಧವಾಗಿ (ತಳಕಂಬಳಕ) ನೋಡುತ್ತದೆ. ಮನಸೂ ಹಾಗೆಯೇ ಸತ್ಯವಾದ ದೇವನನ್ನು ಅಸತ್ಯವೆಂದು, ಅಸತ್ಯವಾದ ಮೌಲ್ಯಗಳನ್ನು ಪರಮಸತ್ಯವೆಂದು ನಂಬುತ್ತದೆ. ಕುರುಡನಿಗೆ ಹಗಲೂ ಒಂದೇ ಇರುಳೂ ಒಂದೆ. ಆವನಿಗೆ ನಡು ಇರುಳಲ್ಲೇ ಎಚ್ಚರವಾದರೂ ಬೆಳಗಾಯಿತೆಂದು ಭಾವಿಸುತ್ತಾನೆ. ಕಣ್ಣು ಇಲ್ಲದ ಕಾರಣ ಸೂರ್ಯೋದಯ ಸೂರ್ಯಾಸ್ತಗಳನ್ನು ಗುರುತಿಸಲಾರ, ಸದುಪಯೋಗವನ್ನು ಪಡೆದುಕೊಳ್ಳಲಾರ. ಅದೇ ರೀತಿ ಅಜ್ಞಾನಿಯ ಸ್ಥಿತಿಯೂ ಸಹ. ಮೌಲ್ಯಗಳ ಸತ್ಯಾಸತ್ಯತೆಯನ್ನು ಅರಿಯಲಾರ. ಇಂಥ ಸ್ಥಿತಿಯಲ್ಲಿ "ನಾನು ಇಲ್ಲದ ಭಕ್ತಿಯ ಬಯಸಿದರೆ ಸಿಗುವುದೆ?" ಎಂದು ಗುರು ಬಸವಣ್ಣನವರು ಸಾಧಕಾವಸ್ಥೆಯಲ್ಲಿ ಪರಿತಪಿಸುತ್ತಾರೆ. ನಾನು ಎಂಬ ಅಹಂ ಇಲ್ಲದ ಭಕ್ತಿಯ ದುರ್ಬಲ ಮನಸುಳ್ಳ ತಾನು ಬಯಸಿದರೆ ಸಿಗುವುದೆ? ಎಂದು ಸಹ ಗುರು ಬಸವಣ್ಣನವರು ಹೇಳಿರಬಹುದೆಂದು ಕಡೆಯ ವಾಕ್ಯದ ಅರ್ಥವನ್ನು ಮಾಡಬಹುದು.

## 292. ಭೃತ್ಯಾಚಾರ ಮತ್ತು ಭಕ್ತಿ

ಸತ್ಯ ಸಂಬಂಧ ಸಯವಾದ ಭೃತ್ಯಾಚಾರವೆನಗಿಲ್ಲವಯ್ಯಾ.
ಅನುದಿನ ನಿಮ್ಮ ನೆನೆಯಲು ಭಕ್ತಿಯಿಲ್ಲವಯ್ಯಾ ಎನಗೆ
ಲಿಂಗದೇವಾ, ಕರುಣೆ, ಕೃಪೆಯ ಮಾಡಯ್ಯಾ. -ಬ.ವ.ದೀ.290

"ಪ್ರಾಮಾಣಿಕತೆಯಿಂದ ಸಂಬಂಧಿತವಾದ ಭೃತ್ಯಾಚಾರವು ದೇವನೊಲಿಮೆಗೆ ಸಾಧನ; ಅದೇ ನನ್ನಲ್ಲಿ ಕೊರತೆಯಾಗಿದೆ. ಜೊತೆಗೆ ದೇವನನ್ನು ನೆನೆಯಲು ಬೇಕಾದ ಭಕ್ತಿಯೂ ಇಲ್ಲ. ಈ ನನ್ನ ಕೊರತೆಯನ್ನು ನಿನ್ನ ಮುಂದಿಟ್ಟು ನನ್ನ ತಪ್ಪನ್ನು ಒಪ್ಪಿಕೊಳ್ಳುತ್ತೇನೆ. ಲಿಂಗದೇವ ನೀನು ಕರುಣೆ ನನ್ನ ಕೊರತೆಯನ್ನು ಪರಿಗಣಿಸದೆ ನನ್ನ ಮೇಲೆ ಕೃಪೆ ಮಾಡು" ಎಂದು ಸಾಧಕ ಜೀವ ಬಸವಣ್ಣನವರು ದೇವರಲ್ಲಿ ಪ್ರಾರ್ಥಿಸುತ್ತಾರೆ.

## 293. ತೋರಿಕೆಯ ಭಕ್ತಿ

ಶಬ್ದ ಸಂಭಾಷಣೆಯ ನುಡಿಯವರ್ತಿಸಿ ನುಡಿವೆ;
ತೊಡಹದ ಕೆಲಸದ ಬಣ್ಣದಂತೆ
ಕಡಿಹಕ್ಕೆ ಒರೆಗೆ ಬಾರದು, ನೋಡಾ!
ಎನ್ನ ಮನದಲೊಂದು, ಹೃದಯದಲೊಂದು,
ವಚನದಲೊಂದು ನೋಡಾ. ಲಿಂಗದೇವಾ,
ಆನು ಭಕ್ತನೆಂಬ ಹುಸಿಯ ಮಸಕವನೇನ ಬಣ್ಣಿಸುವೆನಯ್ಯಾ? ಬ.ವ.ದೀ.291



ಬೇರೆಯವರು ಮಾತನಾಡುವ ಶಾಬ್ದಿಕ ಪ್ರಕ್ರಿಯೆಗಳನ್ನು ಯಾಂತ್ರಿಕವಾಗಿ ಅನುಕರಿಸಿ, ಅದೇ ಶಬ್ದಗಳನ್ನು ಪುನರಾವರ್ತಿಸಿ ನಾನು ಮಾತನಾಡುತ್ತೇನೆ. ಇದು ಅಂತರಂಗದಿಂದ ಬಂದ ಮಾತಾಗಿರುವುದಿಲ್ಲ. ಇದು ಹೇಗೆಂದರೆ ತೊಡಹದ ಕೆಲಸದ ಬಣ್ಣದಂತೆ! ಗಣಪತಿಯ ಮೂರ್ತಿಯನ್ನು ಮಣ್ಣಿನಿಂದ ಮಾಡಿ ಹೊರಗೆ ಬಣ್ಣಕೊಡಲಾಗಿರುತ್ತದೆ. ಕೆಲವೊಂದು ಮೂರ್ತಿಗಳನ್ನು ಅರಗಿನಿಂದ ಮಾಡಿ ಹೊರಗೆ ಹಿತ್ತಾಳೆಯ ಆವರಣ ಹಾಕಲಾಗಿರುತ್ತದೆ. ಅಗ ಅದನ್ನು ಕತ್ತರಿಸಿ ಪರೀಕ್ಷಿಸಲು ಬರುವುದಿಲ್ಲ. ಪೂರಾ ಚಿನ್ನದಿಂದಲೇ ಅಖಂಡವಾಗಿ ಮಾಡಿದ ಮೂರ್ತಿ ಅಥವಾ ವಸ್ತುವಿದ್ದರೆ ಅದನ್ನು ಕಡಿದು, ಬಡಿದು ಒರೆಗೆ ಹಚ್ಚಿ ನೋಡಿದಾಗ ಅದು ತನ್ನ ನಿಜ ಸ್ವರೂಪವನ್ನೇ ತೋರಿಸುತ್ತಾ ಹೋಗುತ್ತದೆ. ಹಾಗೆ ಭಕ್ತನ ಮನದಲ್ಲಿ, ಹೃದಯದಲ್ಲಿ ಮತ್ತು ವಚನದಲ್ಲಿ ಒಂದೇ ನಿಷ್ಠೆ ಇದ್ದರೆ ಯಾವ ರೀತಿ ಪರೀಕ್ಷಿಸಿದರೂ ಅವನು ತನ್ನ ನಿಷ್ಠೆಯನ್ನೇ ಪ್ರದರ್ಶಿಸುತ್ತಾನೆ. ಹಾಗೆ ಇಲ್ಲದ ತೋರಿಕೆಯ ಭಕ್ತಿಯಾದಾಗ ಹೊರ ರೂಪದಲ್ಲಿ ತೋರಿಕೆಯ ಭಕ್ತಿಯ ಉತ್ಕಟತೆ (ಮಸಕ) ಕಾಣಬರುತ್ತದೆ. ಒಳಗಡೆ ಅದೇ ಉತ್ಕಟತೆಯು ಇರುವುದಿಲ್ಲ. ಇಂಥ ಬೂಟಾಟಿಕೆಯ ಭಕ್ತಿಯ ಬಗ್ಗೆ ಏನು ಬಣ್ಣಿಸಬಹುದು?

## 294. ವಚನ ವಾಙ್ಮಯದ ಮಹತಿ

ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು
ತವರಾಜದ ನೊರೆ ತೆರೆಯಂತೆ ಆದ್ಯರ ವಚನವಿರಲು
ಬೇರೆ ಬಾವಿಯ ತೋಡಿ, ಉಪ್ಪನೀರನುಂಬುವನ ವಿಧಿಯಂತೆ
ಆಯಿತ್ತೆನ್ನ ಮತಿ, ಲಿಂಗದೇವಾ
ನಿಮ್ಮ ವಚನಂಗಳ ಕೇಳದೆ ಅನ್ಯ ಪುರಾಣಂಗಳ ಕೇಳಿ ಕೆಟ್ಟೆನಯ್ಯ.
-ಬ.ವ.ದೀ.292

ಒಂದು ಸುಂದರ, ಸುಮಧುರ ಕಲ್ಪನೆಯನ್ನು ಮಾಡಿಕೊಳ್ಳೋಣ. ಹರಿಯುತ್ತಿರುವುದು ಹಾಲಿನ ತೊರೆ, ಅದರ ದಂಡೆಯ ಮೇಲೆ ಬೆಲ್ಲದ ಕೆಸರು, ಸಕಕರೆಯ ಮಳು, ಆ ತೊರೆಯ ಮೇಲೆ ಏರಿಳಿವ ನೊರೆ ತೊರೆಗಳೋ ಅಮೃತದವು. ಇಂಥ ಅದ್ಭುತವಾದ ವಚನ ಸಾಹಿತ್ಯವಿರುವಾಗ ಸುಲಭ ಲಭ್ಯವೂ ಸುಲಭಗ್ರಾಹ್ಯವೂ ಆಗಿರುವಾಗ ಇದರ ಅಧ್ಯಯನ, ಪಾರಾಯಣ, ಪಠಣ, ಮನನ ಮಾಡುವುದು ಬಿಟ್ಟು ಜ್ಞಾನಕ್ಕಾಗಿ ಅನ್ಯ ಸಾಹಿತ್ಯವನ್ನು ಆಶ್ರಯಿಸ ಹೋಗುವುದು. ಬೇರೆ ಬಾವಿಯನ್ನು ತೋಡಿ, ಅಲ್ಲಿ ಉಪ್ಪುನೀರನ್ನು ಕುಡಿಯುವ ಹೆಡ್ಡನಂತೆ ವ್ಯಕ್ತಿ ಪರಿಸ್ಥಿತಿಯಾಗುವುದು. ಲಿಂಗದೇವನ ವಾಣಿಯಾದ ವಚನ ವಾಙ್ಮಯವನ್ನು ಕೇಳದೆ ಅನ್ಯ ಪುರಾಣಂಗಳ ಕೇಳಿ ಕೆಡುವುದರಲ್ಲಿ ಯಾವ ಪುರುಷಾರ್ಥವಿದೆ?

ಈ ವಚನವು ಬಲು ಮಹತ್ವಪೂರ್ಣವಾದುದು. ಲಿಂಗಾಯತ ಧರ್ಮದ ಸಂಹಿತೆಯಾದ ವಚನ ವಾಙ್ಮಯದ ಮಹತಿಯನ್ನು ಹೇಳುತ್ತದೆ. ಭಕ್ತಿಯೇ ಸರ್ವಸ್ವವಾದ ಹಾಳಿನ ತೊರೆಯದು ಜಗತ್ತಿನ ಬೇರಾವುದೇ ಧರ್ಮದಲ್ಲಿ ಈ ಪ್ರಕಾರದ, ಈ ಪ್ರಮಾಣದ ಸೃಷ್ಟಿಕರ್ತನಲ್ಲಿ ನಂಬಿಕೆಯಿಟ್ಟುದನ್ನು, ಭಕ್ತಿಯನ್ನು ಕಾಣಲಾಗುವುದಿಲ್ಲ. ಈ ಭಕ್ತಿ ಮೂಢ ಭಕ್ತಿಯಲ್ಲ ವೈಚಾರಿಕತೆಯಿಂದ ಕೂಡಿದ ಪರಿಷ್ಕರಣಗೊಂಡ ಸದ್ಭಕ್ತಿ. ಈ ಭಕ್ತಿಯ ಹಾಲಿನ ತೊರೆಯ ಜೊತೆಗಿದೆ ತತ್ವಜ್ಞಾನದ ಕೆಸರು. ಇದಕ್ಕೆ ಮತ್ತಷ್ಟು ಸವಿ ನೀಡುತ್ತದೆ ವೈಚಾರಿಕತೆಯ ಸಕ್ಕರೆ. ಜೊತೆಗೆ ಪ್ರಯೋಗ ಶೀಲತೆಯ ಜೀವನ ವಿಜ್ಞಾನದ ಅಮೃತ ಬೇರೆ. ಭಕ್ತಿ-ಜ್ಞಾನ-ಆಚಾರಗಳ ದಿವ್ಯ ಸಂಗಮವಾದ ವಚನ ಸಾಹಿತ್ಯವಿರುವಾಗ ಅನ್ಯ ಶಾಸ್ತ್ರಗಳ, ಪುರಾಣಗಳ ಕೇಳಿ ಕೆಡುವ ಹವ್ಯಾಸ ಏಕೆ ಬೇಕು?

ಆದ್ಯರ ವಚನ: ಈ ಪದ ಪ್ರಯೋಗ ನೋಡಿ ಕೆಲವು ಸಾಹಿತಿಗಳು ಆದ್ಯ ವಚನಕಾರರನ್ನು ಹುಡುಕಲು ಹೋಗಿ ಬಹಳ ಗೊಂದಲವೆಬ್ಬಿಸಿದ್ದಾರೆ. ದೇವರ ದಾಸಿಮಯ್ಯ ಆದ್ಯ ವಚನಕಾರ, ಧರ್ಮಪಿತ ಬಸವಣ್ಣನವರಿಗೆ ಒಂದು ನೂರು ವರ್ಷ ಪೂರ್ವದವನು ಎಂದು ನಿರ್ಣಯಿಸಿದ್ದಾರೆ. ದೇವರ ದಾಸಿಮಯ್ಯನವರು ರಾಜ ಜಯಸಿಂಹನ ಕಾಲದ ಓರ್ವ ಶಿವದಾಸ (ಭಕ್ತರು); ದೇವಾಂಗ ಕುಲದಲ್ಲಿ ಜನಿಸಿದರು. ಆದರೆ ಇವರು ವಚನಕಾರರಲ್ಲ. ವಚನಕಾರನಾದವನು ಜೇಡರ ದಾಸಿಮಯ್ಯ ಈತ ಧರ್ಮಗುರು ಬಸವಣ್ಣನವರ ಸಮಕಾಲೀನ. ಅನುಭವ ಮಂಟಪದಲ್ಲಿ ತನ್ನ ಪತ್ನಿ

ಮುಗ್ಗಲೆಯೊಡನೆ ಇದ್ದ ಶರಣ. ಹಾಗಾದರೆ ಆದ್ಯರೆಂದರೆ ಯಾರು? ಲಿಂಗಾಯತ ಧರ್ಮದ ಆಧಾರ ಸ್ತಂಭಗಳಂತಿರುವ ಗುರು ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮೇಶ್ವರ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ, ಅಕ್ಕನಾಗಲಾಂಬಿಕೆ - ಈ ಸಪ್ತಗಣಾಧೀಶರೇ ಆದ್ಯರು! ಅವರ ನುಡಿಯೇ ನಮಗೆ ಶಾಸ್ತ್ರ. ಅನ್ಯ ಪುರಾಣಂಗಳ ಕೇಳಿ ಕೆಟ್ಟ ಎನ್ನುತ್ತಾರೆ ಧರ್ಮಪಿತರು. ವಿದ್ಯಾರ್ಥಿಗಳು ತಮ್ಮ ಪಠ್ಯವನ್ನು ಓದಬೇಕಾದುದು ಅವರ ಆದ್ಯ ಕರ್ತವ್ಯ ಹೇಗೋ ಹಾಗೆ ಆಯಾ ಧರ್ಮಾನುಯಾಯಿಗಳು ತಮ್ಮ ತಮ್ಮ ಧರ್ಮಸಂಹಿತೆಯನ್ನು ಅಧ್ಯಯನ ಮಾಡಬೇಕು. ಅನ್ಯ ಪುರಾಣಗಳನ್ನು ಕೇಳುವುದರಿಂದ ಮೂಢ ನಂಬಿಕೆಗಳು ಬೆಳೆಯುತ್ತವೆ. ವೈದಿಕ ಸಾಹಿತ್ಯವನ್ನು ಓದಿದರಂತೂ ಸ್ವರ್ಗ - ನರಕ, ಜ್ಯೋತಿಷ್ಯ -ಭವಿಷ್ಯ, ಗ್ರಹಗತಿ - ವಾಸ್ತು - ಶಕುನ, ಬಹುದೇವತೋಪಾನೆ -ಹೀಗೆ ನೂರೆಂಟು ಮೂಢನಂಬಿಕೆ ಬೆಳೆದು ಮನಸ್ಸು ಭಯಗ್ರಸ್ತ -ವಾಗುವುದು. ತಪ್ಪುತಪ್ಪು ಆದರ್ಶಗಳು ಮತಿಯ ಕ್ಷೇತ್ರದಲ್ಲಿ ಬೆಳೆಯುತ್ತವೆ.

ತೌಲನಿಕವಾಗಿ ಅಧ್ಯಯನ ಮಾಡುವುದರಿಂದ ವ್ಯಕ್ತಿತ್ವ ವಿಕಾಸವಾಗುವುದು; ಬೌದ್ಧಿಕ ಪಟುತ್ವ ಬೆಳೆಯುವುದು ಸತ್ಯ. ಆದರೆ ಆ ಪ್ರೌಢಿಮೆ ಎಲ್ಲರಿಗೂ ಇರುವುದಿಲ್ಲ. ಹೀಗಾಗಿ ತಪ್ಪು ಆದರ್ಶಗಳು ನೆಲೆಗೊಳ್ಳುವ ಸಾಧ್ಯತೆ ಇದೆ. ಸಾಮಾನ್ಯರು ವಚನ ಸಾಹಿತ್ಯ ಮಾತ್ರ ಓದಬೇಕು ಎಂದೇ ಧರ್ಮಪಿತರು ಹೇಳಿದ್ದಾರೆ.

ಇನ್ನು ಈ ವಚನದಲ್ಲಿ ಬರುವ "ಲಿಂಗದೇವಾ (ಕೂಡಲ ಸಂಗಮದೇವಾ) ನಿಮ್ಮ ವಚನಂಗಳ ಕೇಳದೆ" ಎಂಬ ಪ್ರಯೋಗವಿದೆ. ಲಿಂಗದೇವಾ, ನಿಮ್ಮ ವಚನ ಎಂದರೆ ಲಿಂಗದೇವನ ವಾಣಿ ಎಂದಾಗುತ್ತದೆ. ಹಾಗಾದರೆ ಯಾವುದದು? ಪಚನ ಸಾಹಿತ್ಯವು ದೇವನಿಗೆ ಶರಣಾದ ಶರಣರ ಹೃದಯಾಂತರಾಳದಿಂದ ಬಂದ ವಾಣಿ. ಯಾವುದೇ ದುರುದ್ದೇಶ, ಸ್ವಾರ್ಥ ಇಟ್ಟುಕೊಂಡು ಬರೆದುದಲ್ಲ. ಆದ್ದರಿಂದ ಅದು ಲಿಂಗದೇವರ ವಾಣಿಯೇ ಅಹುದು.

### 295. ಭಕ್ತನ ಲಕ್ಷಣ

ಜನ್ಮ ಹೊಲ್ಲೆಂಬೆನೆ ಜನ್ಮವ ಬಿಡಲಹೆನು;
ಭಕ್ತರೊ;ವ ಪಡೆವೆನೆ ಭಕ್ತಿಯ ಪಥವನರಿವೆನು
ಲಿಂಗವೆಂದು ಬಲ್ಲೆನೆ ಜಂಗಮವೆಂದು ಕಾಬೆನು;
ನಿಚ್ಚ ನಿಚ್ಚ ಶಿವರಾತ್ರಿಯ ಮಾಡಬಲ್ಲೆನೆ ಕೈಲಾಸವ ಕಾಣಬಲ್ಲೆನು!
ಎನ್ನಲ್ಲಿ ನಡೆಯಿಲ್ಲಾಗಿ ನಾನು ಭಕ್ತನೆಂತಹೆನಯ್ಯಾ, ಲಿಂಗದೇವಾ?

-ಬ.ವ.ದೀ.293

ಮಾನವ ಜನ್ಮ, ಸಂಸಾರ ಬಲು ಕಷ್ಟದಾಯಕ; ಕೆಟ್ಟದು (ಹೊಲ್ಲೆಹ) ಇದನ್ನು ನಾನು ಒಲ್ಲೆ ಎನ್ನೋಣವೆ? ಇದನ್ನು ಬಿಡಲಾರೆನು. ಏಕೆಂದರೆ ದೇವರನ್ನು ಒಲಿಸಲು ಮಾನವ ಜನ್ಮವೇ ಒಂದು ಶ್ರೇಷ್ಠ ಸಾಧನ. ಭಕ್ತರ, ಶರಣರ ಸಾಂಗತ್ಯ, ಒಡನಾಟ ಪಡೆದರೆ ಮಾತ್ರ ನಾನು ಭಕ್ತಿಯ ಪಥವನ್ನು ಅರಿಯಲು ಸಾಧ್ಯ. ಲಿಂಗದ ಸ್ವರೂಪ ಜ್ಞಾನ ಉಂಟಾದರೆ ಮಾತ್ರ ನಮಗೆ ನಿರಾಕಾರ ದೇವನ ಸಾಕಾರ ಮುಖವಾದ ಜಂಗಮವನ್ನು ದರ್ಶಿಸಲು ಸಾಧ್ಯ. ವರ್ಷಕ್ಕೊಂದು ಶಿವರಾತ್ರಿ ಮಾಡುವುದಿಲ್ಲ. ನಿತ್ಯವೂ ಶಿವರಾತ್ರಿ ಮಾಡಬೇಕು. ಏಕೆಂದರೆ ಅಜ್ಞಾನಿ ಜನರು ಅಂದು ತಪ್ಪದೆ ಸ್ನಾನ ಮಾಡಿ, ಲಿಂಗದರ್ಶನ ಪಡೆಯುವರು, ರಾತ್ರಿ ಜಾಗರಣೆ ಮಾಡಿ ಶಿವಧ್ಯಾನದಲ್ಲಿ ಕಾಲ ಕಳೆಯುತ್ತಾರೆ. ಇದು ನಿತ್ಯವೂ ಸಾಗಬೇಕು. ಪ್ರತಿರಾತ್ರಿಯನ್ನು ಪವಿತ್ರವಾಗಿ ದೇವಧ್ಯಾನದಲ್ಲಿ ಕಳೆಯಬೇಕು. ಶಿವರಾತ್ರಿಯಂದು ಮಿತಾಹಾರವನ್ನು ಮಾಡುವಂತೆ ನಿತ್ಯವೂ ಮಿತಾಹಾರವನ್ನು ಮಾಡಬೇಕು. ಹೀಗೆ ನಿತ್ಯವೂ ಶಿವರಾತ್ರಿ ಮಾಡಿದರೆ ಕೈಲಾಸವನ್ನು ನಾವು ಎಲ್ಲಿಯೂ ಹುಡುಕಬೇಕಾಗಿಲ್ಲ; ನಮ್ಮ ಮನದಲ್ಲೇ ಕೈಲಾಸವು ನಿರ್ಮಾಣವಾಗುವುದು. ಕೈಲಾಸವು ಸ್ಥಾನ ವಿಶೇಷವಲ್ಲ, ತತ್ವ ವಿಶೇಷ. ಏನು ಮಾಡುವುದು ನನ್ನಲ್ಲಿ ಈ ಎಲ್ಲ ಆಚರಣೆ ಇಲ್ಲದ ಕಾರಣ ನಾನು ಭಕ್ತನು ಹೇಗಾಗುತ್ತೇನೆ? ದೇವನ ಒಲುಮೆಯನ್ನು ಹೇಗೆ ಪಡೆಯಬಲ್ಲವನಾಗುತ್ತೇನೆ?!

★★★



## ಸಂಕೇಶ್ವರದಲ್ಲಿ ವಿಶ್ವಧರ್ಮ ಪ್ರವಚನ

ಬೆಳಗಾವಿ ಜಿಲ್ಲೆಯ ಸಂಕೇಶ್ವರದ ಶರಣ ಮಾರ್ಗದಲ್ಲಿರುವ ಗುರು ಬಸವ ಮಂಟಪದಲ್ಲಿ ದ್ವಿತೀಯ ಮಹಿಳಾ ಜಗದ್ಗುರು ಮಾತೆ ಗಂಗಾದೇವಿಯವರ ಶ್ರಾವಣ ಮಾಸದ ಪ್ರವಚನವು ದಿ. 22-7-09ರಂದು ಪ್ರಾರಂಭವಾಯಿತು. ದಿನದಿಂದ ದಿನಕ್ಕೆ ಹೆಚ್ಚಿನ ಜನರನ್ನು ಆಕರ್ಷಿಸಿ ದಿ. 6-9-09ರಂದು ಮಂಗಳ ಗೊಂಡಿತು. ಮುಕ್ತಾಯ ಕಾರ್ಯಕ್ರಮಕ್ಕಾಗಿ ದಿವ್ಯ ಸಾನಿಧ್ಯ ವಹಿಸಲು ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ದಿ. 5-9-09ರಂದು ಆಗಮಿಸಿ ಅಂದು ಪ್ರವಚನ ನೀಡಿದರು. ರಾ.ಬ.ದಳ ಸಂಕೇಶ್ವರದ ಅಧ್ಯಕ್ಷರಾದ ಡಾ|| ಶಿವಗೌಡ ಪಾಟೀಲ್ ಪೂಜ್ಯರನ್ನು ಸ್ವಾಗತಿಸಿ ಬರಮಾಡಿಕೊಂಡರು. ದೇವವಾರ ದಿ. 6ರಂದು ಬೆಳಿಗ್ಗೆ 10 -30ರಿಂದ ಬೆಳಗಾವಿ ಜಿಲ್ಲಾ ರಾ.ಬ.ದಳ ಶಾಖೆಗಳ ಸಮಾವೇಶ ಜರುಗಿತು. ಸಾಮೂಹಿಕ ಪ್ರಾರ್ಥನೆಯ ನಂತರ ಚಿಂತನ ಗೋಷ್ಠಿ ನಡೆಯಿತು. ಸಂಜೆ 5ರಿಂದ ಭವ್ಯವಾದ ಮೆರವಣಿಗೆ ಜರುಗಿತು. ಮುನ್ಸಿಪಲ್ ಆಫೀಸ್ ಬಳಿ ಮಾತಾದ್ವಯರನ್ನು ಸ್ವಾಗತಿಸಿ ಮೆರವಣಿಗೆಯ ಮೂಲಕ ನಗರದ ಪ್ರಮುಖ ಬೀದಿಗಳಲ್ಲಿ ಹಾಯ್ದು ವೇದಿಕೆಗೆ ಕರೆತರಲಾಯಿತು. ಸಮಾರೋಪ ಸಮಾರಂಭ ಅದ್ದೂರಿಯಾಗಿ ನಡೆಯಿತು. ಪೂಜ್ಯರನ್ನು ಗಣ್ಯವರ್ತಕರು ರಾ.ಬ.ದಳದ ಗೌರವಾಧ್ಯಕ್ಷರು ಆದ ಶರಣ. ಪರ್ವತರಾವ ಪಾಟೀಲ್ ಶಾಲು ಹೊದ್ದಿಸಿ ಸತ್ಕರಿಸಿದರು.

## ಹುಬ್ಬಳ್ಳಿಯಲ್ಲಿ ಬಸವ ಜ್ಯೋತಿ ಸಮಾರೋಪ

ಹುಬ್ಬಳ್ಳಿ ನಗರದ ಉಣಕಲ್ ಪ್ರದೇಶದ ಶ್ರೀನಗರದಲ್ಲಿರುವ ರಾ.ಬ.ದಳದ ಬಸವ ಮಂಟಪದಲ್ಲಿ ಬಸವ ಜ್ಯೋತಿಯ ಸಮಾರೋಪ ಸಮಾರಂಭವು ದಿ.4-09-09ರಂದು ಜರುಗಿತು. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯಸನ್ನಿಧಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಕುಂದುಗೋಳದ ಶಾಸಕರಾದ ಶರಣ. ಎಸ್.ಆಯ್.ಚಿಕ್ಕನಗೌಡ್ರು ಷಟಸ್ಥಲ ಧ್ವಜಾರೋಹಣ ಮಾಡಿದರು.ವಿಧಾನ ಪರಿಷತ್ ಸದಸ್ಯರಾದ ಶರಣ ಮೋಹನ್ ಲಿಂಬಿಕಾಯಿ ಅವರು ಉದ್ಘಾಟನೆ ಮಾಡಿದರು. ಪ್ರಾಧ್ಯಾಪಕರಾದ ಶರಣ.ಕೆ.ಎಸ್. ಕೌಜಲಗಿ ಅವರು ವಿಶೇಷ ಉಪನ್ಯಾಸ ನೀಡಿ ಪೂಜ್ಯ ಮಾತಾಜಿಯವರ ಸಾಧನೆ ಕುರಿತು ವಿಸ್ತಾರವಾಗಿ ಹೇಳಿದರು. ಹುಬ್ಬಳ್ಳಿಯ ರಾ.ಬ.ದಳದ ಅಧ್ಯಕ್ಷರಾದ ಕಲ್ಯಾಣಪ್ಪ ಪರಮಾದಿ ಅಧ್ಯಕ್ಷತೆ ವಹಿಸಿದ್ದರು. ಶರಣ. ಎಸ್.ಬಿ.ಜೋಡಳ್ಳಿ ಅವರು ಪ್ರಾಸ್ತಾವಿಕ ಭಾಷಣ ಮಾಡಿದರು.

## ಧಾರವಾಡದಲ್ಲಿ ಬಸವ ಜ್ಯೋತಿ ಸಮಾರೋಪ

ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದ ಬಸವ ಮಂಟಪದಲ್ಲಿ ಬಸವ (ಮಂಗಳ)ವಾರ, ದಿ.8-9-09ರಂದು ಧಾರವಾಡ ರಾ.ಬ.ದಳದವರ ಬಸವ ಜ್ಯೋತಿ ಸಮಾರೋಪ ಸಮಾರಂಭ ಜರುಗಿತು. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಧಾರವಾಡ ತಾ. ತಹಸೀಲ್ದಾರರಾದ ಶರಣ. ರವೀಂದ್ರ ಕರಲಿಂಗಣ್ಣನವರು ಬಸವ ಧ್ವಜಾರೋಹಣ ಮಾಡಿದರು. ನಿವೃತ್ತ ತತ್ವಶಾಸ್ತ್ರ ಪ್ರಾಧ್ಯಾಪಕ ಡಾ|| ಆರ್.ಆಯ್. ಇಂಗಳಳ್ಳಿ ಶರಣರ ಪರಿಸರ ಪ್ರಜ್ಞೆ ಕುರಿತು ಉಪನ್ಯಾಸ ನೀಡಿದರು. ಯೋಗಾಚಾರ್ಯ ಅಜಯ ನವಲಗಟ್ಟಿಯವರು ಆರೋಗ್ಯಕರ ಜೀವನಕ್ಕೆ ಯೋಗ ಕುರಿತು ಉಪನ್ಯಾಸ ನೀಡಿದರು. ರಾ.ಬ.ದಳದ ಅಧ್ಯಕ್ಷ ಸಿದ್ಧಣ್ಣ ನಟೇಗಲ್ ಅಧ್ಯಕ್ಷತೆಯಲ್ಲಿ ಶರಣ. ದೇವೇಂದ್ರಪ್ಪ ಇಂಗಳಳ್ಳಿ ಸ್ವಾಗತಿಸಿದರು. ಶರಣೆ. ಶಾಂತಕ್ಕ ಶರಣ. ಮಲ್ಲೇಶಪ್ಪ ಕುಸುಗಲ್ ದಾಸೋಹ ಸೇವೆ ನಿರ್ವಹಿಸಿದರು.

---

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲದನ್ನಕ್ಕ

## ಲಿಂಗಾಯತದ ಮೂಲಧಾರೆ ಹಿಡಿದು

ಇತ್ತೀಚೆಗೆ ಲಿಂಗಾಯತ ಮತ್ತು ವೀರಶೈವಗಳ ನಡುವಿನ ಭಿನ್ನತೆ ಮತ್ತು ಸಾಮ್ಯತೆಯನ್ನು ಕುರಿತಂತೆ ಚರ್ಚೆ ನಡೆಯುತ್ತಿದೆ. ಇಂತಹ ವಿಷಯಗಳಲ್ಲಿ ವಿದ್ವಾಂಸರು ಅಂಕ ಗಳಿಸುವ ವಿತಂಡವಾದಕ್ಕೆ ಇಳಿದಿರುವುದು ಆಶ್ಚರ್ಯ ಉಂಟು ಮಾಡುತ್ತದೆ. ಇದರಿಂದ ಏನನ್ನೂ ಸಾಧಿಸುವುದು ಸಾಧ್ಯವಿಲ್ಲ. ವೀರಶೈವ ಎಂಬುದು ವಚನಗಳಲ್ಲಿ ಎಷ್ಟು ಬಾರಿ ಬಂದಿದೆ. ಲಿಂಗಾಯತ ಎಂಬುದು ಎಷ್ಟು ಬಾರಿ ಎಂಬುದರ ಬಗ್ಗೆ ಖಾತೆಕಿರ್ದಿ (ಈ ಲಾಭ - ನಷ್ಟದ ಪರಿಭಾಷೆಯನ್ನು ಡಾ.ಎಂ.ಚಿದಾನಂದಮೂರ್ತಿ ಅವರು ತಮ್ಮ ವೀರಶೈವ ಧರ್ಮ : ಭಾರತೀಯ ಸಂಸ್ಕೃತಿ ಕೃತಿಯಲ್ಲಿ - ಪು 290 -291 - ಬಳಸಿದ್ದಾರೆ) ಹಿಡಿದುಕೊಂಡು ಚರ್ಚೆ ನಡೆಸಿದರೆ ಅಲ್ಲಿ ನಮಗೇನೂ ದೊರೆಯುವುದಿಲ್ಲ.

ಗತಕಾಲವನ್ನು ಕುರಿತಂತೆ ನಮ್ಮ ದೃಷ್ಟಿಕೋನವೇನಿರಬೇಕು ಎಂಬುದು ಸ್ಪಷ್ಟವಿಲ್ಲದಿದ್ದಾಗ ಇಂತಹ ವಿಕೃತಿಗಳುಂಟಾಗುತ್ತವೆ. ಕೆಲವರು ಗತಕಾಲದಲ್ಲಿ ನಿಂತು ತಮ್ಮ ವಿಚಾರಗಳನ್ನು ವರ್ತಮಾನದಲ್ಲಿ ಪ್ರತಿಪಾದಿಸುತ್ತಿರುತ್ತಾರೆ. ಅಂತಹವರು ತಮಗೆ ಸರಿ ಹೊಂದುವುದಾದರೆ ಗತಕಾಲಕ್ಕೆ ಕಟ್ಟು ಬೀಳುತ್ತಾರೆ. (ವೀರಶೈವ - ಲಿಂಗಾಯತಗಳ ಪ್ರಾಚೀನತೆಯ ಪ್ರಶ್ನೆ). ಅದಕ್ಕೆ ಪ್ರತಿಯಾಗಿ ವರ್ತಮಾನವು ತಮಗೆ ಅನುಕೂಲವಾಗುವುದಾದರೆ ಆಗ ಅದಕ್ಕೆ ಅವರು ತೆಕ್ಕೆ ಬೀಳುತ್ತಾರೆ (ಹಿಂದೂಧರ್ಮಕ್ಕೆ ಉಂಟಾಗಿದೆ ಎನ್ನಲಾದ ಅಪಾಯ). ವರ್ತಮಾನದಲ್ಲಿ ನಿಂತು ಗತಕಾಲದ ವಿಚಾರಗಳಿಂದ ತಥ್ಯಗಳನ್ನು ಹೇಗೆ ರೂಪಿಸಿಕೊಳ್ಳಬೇಕೆಂಬುದರ ಬಗ್ಗೆ ಅದರಿಂದ ಬೆಳಕನ್ನು ಹೇಗೆ ಪಡೆದುಕೊಳ್ಳಬೇಕೆಂಬುದರ ಬಗ್ಗೆ ಕರ್ನಾಟಕದಲ್ಲಿ ಬಹಳಷ್ಟು ವಿದ್ವಾಂಸರಿಗೆ ಗತಿ ಕಡಿಮೆ (ಇದು ವೈಧಾನಿಕತೆ ಪ್ರಶ್ನೆ). ಆದ್ದರಿಂದಲೇ ಇಲ್ಲಿನ ಈ ಬಗೆಯ ನಿಲುವುಗಳಿಂದಾಗಿ ಅನೇಕ ಬಾರಿ ಅಲ್ಲಿ ಚರ್ಚೆ ಸಾಧ್ಯವಾಗುವುದಿಲ್ಲ. ಲಿಂಗಾಯತ - ವೀರಶೈವ ಕುರಿತು ಚರ್ಚೆಯಲ್ಲೂ ಇಂತಹ ಸಮಸ್ಯೆ ಉಂಟಾಗಿದೆ.

ಲಿಂಗಾಯತವು ಒಂದು ಅವೈದಿಕ ಧರ್ಮವೆಂಬುದರ ಬಗ್ಗೆ ವೀರಶೈವ ಪ್ರಣಾಳಿಕೆಯ ಪ್ರತಿಪಾದಕರಿಗೆ ಒಪ್ಪಿಗೆ ಇದ್ದಂತಿಲ್ಲ. ಈ ಧರ್ಮದ ಮಠಗಳನ್ನು ವೀರಶೈವ ಮಠಗಳೆಂದು ಕರೆಯಬೇಕೆ ವಿನಾ ಲಿಂಗಾಯತ ಮಠಗಳೆಂದಲ್ಲವೆಂದು ಪ್ರತಿಪಾದಿಸುತ್ತಿರುವವರಿಗೆ ಲಿಂಗಾಯತ ಅಥವಾ ವೀರಶೈವಕ್ಕಿಂತ ಹಿಂದೂ ಧರ್ಮದ ಬಗ್ಗೆ ಕಾಳಜಿ ಅಧಿಕವಾಗಿರುವಂತೆ ಕಾಣುತ್ತದೆ. ಬರೀ ಲಿಂಗಾಯತರಲ್ಲ, ಕುರುಬರು, ನೇಕಾರರು, ಒಕ್ಕಲಿಗರು, ವಾಲ್ಮೀಕಿಗಳು, ನಾಯ್ಡುಗಳು ಇವರೆಲ್ಲಾ ತಮ್ಮ ತಮ್ಮ ಜಾತಿಗಳ ಅನನ್ಯತೆ ಬಗ್ಗೆ, ಅವುಗಳ ಅವೈದಿಕ ಪ್ರಣಾಳಿಕೆ ಬಗ್ಗೆ, ತಮ್ಮ ಸ್ವತಂತ್ರ ಅಸ್ತಿತ್ವದ ಬಗ್ಗೆ ಪ್ರತಿಪಾದಿಸತೊಡಗಿದರೆ ಭಾರತದಲ್ಲಿ ಹಿಂದೂ ಧರ್ಮಕ್ಕೆ ಉಂಟಾಗಬಹುದಾದ ಅಪಾಯದ ಬಗ್ಗೆ ಚಿದಾನಂದ ಮೂರ್ತಿ ಅವರು ಪ್ರಜಾವಾಣಿ (ಜುಲೈ -17) ಲೇಖನದಲ್ಲಿ ವಿವರವಾಗಿ ಪ್ರತಿಪಾದಿಸಿದ್ದಾರೆ.

ಲಿಂಗಾಯತ -ವೀರಶೈವಗಳ ಭಿನ್ನತೆ ಕುರಿತು ಚರ್ಚೆಯಲ್ಲಿ ಹಿಂದೂಧರ್ಮದ ಅಪಾಯದ ಸಂಗತಿಯೇಕೆ ಬಂತು ಎಂಬುದು ಅರ್ಥವಾಗುವುದಿಲ್ಲ. ಲಿಂಗಾಯತವೆಂದು, ಅದು ಅವೈದಿಕವೆಂದೂ, ಅದು ಲಿಂಗ ಸಮಾನತೆಯ ಪ್ರಣಾಳಿಕೆಯದ್ದೆಂದೂ ವಾದಿಸುವವರೆಲ್ಲಾ ಚಿದಾನಂದ ಮೂರ್ತಿಗಳಿಗೆ 'ಅಪಾಯಕಾರಿ' ಗಳಂತೆ ಯಾಕೆ ಕಾಣುತ್ತಾರೆಂಬುದು ಅಚ್ಚರಿಯ ಸಂಗತಿಯಾಗಿದೆ. ಇಲ್ಲದ ಆತಂಕವನ್ನು ಮಾನ್ಯರು ಇಲ್ಲಿ ಹುಟ್ಟು ಹಾಕುತ್ತಿದ್ದಾರೆ. ಕಳೆದ ಹತ್ತಾರು ಶತಮಾನಗಳಿಂದ ಹಿಂದೂ ಧರ್ಮಕ್ಕೆ ಬಂದೊದಗದ ಅಪಾಯವನ್ನು ವಿದ್ವಾಂಸರು ಈಗ ಬಂದುಬಿಡಬಹುದೆಂದು ಆತಂಕ ಪಡುತ್ತಿರುವುದಕ್ಕೆ ಲಿಂಗಾಯತ -ವೀರಶೈವಗಳ ಭಿನ್ನತೆಯ ವಿಷಯಕ್ಕಿಂತ ಬೇರಾವುದೋ ಪ್ರಣಾಳಿಕೆ ಅಲ್ಲಿ ಕೆಲಸಮಾಡಿಬೇಕು. ಅದನ್ನು ತಿಳಿದುಕೊಳ್ಳುವ ಕುತೂಹಲವಿದ್ದರೂ ಇಲ್ಲಿ ಅದು ಬೇಡ. ಲಿಂಗಾಯತ-ವೀರಶೈವಗಳಿಗೆ ಸಂಬಂಧಿಸಿದ ಸಂಗತಿಯೊಳಗೆ ಚಿದಾನಂದಮೂರ್ತಿಯವರು ಅನವಶ್ಯಕವಾಗಿ ಹಿಂದೂಧರ್ಮದ ಕಾರಣವನ್ನು ನುಸುಳಿಸಿದ್ದಾರೆ.

ಇಲ್ಲಿ ಅವರು ಬಳಸುತ್ತಿರುವ ಪರಿಭಾಷೆ ವಚನ ಸಂಸ್ಕೃತಿಯದಲ್ಲ. ಇವರ ಲೇಖನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇವರ ಕಾಳಜಿ-ಆತಂಕ ಎಲ್ಲಿಗೆ ಹೋಗಿ ನಿಲ್ಲುತ್ತದೆ ಎಂಬುವುದನ್ನು





ಪ್ರಾಜ್ಞರು ಸುಲಭವಾಗಿ ಗುರುತಿಸಬಹುದು. ಇಲ್ಲದ ಭೂತವನ್ನು ಇರುವುದೆಂದು ಭಾವಿಸುವುದನ್ನು ಅಥವಾ ಅದು ಇದೆ ಎಂದು ಪ್ರತಿಪಾದಿಸುವುದನ್ನು 'ಭ್ರಮೆ' ಎಂದು ತಿಳಿದವರು ಹೇಳುತ್ತಾರೆ. ಲಿಂಗಾಯತ ಕುರಿತು ಚರ್ಚೆಯಲ್ಲಿ ಅಪಾಯ ಕಂಡಿರುವ ಸಂಗತಿಯೇ ಒಂದು ಭ್ರಮೆ. ಕರ್ನಾಟಕದ ಸಂದರ್ಭದಲ್ಲಿ ಚಿದಾನಂದ ಮೂರ್ತಿಯವರು ಸಾಕ್ಷ್ಯಾಧಾರವಾದಿ ಸಂಶೋಧನೆಯ ಗಟ್ಟಿ ಪ್ರತಿಪಾದಕರು. ಚರಿತ್ರೆಯಲ್ಲಿ ಸಾಕ್ಷ್ಯಾಧಾರಗಳ ಪಾತ್ರವೇನು, ಅವುಗಳನ್ನು ಹೇಗೆ ಬಳಸಿಕೊಳ್ಳಬೇಕು. ಹೇಗೆ ಬಳಸಿಕೊಳ್ಳಲಾಗುತ್ತಿದೆ, ಅವು ಹೇಳುತ್ತಿರುವುದೇನು, ಹೇಳುವುದೇನು ಎಂಬ ಸಂಗತಿಗಳನ್ನು ಕುರಿತಂತೆ ವಿಶ್ವದಾದ್ಯಂತ ಸಾಕಷ್ಟು ಚರ್ಚೆಗಳು ನಡೆದಿವೆ ಮತ್ತು ನಡೆಯುತ್ತಿವೆ. ಚಿದಾನಂದ ಮೂರ್ತಿಯವರು ಪ್ರಚ್ಛನ್ನವಾಗಿ ಒಪ್ಪಿಕೊಂಡಿರುವ ಪ್ರಣಾಳಿಕೆಯ ಅನೇಕ ಪ್ರಕರಣಗಳಲ್ಲಿ ಸಾಕ್ಷ್ಯಾಧಾರವನ್ನು ಬಿಟ್ಟು ಬಹು ಸಂಖ್ಯಾತರ ಭಾವನೆಯನ್ನು ಮನ್ನಿಸಬೇಕೆಂದು ಪ್ರತಿಪಾದಿಸುತ್ತಿರುವುದನ್ನು ಯಾಕೆ ಇಲ್ಲಿ ಮರೆತಿದ್ದಾರೆ? ತಮ್ಮನ್ನು ತಾವು ಲಿಂಗಾಯತ ಧರ್ಮಾವಲಂಬಿಗಳೆಂದು ಕರೆದುಕೊಳ್ಳುವುದು ಲಿಂಗಾಯತರಿಗೆ ಭಾವನಾತ್ಮಕವಾದ ಸಂಗತಿಯಾದರೆ ಅಲ್ಲಿ ಸಾಕ್ಷ್ಯಾಧಾರದ ಅಗತ್ಯವಿಲ್ಲ. ಅದು ಸಾಕ್ಷ್ಯಾಧಾರದ ಸಂಗತಿ ಅಲ್ಲ. ಅದು ವಚನ ಸಂಸ್ಕೃತಿಯನ್ನು ಮತ್ತು ಬಸವ ಸಂವಿಧಾನವನ್ನು ಒಪ್ಪಿಕೊಂಡ ಪ್ರಣಾಳಿಕೆ. ಅದರ ಹಿಂದೆ ಲಕ್ಷಾಂತರ ಮಂದಿ ಕರ್ನಾಟಕಸ್ಥರು, ವಚನಾನುಯಾಯಿಗಳು, ಬಸವಾನುಯಾಯಿಗಳ ಮುಗ್ಧ ಮನಸ್ಸುಗಳಿವೆ.

ಬಸವಣ್ಣನವರು ಧರ್ಮ ಸ್ಥಾಪಕರಲ್ಲವೆಂದೂ, ಲಿಂಗ ಸಮಾನತೆಯೆಂಬುದು ವಚನ ಸಂಸ್ಕೃತಿಯ ಕೊಡುಗೆಯಲ್ಲವೆಂದೂ, ಲಿಂಗಾಯತರ ಪ್ರಗತಿಪರ ಪರಿಕಲ್ಪನೆಗಳು 'ಬಸವ ಪೂರ್ವ' ಯುಗದವೆಂದು ಹೇಳುವುದೂ ಒಂದು ವ್ಯಸನವಾಗಿ ಬಿಟ್ಟಿದೆ. ವಚನ ಪ್ರಣೀತ ತತ್ವವನ್ನು ಒಂದು ರೀತಿಯಲ್ಲಿ ಅವರು ಕುಬ್ಜಗೊಳಿಸಲು ವ್ಯವಸ್ಥಿತವಾಗಿ ಪ್ರಯತ್ನಿಸುತ್ತಿದ್ದಾರೆ. ಅವರ ಪ್ರಕಾರ ಬಸವಣ್ಣನವರು ಯಾವುದೇ ಧರ್ಮ ಸಂಸ್ಥಾಪಕರಲ್ಲದಿರಬಹುದು. ಆದರೆ ಅವರ ಬಗ್ಗೆ ಧರ್ಮ ಸಂಸ್ಥಾಪಕರಿಗೆ ನೀಡಿದಷ್ಟೆ ಗೌರವವನ್ನು ಜನರು ನೀಡುತ್ತಿದ್ದಾರೆ. ಬಸವಣ್ಣನವರ ಬಗ್ಗೆ, ಲಿಂಗಾಯತ ಧರ್ಮದ ಬಗ್ಗೆ, ವಚನ ಸಂಸ್ಕೃತಿಯ ಬಗ್ಗೆ ಜನರಿಗೆ ಭಾವನಾತ್ಮಕ ಬದ್ಧತೆ ಇದ್ದರೆ, ಅವನ್ನು ಅವರು ಹಾಗೆ ನಂಬಿದ್ದರೆ ಮತ್ತು ನಡೆದು ಕೊಳ್ಳುತ್ತಿದ್ದರೆ ಅಲ್ಲಿ ಸಾಕ್ಷ್ಯಾಧಾರಗಳಿರುವುದಿಲ್ಲ. ಅವುಗಳ ಅಗತ್ಯವಿಲ್ಲ. ಅದರ ಬಗ್ಗೆ ಸಾಕ್ಷ್ಯಾಧಾರ ಒದಗಿಸುವುದು ಬೇಕಾಗಿಲ್ಲ. ಸಮಾಜ ವಿಜ್ಞಾನದ ವಿದ್ಯಾರ್ಥಿಯು ತಾನಾಗಿದ್ದೇನೆಂದು ಅವರು ಹೇಳಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಮಾಜದಲ್ಲಿ ಎಲ್ಲವನ್ನೂ ಸಾಕ್ಷ್ಯಾಧಾರದಿಂದಲೂ ಸಿದ್ಧಮಾಡುವ ಅಗತ್ಯವಿಲ್ಲವೆಂಬ ಸಮಾಜ ವಿಜ್ಞಾನದ ಇತ್ತೀಚೆಗಿನ ತತ್ವ ಅವರಿಗೆ ತಿಳಿದಿದೆ ಎಂದು ನಾನು ಭಾವಿಸಿದ್ದೇನೆ.

ಈ ಸಾಕ್ಷ್ಯಾಧಾರವಾದಿ ಸಂಶೋಧನೆಯ ಕಾಲ ಮುಗಿದು ಹೋಗಿದೆ. ಅದು ಒಂದು ವಿಧಾನ. ಅದರಿಂದ ಪಡೆಯುವ ಸತ್ಯವೇ ಅಂತಿಮವಲ್ಲ. ಸತ್ಯವು ಏಕರೂಪಿಯಾದುದಲ್ಲ. ಅದಕ್ಕೆ ಬಹುಮುಖಗಳಿರಬಹುದು. ಈ ಬಹುಮುಖಿ ನೆಲೆಗಳ, ಬಹು ಆಯಾಮಗಳ ವಿನ್ಯಾಸವನ್ನು ತಿರಸ್ಕರಿಸಿ ಏಕರೂಪೀಕರಣವನ್ನು ಪ್ರತಿಪಾದಿಸುವ ಒಂದು ವರ್ಗ ಇಂದು ಕರ್ನಾಟಕದಲ್ಲಿ ಪ್ರಬಲವಾಗುತ್ತಿದೆ. ಅದರ ಒಂದು ಎಳೆಯನ್ನು ಚಿದಾನಂದ ಮೂರ್ತಿಯವರ "ಲಿಂಗಾಯತವೆನ್ನುವುದೊಂದು ಉಪಾದಿ ಮಾತ್ರ. ಹಿಂದೂ ಧರ್ಮ ಪ್ರಣೀತ ವೀರಶೈವವೆನ್ನುವುದು ಮಾತ್ರ ಸತ್ಯ"ವೆನ್ನುವ ವಾದದಲ್ಲಿ ಢಾಳಾಗಿ ಕಾಣಬಹುದು. ಅವರ ಲೇಖನದಲ್ಲಿ ಇದನ್ನು ಸರಳವಾಗಿ ಗುರುತಿಸಬಹುದು.

ಈ ದೇಶದಲ್ಲಿ ವೈದಿಕ ಮತ್ತು ಅವೈದಿಕ ಪ್ರಣಾಳಿಕೆಗಳು ಅನಾದಿ ಕಾಲದಿಂದಲೂ ಸಂಘರ್ಷ ನಡೆಸಿಕೊಂಡು ಸಮನ್ವಯತೆಯನ್ನು ಸಾಧಿಸಿಕೊಂಡು ಬರುತ್ತಿವೆ. ಇದನ್ನು ನಾವು ಒಪ್ಪಿಕೊಳ್ಳಬೇಕು. ಅದರಿಂದ ಹಿಂದೂ ಧರ್ಮಕ್ಕೆ ಯಾವುದೇ ಅಪಾಯ ಹಿಂದೆ ಸಂಭವಿಸಿಲ್ಲ. ಆದರೆ ವೇದಗಳೇ ಅಂತಿಮವಲ್ಲ ಮತ್ತು ಅವು ಪ್ರಶ್ನಾತೀತವಲ್ಲ. ಅವು ನಮ್ಮ ಸಮಾಜಕ್ಕೆ ಜನಸಮುದಾಯಗಳಿಗೆ ಸಾಕಷ್ಟು ಅನ್ಯಾಯ ಮಾಡಿವೆ. ಅದು ಎಲ್ಲರಿಗೂ ಗೊತ್ತಿರುವ ಸಂಗತಿ. ಅದನ್ನು ತಿಳಿದು ಮುಚ್ಚಿಡುವುದು ಬೇಡ. ವಚನಕಾರರು ವೇದೋಪನಿಷತ್ತುಗಳ ಬಗ್ಗೆ ವಿರೋಧಿ ಭಾವನೆ ತಳೆದಿರಲಿಲ್ಲವೆಂದು

ಮಾನ್ಯರು ಹೇಳುತ್ತಾರೆ. ಆದರೆ ಅನೇಕ ವಚನಕಾರರು ವೇದೋಪನಿಷತ್ತುಗಳ ಬಗ್ಗೆ ಅನುಮಾನವನ್ನು ಯಾಕೆ ವ್ಯಕ್ತಪಡಿಸಿದ್ದಾರೆ? ಯಾಕೆ ಅವುಗಳ ಅದರ ಬಗ್ಗೆ ಪ್ರಶ್ನೆಗಳನ್ನೆತ್ತಿದ್ದಾರೆ? ಮಾನ್ಯರು ಹೇಳುವಂತೆ ಈ ಪ್ರಶ್ನೆಗಳು ಕೇವಲ ಆಚರಣೆಗೆ ಸಂಬಂಧಿಸಿದವುಗಳಲ್ಲ. ಅವರು ವೇದೋಪನಿಷತ್ತುಗಳ ಬಗ್ಗೆ ಮೂಲಭೂತ ಪ್ರಶ್ನೆಗಳನ್ನೆತ್ತಿದ್ದಾರೆ. ನಮ್ಮ ಕೂಡಲ ಸಂಗಯ್ಯನು ಮಾದಾರ ಚನ್ನಯ್ಯನ ಮನೆಯಲ್ಲುಂಡ ಕಾರಣಕ್ಕೆ ವೇದಗಳು ನಡುನಡುಗುತ್ತಿದ್ದವೆಂದು ಬಸವಣ್ಣನವರು ಯಾಕಾಗಿ ಹೇಳಬೇಕಾಗಿ ಬಂತು? ವಚನ ಸಂಸ್ಕೃತಿಯಲ್ಲಿ ಅಲ್ಲೊಂದು ಇಲ್ಲೊಂದು ಸಾಕ್ಷ್ಯಾಧಾರಗಳನ್ನು ಹೆಕ್ಕಿಕೊಂಡು ತಾತ್ವಿಕ ತೀರ್ಮಾನಕ್ಕೆ ಬರುವ ಕ್ರಮ ಸರಿಯಲ್ಲ. ಇಡೀ ವಚನ ಸಾಹಿತ್ಯದಲ್ಲಿ ವಚನಕಾರರು ಯಾಕೆ ಮತ್ತೆ ಮತ್ತೆ ವೈದಿಕದ ಬಗ್ಗೆ ಪ್ರಶ್ನೆಗಳನ್ನು ಎತ್ತುತ್ತಾರೆ? ಯಾಕೆ ಅವರು ಅವುಗಳನ್ನು ತೀಕ್ಷ್ಣ ವಿಮರ್ಶೆಗೆ ಒಳಪಡಿಸುತ್ತಾರೆ ? ಈ ಅನುಮಾನವಾದಿ ದೃಷ್ಟಿಕೋನ ವಚನಕಾರರಗಿತ್ತು. ಅವರ ಮೂಲ ಸಿದ್ಧಾಂತ ಅವೈದಿಕವಾದುದಾಗಿತ್ತು. ಈ ಕಾರಣದಿಂದಾಗಿ ಕರ್ನಾಟಕದ ಲಿಂಗಾಯತರು ತಮ್ಮ ಧರ್ಮವನ್ನು ಲಿಂಗಾಯತವೆಂದು ಕರೆದುಕೊಂಡರೆ ಅದು ಭ್ರಮೆಯೆನ್ನುವುದಾದರೆ, ಇರಲಿ. ಅದಕ್ಕೆ ಸಾಕ್ಷ್ಯಾಧಾರದ ಅಗತ್ಯವಿಲ್ಲ. ಆದರೆ ಚಿದಾನಂದ ಮೂರ್ತಿಯವರು ತಮ್ಮ ಲೇಖನದ ಕೊನೆಯಲ್ಲಿ ಲಿಂಗಾಯತವನ್ನು ಧರ್ಮವೆನ್ನುವುದರಿಂದ, ಅದು ಹಿಂದೂಧರ್ಮದಿಂದ ಭಿನ್ನ ಎನ್ನುವುದರಿಂದ ನಾಡಿಗೆ ಅಪಾಯವೆಂದಿರುವುದು ಮಾತ್ರ ಅಸತ್ಯ. ಅದು ಅವರ ಭ್ರಮೆ.

ಲಿಂಗಾಯತವು ಒಂದು ಧರ್ಮವೆನ್ನುವುದರಿಂದ ಹಿಂದು ಧರ್ಮಕ್ಕೆ ಯಾವ ರೀತಿಯ ಅಪಾಯವಾಗಿದೆ ಎಂಬುದಕ್ಕೆ ಮಾನ್ಯರು ಸಾಕ್ಷ್ಯಾಧಾರವನ್ನು ನೀಡುತ್ತಾರೆಯೇ? ಈ ಸಾಕ್ಷ್ಯಾಧಾರ ವಿತಂಡವಾದವನ್ನು ಬಿಟ್ಟು ವಚನ ಸಂಸ್ಕೃತಿಯ ಮೂಲಸ್ರೋತವನ್ನು ಹಿಡಿದುಕೊಂಡು ನಾವು ಮಾತನಾಡುವುದು ಒಳಿತು. ಈ ಮೂಲಧಾರೆ ಅವೈದಿಕವೆಂಬುದು ಮಾತ್ರ ಸ್ಪಷ್ಟ. ಅದಕ್ಕೇ ಅದು ಲಿಂಗಾಯತ ಧರ್ಮ.

- ಟಿ.ಆರ್.ಚಂದ್ರಶೇಖರ್

(ಲೇಖಕರು, ಹಂಪಿ ಕನ್ನಡ ವಿವಿಯ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರು)

(ಪ್ರಜಾವಾಣಿ ಕೃಪೆಯಿಂದ)

---

## ದೇಹ ದಾನಿ ಶರಣರನ್ನು ಅಭಿನಂದಿಸಿದ ಕೆ.ಎಲ್.ಇ. ನಿರ್ದೇಶಕರ ಮಂಡಳಿ

ವಿಶ್ವಗುರು ಬಸವಣ್ಣನವರ 814ನೆಯ ಲಿಂಗೈಕ್ಯ ಸ್ಮರಣೆ ಗುರು ಬಸವ ಪಂಚಮಿ ನಿಮಿತ್ತ ತಾ. 25-7-09ರಂದು ಪ್ರತಿಷ್ಠಿತ ಕೆ.ಎಲ್.ಇ.ಎಸ್ ನ ಡಾ|| ಪ್ರಭಾಕರ ಕೋರೆ ಆಸ್ಪತ್ರೆಗೆ ಸ್ವ-ಇಚ್ಛೆಯಿಂದ ಸಾಮೂಹಿಕವಾಗಿ ತಮ್ಮ ದೇಹದಾನ ಮಾಡಲು ನಿಶ್ಚಯಿಸಿದ ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ ಮತ್ತು ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ಮಹಿಳಾ ಗಣಗಳ 19 ಸದಸ್ಯರು ಹೊಸ ಇತಿಹಾಸ ನಿರ್ಮಿಸಿದ ಸಂದರ್ಭದಲ್ಲಿ ಕೆ.ಎಲ್.ಇ.ಎಸ್ ನ ನಿರ್ದೇಶಕರ ಮಂಡಳಿಯವರು, ಉಪಾಧ್ಯಕ್ಷರಾದ ಶರಣ. ಅಶೋಕ ಬಾಗೇವಾಡಿ ಅವರ ನೇತೃತ್ವದಲ್ಲಿ ಅಭಿನಂದಿಸಿದರು. ಆ ಸಂದರ್ಭದಲ್ಲಿ ನಿರ್ದೇಶಕರಾದ ಡಾ|| ಎ.ಎಸ್. ಸಾಧುನವರ, ಡಾ|| ಎಸ್.ಸಿ. ಮೆಟಗುಡ್, ಶಂಕರಣ್ಣ ಮುನವಳ್ಳಿ, ಡಾ|| ರಾಜಶೇಖರ್ ಅಲ್ಲದೆ ಡಾ|| ಎಂ.ವಿ. ಜಾಲಿ, ಕೆ.ಎಲ್.ಇ ಆಸ್ಪತ್ರೆಯ ಮುಖ್ಯಸ್ಥರು, ಡಾ|| ಎಫ್.ವಿ.ಮಾನ್ವಿ, ಡಾ|| ಸಿ.ಕ. ಕೊಲಾಟೆ, ವೈಸ್ ಚಾನ್ಸಲರ್, ಕೆ.ಎಲ್.ಇ. ಯುನಿವರ್ಸಿಟಿ, ಡಾ|| ವಿ.ಡಿ. ಪಾಟೀಲ್, ಪ್ರಾಂಶುಪಾಲರು, ಜೆ.ಎನ್.ಎಂ.ಸಿ. ಮತ್ತು ಇತರರು ಉಪಸ್ಥಿತರಿದ್ದರು. ಬೆಳಗಾವಿ ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಶರಣ. ಕೆ. ಬಸವರಾಜು, ಉಪಾಧ್ಯಕ್ಷ ಶರಣ. ಅಶೋಕ್ ಬೆಂಡಿಗೇರಿ, ಬೆಳಗವಿ ಜಿಲ್ಲಾ ಲಿಂಗಾಯತ ಧರ್ಮದ ಮಹಾಸಭಾದ ಉಪಾಧ್ಯಕ್ಷ ಶರಣ. ಮಾರುತಿ ಗಡಗಲಿ ಮುತ್ತರರು ಭಾಗವಹಿಸಿದ್ದರು.



## ಆದಿ ಶರಣರ ಸ್ಮರಣೆ

ಶರಣ ಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವದ 2ನೆಯ ದಿವಸ ಅಂದರೆ (3-10-2009) ಆದಿ ಶರಣರನ್ನು ಸ್ಮರಿಸಿಕೊಂಡು ಅವರಿಗೆ ಶರಣು ಸಲ್ಲಿಸುವ ಪವಿತ್ರ ಧಾರ್ಮಿಕ ವಿಧಿಯು ನಡೆಯುತ್ತದೆ. ಲಭ್ಯವಿರುವ ಶರಣರ ಹೆಸರುಗಳನ್ನು ಇಲ್ಲಿ ಪ್ರಕಟಿಸಲಾಗಿದೆ.

|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||

866666

ಷಟ್ ಸಂಜ್ಞೆಗಳು :

ಅಷ್ಟಾವರಣವು ಎಂಟು ಷಡಾಚಾರಗಳು ಆರು
ಷಟ್‌ಸ್ಥಲಗಳೂ ಆರು ಷಟ್‌ಸೂತ್ರಗಳು ಆರು
ಷಟ್‌ಶೀಲಗಳು ಆರು ಷಟ್‌ಕ್ರಿಯೆಗಳು ಆರು
ಷಟ್ ಸಂಜ್ಞೆಗಳು ಆರು ಎಂದು ನೆನೆಯುವೆನು ||

ಜಯ ಜಯ ಘನಲಿಂಗ ಜಯ ಮಂಗಳಾಂಗ
ಜಯತು ಜಯ ಬಸವ ಗುರು ಪ್ರಾಣೇಶ ಲಿಂಗ
ಜಯ ಭಕ್ತವತ್ಸಲ ಇಷ್ಟ ಪ್ರದಾಯಕ
ಜಯ ಸಚ್ಚಿದಾನಂದ ಜಯ ಲಿಂಗದೇವ ||

1. ಸೃಷ್ಟಿಕರ್ತ ಲಿಂಗದೇವನಿಗೆ ಶರಣು, ಶರಣು ಶರಣಾರ್ಥಿ
2. ಲಿಂಗಾಯತ ಧರ್ಮಕರ್ತ ಗುರು ಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
3. ಶೂನ್ಯಪೀಠಾಧೀಶ ಅಲ್ಲಮಪ್ರಭುದೇವರಿಗೆ ಶರಣು, ಶರಣು ಶರಣಾರ್ಥಿ
4. ಚಿನ್ಮಯಜ್ಞಾನಿ ಚನ್ನಬಸವಣ್ಣನವರಿಗೆ ಶರಣು, ಶರಣು ಶರಣಾರ್ಥಿ
5. ಲಿಂಗಾಂಗಯೋಗಿ ಸಿದ್ಧರಾಮೇಶ್ವರರಿಗೆ ಶರಣು, ಶರಣು ಶರಣಾರ್ಥಿ
6. ವೀರ ವಿರಾಗಿಣಿ ಅಕ್ಕಮಹಾದೇವಿಗೆ ಶರಣು, ಶರಣು ಶರಣಾರ್ಥಿ
7. ವೀರ ಗಣಾಚಾರಿ ಮಡಿವಾಳ ಮಾಚಿದೇವರಿಗೆ ಶರಣು, ಶರಣು ಶರಣಾರ್ಥಿ
8. ಕ್ರಾಂತಿ ಗಂಗೋತ್ರಿ ಅಕ್ಕನಾಗಲಾಂಬಿಕಾ ತಾಯಿಗೆ ಶರಣು, ಶರಣು ಶರಣಾರ್ಥಿ
9. ದಾಸೋಹಮೂರ್ತಿ ನೀಲಾಂಬಿಕಾತಾಯಿಗೆ ಶರಣು, ಶರಣು ಶರಣಾರ್ಥಿ
10. ಹುತಾತ್ಮ ಚೇತನ ಹರಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
11. ಧೀರ ಶರಣೆ ಕಲ್ಯಾಣಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
12. ಧೀರ ಶರಣ ಮಧುವರಸರಿಗೆ ಶರಣು, ಶರಣು ಶರಣಾರ್ಥಿ
13. ಧೀರ ಶರಣ ಶೀಲವಂತಯ್ಯನಿಗೆ ಶರಣು, ಶರಣು ಶರಣಾರ್ಥಿ
14. ಧೀರ ಶರಣೆ ಲಾವಣ್ಯವತಿಗೆ ಶರಣು, ಶರಣು ಶರಣಾರ್ಥಿ
15. ಪರಮ ಪ್ರಸಾದಿ ಡೋಹಾರ ಕಕ್ಕಯ್ಯನವರಿಗೆ ಶರಣು, ಶರಣು ಶರಣಾರ್ಥಿ
16. ತತ್ವನಿಷ್ಠುರಿ ಅಂಬಿಗ ಚೌಡಯ್ಯನವರಿಗೆ ಶರಣು, ಶರಣು ಶರಣಾರ್ಥಿ
17. ರಾಜಯೋಗಿ ಮೋಳಿಗೆ ಮಾರಯ್ಯನವರಿಗೆ ಶರಣು, ಶರಣು ಶರಣಾರ್ಥಿ
18. ಆದರ್ಶಸತಿ ಮೋಳಿಗೆ ಮಹಾದೇವಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
19. ಅಂಗಸೋಂಕಿನ ಲಿಂಗ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
20. ಅಣತಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
21. ಅಗ್ಘವಣಿಯ ಹಂಪಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
22. ಹಡಪದ ಅಪ್ಪಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
23. ನಿಜಲಿಂಗಯೋಗಿ ಅಜಗಣ್ಣ ತಂದೆಗಳಿಗೆ ಶರಣು, ಶರಣು ಶರಣಾರ್ಥಿ
24. ಅನಾಮಿಕ ನಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
25. ಅಪ್ಪಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
26. ಅಮರ ಗುಂಡದ ಮಲ್ಲಿಕಾರ್ಜುನ ತಂದೆಗೆ ಶರಣು, ಶರಣು ಶರಣಾರ್ಥಿ

27. ಸ್ವಾಭಿಮಾನ ನಿಧಿ ಅಮುಗಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
28. ಅರಿವಿನ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
29. ಅವಸರದ ರೇಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
30. ಸೌರಾಷ್ಟ್ರದ ಆದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
31. ಆನಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
32. ಆಯ್ದಕ್ಕಿ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
33. ನಿಸ್ವಾರ್ಥಸತಿ ಆಯ್ದಕ್ಕಿ ಲಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
34. ಉಗ್ಘಡಿಸುವ ಗಬ್ಬಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
35. ಉಪ್ಪರಗುಡಿಯ ಸೋಮಿದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
36. ಮಹಾಜ್ಞಾನಿ ಉರಿಲಿಂಗದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
37. ಚಿನ್ಮಯ ಶರಣ ಉರಿಲಿಂಗಪೆದ್ದಿ ಗುರುವಿಗೆ ಶರಣು, ಶರಣು ಶರಣಾರ್ಥಿ
38. ಉಳಿಯುಮೇಶ್ವರ ಚಿಕ್ಕಣ್ಣನವರಿಗೆ ಶರಣು, ಶರಣು ಶರಣಾರ್ಥಿ
39. ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
40. ಎಲೆಗಾರ ಕಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
41. ಏಕಾಂತದ ರಾಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
42. ಏಲೇಶ್ವರದ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
43. ಒಕ್ಕಲಿಗ ಮುದ್ದಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
44. ಕಳಿಂಗದೇಶದ ಸುಜ್ಞಾನಿದೇವ ಶರಣರಿಗೆ ಶರಣು, ಶರಣು ಶರಣಾರ್ಥಿ
45. ಲಮಾಣಿ ನಾಯಕ ನನ್ನಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
46. ಗುಡ್ಡಾಪುರದ ದಾನಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
47. ವಚನಕಾರ್ತಿ ಅಕ್ಕಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
48. ಜ್ಞಾನನಿಧಿ ವೀರಸಂಗವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
49. ಉದಾರ ಹೃದಯಿ ಚಂಗಳೆ ತಾಯಿಗೆ ಶರಣು, ಶರಣು ಶರಣಾರ್ಥಿ
50. ಲಿಂಗಪ್ರಾಣಿ ಕಮಳವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
51. ಭಕ್ತಿನಿಧಿ ಶರಣೆ ಸೋಮವ್ವೆಗೆ ಶರಣು, ಶರಣು ಶರಣಾರ್ಥಿ
52. ಸದಾಚಾರ ಸಂಪನ್ನೆ ಚೊಳಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
53. ಜಂಗಮ ದಾಸೋಹಿ ನಿಂಬಿಯಕ್ಕನಿಗೆ ಶರಣು, ಶರಣು ಶರಣಾರ್ಥಿ
54. ದಾಸಿಮಯ್ಯಗಳ ಸತಿ ದುಗ್ಗಳೆಗೆ ಶರಣು, ಶರಣು ಶರಣಾರ್ಥಿ
55. ಶರಣ ಪ್ರೇಮಿ ಸುಗ್ಗಲವ್ವ ತಾಯಿಗೆ ಶರಣು, ಶರಣು ಶರಣಾರ್ಥಿ
56. ಧೀರ ಶರಣೆ ಅಮುಗೆ ರಾಯಮ್ಮ ಶರಣೆಗೆ ಶರಣು, ಶರಣು ಶರಣಾರ್ಥಿ
57. ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
58. ನಾಗಿಮಯ್ಯಗಳ ಪುಣ್ಣ ಸ್ತ್ರೀ ಮಸಣಮ್ಮನಿಗೆ ಶರಣು, ಶರಣು ಶರಣಾರ್ಥಿ
59. ಕದಿರೆಯ ಕಾಯಕದ ಶರಣೆ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
60. ಕದಿರೆ ರೆಮ್ಮವ್ವೆ ಶರಣೆಗೆ ಶರಣು, ಶರಣು ಶರಣಾರ್ಥಿ
61. ಕನ್ನಡಿ ಕಾಯಕದ ಶರಣೆ ರೇಮಮ್ಮನಿಗೆ ಶರಣು, ಶರಣು ಶರಣಾರ್ಥಿ
62. ಕಾಟಕೂಟಯ್ಯಗಳ ಪುಣ್ಯ ಸ್ತ್ರೀ ಶರಣೆ ರೇಚವ್ವೆಗೆ ಶರಣು, ಶರಣು ಶರಣಾರ್ಥಿ
63. ಕಾಲಕಣ್ಣಿಯ ಕಾಯಕದ ಶರಣೆ ತಾಯಮ್ಮನಿಗೆ ಶರಣು, ಶರಣು ಶರಣಾರ್ಥಿ
64. ಕೊಂಡೆ ಮಂಚಣ್ಣಗಳ ಪುಣ್ಣಸ್ತ್ರೀ ಲಕ್ಷ್ಮಮ್ಮನಿಗೆ ಶರಣು, ಶರಣು ಶರಣಾರ್ಥಿ
65. ಕೊಟ್ಟಣ ಕಾಯಕದ ಶರಣೆ ಸೋಮಮ್ಮನಿಗೆ ಶರಣು, ಶರಣು ಶರಣಾರ್ಥಿ
66. ಗಜೇಶ ಮಸಣಯ್ಯಗಳ ಪುಣ್ಯ ಸ್ತ್ರೀ ಶರಣೆಗೆ ಶರಣು, ಶರಣು ಶರಣಾರ್ಥಿ
67. ಗುಂಡಯ್ಯಗಳ ಪುಣ್ಯ ಸ್ತ್ರೀ ಕೇತಲದೇವಿಗೆ ಶರಣು, ಶರಣು ಶರಣಾರ್ಥಿ
68. ಡೋಹರ ಕಕ್ಕಯ್ಯನವರ ಪುಣ್ಯ ಸ್ತ್ರೀ ಭಿಷ್ಪಾದೇವಿಗೆ ಶರಣು, ಶರಣು ಶರಣಾರ್ಥಿ



69. ಶರಣೆ ಗೊಗ್ಗವ್ವೆಗೆ ಶರಣು, ಶರಣು ಶರಣಾರ್ಥಿ
70. ದಸರಯ್ಯಗಳ ಪುಣ್ಯ ಸ್ತ್ರೀ ವೀರಮ್ಮಗೆ ಶರಣು, ಶರಣು ಶರಣಾರ್ಥಿ
71. ಬತ್ತಲೇಶ್ವರಯ್ಯಗಳ ಪುಣ್ಯ ಸ್ತ್ರೀ ಗುಡ್ಡವ್ವೆಗೆ ಶರಣು, ಶರಣು ಶರಣಾರ್ಥಿ
72. ಬಾಚಿಕಾಯಕದ ಬಸವಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
73. ನಿಜ ಮುಕ್ತೆ ಶರಣೆ ಮುಕ್ತಾಯಕ್ಕಗೆ ಶರಣು, ಶರಣು ಶರಣಾರ್ಥಿ
74. ರಾಯಸದ ಮಂಚಣ್ಣಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
75. ಕಾಶ್ಮೀರದ ರಾಜಪುತ್ರಿ ಬೊಂತಾದೇವಿಗೆ ಶರಣು, ಶರಣು ಶರಣಾರ್ಥಿ
76. ರೇವಣಸಿದ್ಧಯ್ಯಗಳ ಪುಣ್ಯ ಸ್ತ್ರೀ ರೇಕಮ್ಮನಿಗೆ ಶರಣು, ಶರಣು ಶರಣಾರ್ಥಿ
77. ಧೀಮಂತ ಶರಣೆ ಸತ್ಯಕ್ಕನಿಗೆ ಶರಣು, ಶರಣು ಶರಣಾರ್ಥಿ
78. ಸಿದ್ಧಬುದ್ಧಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆಗೆ ಶರಣು, ಶರಣು ಶರಣಾರ್ಥಿ
79. ಸದಾಚಾರ ಪಥ ಹಿಡಿದ ಸೂಳೆ ಸಂಕವ್ವೆಗೆ ಶರಣು, ಶರಣು ಶರಣಾರ್ಥಿ
80. ಹಡಪದ ಅಪ್ಪಣ್ಣಗಳ ಪುಣ್ಯ ಸ್ತ್ರೀ ಲಿಂಗಮ್ಮ ತಾಯಿಗೆ ಶರಣು, ಶರಣು ಶರಣಾರ್ಥಿ
81. ಮಾರಯ್ಯಗಳ ಪುಣ್ಯ ಸ್ತ್ರೀ ಗಂಗಮ್ಮನಿಗೆ ಶರಣು, ಶರಣು ಶರಣಾರ್ಥಿ
82. ಸತ್ಯಸದಾಚಾರದ ಪಥ ಹಿಡಿದ ಮಾಯಿದೇವಿಗೆ ಶರಣು, ಶರಣು ಶರಣಾರ್ಥಿ
83. ನಾಗಲಾಂಬಿಕಾ ಪತಿ ಶಿವದೇವಯ್ಯನಿಗೆ ಶರಣು, ಶರಣು ಶರಣಾರ್ಥಿ
84. ಎಳೆವರೆಯದಲ್ಲೇ ಲಿಂಗದೊಡಗೂಡಿದ ಬಾಲ ಸಂಗಯ್ಯನಿಗೆ ಶರಣು, ಶರಣು ಶರಣಾರ್ಥಿ
85. ಕಂಬದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
86. ಕನ್ನಡಿ ಕಾಯಕದ ಅಮ್ಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
87. ಕನ್ನದ ಮಾರಿ ತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
88. ಕರುಳ ಕೇತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
89. ಕಲಕೇತ ಶರಣರಿಗೆ ಶರಣು, ಶರಣು ಶರಣಾರ್ಥಿ
90. ಕಾಮಾಟದ ಭೀಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
91. ಕಿನ್ನರಿ ಬ್ರಹ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
92. ಕೀಲಾರದ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
93. ಕೇದಾರ ಗುರು ಶರಣರಿಗೆ ಶರಣು, ಶರಣು ಶರಣಾರ್ಥಿ
94. ಕೂಗಿನ ಮಾರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
95. ಕೊಟಾರದ ಸೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
96. ಕೋಲ ಶಾಂತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
97. ಗಜೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
98. ಗಣದಾಸಿ ವೀರಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
99. ರಾಯಸದ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
100. ಗೋರಕ್ಷನಾಥ ಶರಣರಿಗೆ ಶರಣು, ಶರಣು ಶರಣಾರ್ಥಿ
101. ತೆಲಗು ಜೊಮ್ಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
102. ಶಿವಲೆಂಕ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
103. ಬೊಕ್ಕಸದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
104. ಗಾಣದ ಕನ್ನಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
105. ಗಾವುದಿ ಮಾಚಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
106. ಗುಪ್ತ ಮಂಚಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
107. ಗುರುಪುರದ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
108. ಗುರುಭಕ್ತಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
109. ಘಟ್ಟಿವಾಳಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
110. ಚಂದಿಮರಸ ಶರಣರಿಗೆ ಶರಣು, ಶರಣು ಶರಣಾರ್ಥಿ

111.ಜೇಡರ ದಾಸಿಮಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
112.ಜೋದರ ಮಾಯಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
113.ಢಕ್ಕೆಯ್ಯ ಬೊಮ್ಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
114.ಗಣಪ್ರಸಾದಿ ಡೋಹರ ಕಕ್ಕಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
115.ತಳವಾರ ಕಾಮಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
116.ತುರುಗಾಹಿ ರಾಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
117.ತೆಲುಗೇಶ ಮಸಣಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
118.ದಶಗಣ ಸಿಂಗಿದೇವಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
119.ಅಹಿಂಸಾವಾದಿ ದಸರಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
120.ದಾಸೋಹದ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
121.ನಗೆಯ ಮಾರಿತಂದೆ ಶರಣರಿಗೆ ಶರಣು, ಶರಣು ಶರಣಾರ್ಥಿ
122.ನಿಜಗುಣ ಶಿವಯೋಗಿ ಶರಣರಿಗೆ ಶರಣು, ಶರಣು ಶರಣಾರ್ಥಿ
123.ನಿವೃತ್ತಿ ಸಂಗಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
124.ನಿಜಾನುಭಾವಿ ನುಲಿಯ ಚಂದಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
125.ರೇವಣ ಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
126.ಮಲ್ಲಿಕಾರ್ಜುನ ಪಂಡಿತಾರಾಧ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
127.ಮರುಳುಸಿದ್ಧ ಶರಣರಿಗೆ ಶರಣು, ಶರಣು ಶರಣಾರ್ಥಿ
128.ಪುರದ ನಾಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
129.ಪ್ರಸಾದಿ ಭೋಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
130.ಪ್ರಸಾದಿ ಲೆಂಕ ಬಂಕಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
131.ಬಹುರೂಪಿ ಚೌಡಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
132.ಬಳ್ಳೇಶ ಮಲ್ಲಯ್ಯ ಶರಣರಿಗೆ ಶರಣು, ಶರಣು ಶರಣಾರ್ಥಿ
133.ಬಾಚಿ ಕಾಯಕದ ಬಸವಪ್ಪ ಶರಣರಿಗೆ ಶರಣು, ಶರಣು ಶರಣಾರ್ಥಿ
134.ಬಾಲಬೋಮಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
135.ವಚನಕಾರ ಬಾಲ ಸಂಗಣ್ಣ ಶರಣರಿಗೆ ಶರಣು, ಶರಣು ಶರಣಾರ್ಥಿ
